ಸಂಪುಟ: 22, ಸಂಚಿಕೆ: 38, ಪುಟಗಳು: 8, ಸೋಮವಾರ, 18 ನವೆಂಬರ್ 2024 RNI NO. KARKAN/2002/08054
epaper: www.sanjemugilu.com



ಸುದ್ದಿಗಳ ಹೊನಲು
# ಸಂಜೆ ಮುಗಿಲು
ಕನ್ನಡವೇ ಸತ್ಯ, ಕನ್ನವೇ ನಿತ್ಯ
ವೇಣು ಸಾರಥ್ಯದಲ್ಲಿ...
ಕನ್ನಡ ಪ್ರಾದೇಶಿಕ ಸಂಜೆ ದಿನಪತ್ರಿಕೆ
ಬೆಂಗಳೂರು। ಬೆಂಗಳೂರು ಗ್ರಾಮಾಂತರ। ಕೋಲಾರ। ಚಿಕ್ಕಬಳ್ಳಾಪುರ। ರಾಮನಗರ। ಮಂಡ್ಯ। ಮೈಸೂರು। ಚಾಮರಾಜನಗರ
₹3




**ಸುಭಾಷಿತ**

ಕುಲ ಕುಲವೆಂದು ಹೊಡೆದಾಡಿ ಸಾಯಬೇಡಿರಿ ಹುಚ್ಚಪ್ಪಗಳಿರಾ.. ಆತ್ಮ ಯಾವ ಕುಲ? ಜೀವ ಯಾವ ಕುಲ? ಗಾಳಿ ಯಾವ ಕುಲ? ನೀರು ಯಾವ ಕುಲ? ಅನ್ನ ಯಾವ ಕುಲ?.

ಶ್ರೀ ಕನಕದಾಸರು

**ಪಂಚಾಂಗ**

(ಸೋಮವಾರ 18, ನವೆಂಬರ್-2024)

- ಕ್ರೋಧಿನಾಮ ಸಂವತ್ಸರ, ಶರದ್ ಋತ್
- ದಕ್ಷಿಣಾಯನ, ಕಾರ್ತಿಕ ಮಾಸ
- ಕೃಷ್ಣ ತಿಥಿ, ತದಿಗೆ ಮೃಗಶಿರಾ ನಕ್ಷತ್ರ
- ರಾಹುಕಾಲ 07:45 09:12
- ಗುಳಿಕಕಾಲ 01:31 02:57
- ಯಮಗಂಡಕಾಲ 10:38 12:04

## ಸಂಕ್ಷಿಪ್ತ ಸುದ್ದಿ

### ಬೆಮಲ್ ಅಧಿಕಾರಿ ಆತ್ಮಹತ್ಯೆ

**ಮೈಸೂರು:** ಭಾರತ್ ಅರ್ಥ್ ಮೂವರ್ಸ್ ಲಿಮಿಟೆಡ್ ಅಧಿಕಾರಿ ಆತ್ಮಹತ್ಯೆ ಮಾಡಿಕೊಂಡ ಘಟನೆ ಮೈಸೂರಿನ ದಟ್ಟಗಳ್ಳಿ ಬಳಿಯ



ಕೆಇಬಿ ಸಮುದಾಯ ಭವನದಲ್ಲಿ ನಡೆದಿದೆ. ಬೆಮಲ್ ಮ್ಯಾನೇಜರ್ ಮೋಹನ್ (54) ಮಾಡಿಕೊಂಡಿದ್ದಾರೆ. ಮೈಸೂರಿನ ಬೋಗಾದಿ ಬಳಿಯ ಅಪಾರ್ಟ್ಮೆಂಟ್‌ನಲ್ಲಿದ್ದ ಮೋಹನ್ ಎಂದಿನಂತೆ ಭಾನುವಾರ ಬೆಳಿಗ್ಗೆ ಕರ್ತವ್ಯಕ್ಕೆ ತೆರಳಿದ್ದರು. ಬಳಿಕ ದಟ್ಟಗಳ್ಳಿ ಬಳಿಯ ಕೆಇಬಿ ಸಮುದಾಯ ಭವನದ ವಾಚ್‌ಮ್ಯಾನ್ ಶೆಡ್‌ನಲ್ಲಿ ಆತ್ಮಹತ್ಯೆಗೆ ಶರಣಾಗಿದ್ದಾರೆ. ಕುವೆಂಪುನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

### ಚಿರತೆ ದಾಳಿಯಿಂದ ಮಹಿಳೆ ಸಾವು

**ಬೆಂಗಳೂರು:** ಚಿರತೆ ದಾಳಿಗೆ ಮಹಿಳೆ ಬಲಿಯಾಗಿರುವ ಘಟನೆ ನೆಲಮಂಗಲ ತಾಲೂಕಿನ ಗೊಲ್ಲರಹಟ್ಟಿ ಗ್ರಾಮದಲ್ಲಿ ನಡೆದಿದೆ.



ಕರಿಯಮ್ಮ (55) ಮೃತ ಮಹಿಳೆ. ರಾತ್ರಿ ಜಾನುವಾರುಗಳಿಗೆ ಮೇವು ತರಲು ಜಮೀನಿಗೆ ತೆರಳಿದ್ದ ವೇಳೆ ಚಿರತೆ ಮಹಿಳೆಯ ಮೇಲೆ ದಾಳಿ ಮಾಡಿದೆ. ಈ ಘಟನೆಯು ಶಿವಗಂಗೆ ಬೆಟ್ಟದ ತಪ್ಪಲಿನಲ್ಲಿರುವ ಗೊಲ್ಲರಹಟ್ಟಿ ಗ್ರಾಮದಲ್ಲಿ ಘಟನೆ ಸಂಭವಿಸಿದೆ. ಗ್ರಾಮದಲ್ಲಿ ಚಿರತೆಯು ಆಗಾಗ ಕಾಣಿಸಿಕೊಂಡಿದ್ದು, ಎಚ್ಚೆತ್ತುಕೊಳ್ಳದ ಅರಣ್ಯ ಅಧಿಕಾರಿಗಳ ವಿರುದ್ಧ ಜನ ಆಕ್ರೋಶ ಹೊರಹಾಕಿದ್ದಾರೆ.

### ಡಿ.9 ರಿಂದ ಚಳಿಗಾಲದ ಅಧಿವೇಶನ!

**ಬೆಂಗಳೂರು:** ವಿಧಾನಮಂಡಲದ ಚಳಿಗಾಲದ ಅಧಿವೇಶನ ಡಿ. 9ರಿಂದ 20ರವರೆಗೆ ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ನಡೆಸಲು ರಾಜ್ಯ ಸರ್ಕಾರ ನಿರ್ಧರಿಸಿದೆ. ಅಧಿವೇಶನ ಕರೆಯುವ ಸಂಬಂಧ ರಾಜ್ಯಪಾಲ ಥಾವರ್ ಚಂದ್ ಗೆಹಲೋತ್ ಅವರಿಗೆ ಕಡತ ರವಾನಿಸಲಾಗಿದೆ ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವಾಲಯ ತಿಳಿಸಿದೆ.

ಪುಟ 2




ಪಾಸ್‌ಪೋರ್ಟ್ ಕಚೇರಿ ಮಾದರಿಯಲ್ಲಿ ತಾತ್ಕಾಲಿಕ ಆಫೀಸ್

## ಖಾಸಗಿ ಕಂಪನಿಗೆ ಇ-ಖಾತಾ ಹೊಣೆ

**ಬೆಂಗಳೂರು:** ಬಿಬಿಎಂಪಿ ವ್ಯಾಪ್ತಿಯಲ್ಲಿ ಇ-ಖಾತಾ ಮಾಡಿಸುವ ಬಗ್ಗೆ ಸದ್ಯ ಬೆಂಗಳೂರಿನ ಜನರು ತಲೆಕೆಡಿಸಿಕೊಂಡಿದ್ದಾರೆ. ಇ-ಖಾತಾ ಮಾಡಿಸಲು ಬೆಂಗಳೂರು ಒನ್ ಕೇಂದ್ರಗಳಲ್ಲಿ ಕೂಡ ಅವಕಾಶ ಕೊಡಲಾಗಿದ್ದು, 45 ರೂಪಾಯಿ ಶುಲ್ಕ ಪಾವತಿಸಿ ಇ-ಖಾತಾ ಪಡೆಯಲು ಪಾಲಿಕೆ ಅವಕಾಶ ಕೊಟ್ಟಿದೆ. ಆದರೆ, ಇದೀಗ ಇ-ಖಾತಾ ಪಡೆಯಲು ಬಂದವರಿಗೆ ಕೆಲ ಗೊಂದಲಗಳ ಜೊತೆಗೆ ಅರ್ಜಿ ಸಲ್ಲಿಸುವಾಗ ಕೆಲವು ಸಮಸ್ಯೆಗಳು ಎದುರಾಗ್ತಿರುವ ಬಗ್ಗೆ ದೂರುಗಳು ಕೇಳಿಬಂದಿವೆ. ಇತ್ತ ಬೆಂಗಳೂರು ಒನ್ ಕೇಂದ್ರದಲ್ಲಿ ಇ-ಖಾತಾ ಪಡೆಯಲು ಅವಕಾಶ ಕೊಟ್ಟರೂ ಕೂಡ ಅರ್ಜಿ ಸಲ್ಲಿಸಲು ಬರುತ್ತಿರುವವರ ಸಂಖ್ಯೆ ಹೆಚ್ಚಾಗಿರುವುದು ಬಿಬಿಎಂಪಿಗೆ ತಲೆನೋವು ತಂದಿಟ್ಟಿದೆ.

ದಿನಕ್ಕೆ ಕೇವಲ 30 - 40 ಇ-ಖಾತಾ ವಿತರಣೆ: ಸದ್ಯ ಬಿಬಿಎಂಪಿ ವ್ಯಾಪ್ತಿಯಲ್ಲಿ ಬರೋಬ್ಬರಿ 21 ಲಕ್ಷ ಆಸ್ತಿಗಳು ನೋಂದಣಿಯಾಗಿದೆ. ಆದರೆ ಇಷ್ಟೆಲ್ಲ ಆಸ್ತಿಗೆ ಇ-ಖಾತಾ ಮಾಡಿಸಲು ಸಾಕಷ್ಟು ಸಮಯ ಹಿಡಿಯುವುದರಿಂದ ಇ-ಖಾತಾ ಹೊಣೆಯನ್ನು ಖಾಸಗಿ ಕಂಪನಿಗೆ ವಹಿಸಲು ಬಿಬಿಎಂಪಿ ಚಿಂತನೆ ನಡೆಸಿದೆ. ಸದ್ಯ ಬೆಂಗಳೂರು ಒನ್ ಸೆಂಟರ್, ಪಾಲಿಕೆಯ ಕಚೇರಿಗಳಲ್ಲಿ ಇ-ಖಾತಾ ಮಾಡಿಕೊಡಲಾಗುತ್ತಿದೆ. ಇವುಗಳಲ್ಲಿ ದಿನಕ್ಕೆ ಕೇವಲ 30 ರಿಂದ 40 ಇ-ಖಾತಾ ಮಾಡಿಕೊಡಲೂ ಸಾಧ್ಯವಾಗುತ್ತಿಲ್ಲ. ಈ ಸಮಸ್ಯೆಗೆ ಪರಿಹಾರ ಕಂಡುಹಿಡಿಯಲು ಖಾಸಗಿ ಕಂಪನಿಗೆ ಇಂತಿಷ್ಟು ಹಣ ಅಂತಾ ನಿಗದಿ ಮಾಡಿ ಪ್ರತಿ ವಾರ್ಡ್‌ನಲ್ಲಿ ತಾತ್ಕಾಲಿಕ ಕಚೇರಿ ತೆರೆದು ಇ-ಖಾತಾ ಹಂಚಿಕೆಗೆ ಯೋಜನೆ ರೂಪಿಸಲಾಗುತ್ತಿದೆ. ಪಾಸ್‌ಪೋರ್ಟ್ ಕಚೇರಿ ಮಾದರಿಯಲ್ಲಿ ಖಾಸಗಿ ಕಂಪನಿ ಮೂಲಕ ಇ-ಖಾತಾ ಹಂಚಿಕೆಗೆ ತಯಾರಿ ನಡೆಸಲಾಗಿದೆ ಎಂದು ಬಿಬಿಎಂಪಿ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದ್ದಾರೆ.

ಪುಟ 2

ಸ್ನೇಹಮಯಿ ಕೃಷ್ಣರಿಂದ ಮತ್ತೊಂದು ಸಾಕ್ಷಿ ರಿಲೀಸ್!

# ಮುಡಾ ಸಂಕಷ್ಟದಲ್ಲಿ ಸಿಎಂ

**ಮೈಸೂರು:** ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ನಿವೇಶನ ಹಂಚಿಕೆಯಲ್ಲಿ ಅಕ್ರಮ ನಡೆದಿದೆ ಎನ್ನುವ ಆರೋಪ ಕೇಳಿ ಬಂದಾಗಿನಿಂದ ಮುಡಾ ಹಗರಣ ರಾಜ್ಯಾದ್ಯಂತ ಭಾರೀ ಸದ್ದು ಮಾಡುತ್ತಿದೆ. ಇದು ರಾಜ್ಯದ ಮುಖ್ಯಮಂತ್ರಿಗಳ ಸುತ್ತ ಗಿರಕಿಹೊಡೆಯುತ್ತಿದ್ದು, ಇದೀಗ ಮತ್ತೆ ಸಿದ್ದರಾಮಯ್ಯ ಅವರಿಗೆ ಸಂಕಷ್ಟು ಎದುರಾಗುವ ಸಾಧ್ಯತೆ ಇದೆ. ಹೌದು, ಸಾಮಾಜಿಕ ಹೋರಾಟಗಾರ ಸ್ನೇಹಮಯಿ ಕೃಷ್ಣ ಅವರು ಇದೀಗ ಮತ್ತೊಂದು ಸಾಕ್ಷಿಯನ್ನು ಬಹಿರಂಗಪಡಿಸಿದ್ದಾರೆ.

ಮುಡಾ 50:50 ಹಗರಣ ವಿಚಾರಕ್ಕೆ ಸಂಬಂಧಸಿದಂತೆ ಸಿಎಂ ಸಿದ್ದರಾಮಯ್ಯ ವಿರುದ್ಧ ಸ್ನೇಹಮಯಿ ಕೃಷ್ಣ ಅವರು ಮತ್ತೊಂದು ಸಾಕ್ಷಿ ಬಿಡುಗಡೆ ಮಾಡಿದ್ದಾರೆ. ಈ ಬಗ್ಗೆ ಸಾಮಾಜಿ ಮಾಧ್ಯಮದಲ್ಲಿ ಪೋಸ್ಟ್ ಮಾಡಿರುವ ಅವರು, ಮುಡಾ ಹಗರಣದಲ್ಲಿ ಸಿದ್ದರಾಮಯ್ಯ ಪ್ರಭಾವ ಬೀರಿಲ್ಲ ಎಂಬುದು ಸುಳ್ಳು, ಜಮೀನನ್ನು ವ್ಯವಸಾಯೇತರ ಉದ್ದೇಶಗಳಿಗೆ ಭೂ ಪರಿವರ್ತನೆ ಪಡೆಯುದಕ್ಕೆ ಬಳಸಲು ಬರುವುದಿಲ್ಲ ಎಂದು ಪ್ರಾಧಿಕಾರದ ನಗರ ಯೋಜನಾ ಸದಸ್ಯರು ಸ್ಪಷ್ಟವಾಗಿ ತಿಳಿಸಿದ್ದಾರೆ. ಅನ್ಯಕ್ರಾಂತ ಆದೇಶದಲ್ಲಿ ಜಮೀನು ಬಳಸಬಾರದು ಎಂಬುದನ್ನು, ಪತ್ರವನ್ನು ಬಳಸಬಾರದು ಎಂಬಂತೆ ಉಲ್ಲೇಖಿಸಿ ಅನ್ಯಕ್ರಾಂತ ಆದೇಶ ಮಾಡಿದ್ದಾರೆ. ಜಮೀನುಗೂ, ಪತ್ರಕ್ಕೂ ವ್ಯತ್ಯಾಸ ಗೊತ್ತಿಲ್ಲದೆ ಆದೇಶ ಮಾಡಿರುವ ಅಂದಿನ ಡಿಸಿ ಇಂದು ಕಾಂಗ್ರೆಸ್ ಸಂಸದರಾಗಿದ್ದಾರೆ ಎಂದು ಹೇಳಿದ್ದಾರೆ.



**ಮೇಲ್ಮನವಿ ವಿಚಾರಣೆ 23ಕ್ಕೆ ನಿಗದಿ**

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ನಿವೇಶನ ಹಂಚಿಕೆಗೆ ಸಂಬಂಧಿಸಿದ ಕ್ರಿಮಿನಲ್ ಪ್ರಕರಣದ ತನಿಖೆ ನಡೆಸಲು ಅನುಮತಿ ನೀಡಿದ್ದ ರಾಜ್ಯಪಾಲರ ಆದೇಶ ಎತ್ತಿ ಹಿಡಿದಿದ್ದ ಏಕಸದಸ್ಯ ಪೀಠದ ತೀರ್ಪು ಪ್ರಶ್ನಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸಲ್ಲಿಸಿರುವ ಮೇಲ್ಮನವಿ ವಿಚಾರಣೆಯನ್ನು ಹೈಕೋರ್ಟ್ ಇದೇ 23 ಕ್ಕೆ ನಿಗದಿಪಡಿಸಿದೆ.

## ರುದ್ರೇಶ್ ಸಾವು ಪ್ರಕರಣಕ್ಕೆ ಬಿಗ್ ಟ್ವಿಸ್ಟ್

### ಆತ್ಮಹತ್ಯೆಯಲ್ಲ ಕೊಲೆ ಎಂದು ಬಂತು ಅನಾಮಧೇಯ ಪತ್ರ!

**ಬೆಳಗಾವಿ:** ಬೆಳಗಾವಿ ತಹಶಿಲ್ದಾರ್ ಕಚೇರಿಯಲ್ಲಿ ಎಸ್‌ಡಿಎ ರುದ್ರೇಶ್ (ರುದ್ರಣ್ಣ ಯಡವಣ್ಣವರ) ಆತ್ಮಹತ್ಯೆ ಪ್ರಕರಣಕ್ಕೆ ಇದೀಗ ದೊಡ್ಡ ತಿರುವು ದೊರೆಯುವ ಸುಳಿವು ದೊರೆತಿದೆ. 'ರುದ್ರೇಶ್ ಆತ್ಮಹತ್ಯೆ ಮಾಡಿಕೊಂಡಿಲ್ಲ ಕೊಲೆ' ಎಂಬ ಒಕ್ಕಣೆಯುಳ್ಳ ಅನಾಮಧೇಯ ಪತ್ರವೊಂದು ರಾಜ್ಯಪಾಲರು, ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರು, ನಗರ ಪೊಲೀಸ್ ಆಯುಕ್ತರು, ಜಿಲ್ಲಾಧಿಕಾರಿ, ಪ್ರಕರಣದ ತನಿಖಾಧಿಕಾರಿ ಸೇರಿ ಹಲವರಿಗೆ ಬಂದಿದ್ದು ತೀವ್ರ ಕುತೂಹಲಕ್ಕೆ ಕಾರಣವಾಗಿದೆ.

ಪ್ರಕರಣದ ಎ1 ತಹಶಿಲ್ದಾರ ಬಸವರಾಜ ನಾಗರಾಳ, ಎ2 ಅಶೋಕ ಕಬ್ಬಲಿಗೇರ್, ಎ3 ಹೆಬ್ಬಾಳ್ಕರ್ ಪಿಎ ಸೋಮುಗೆ ಜಾಮೀನು ಸಿಕ್ಕ ಕೆಲವೇ ದಿನಗಳಲ್ಲಿ ಈ ಪತ್ರ ಬಂದಿರುವುದು ಗೊತ್ತಾಗಿದೆ. ಅಂಚೆ ಮೂಲಕ ಅನಾಮಧೇಯ ವ್ಯಕ್ತಿಯ ಪತ್ರ ಬಂದಿದೆ.



## 240 ನರ್ಸಿಂಗ್ ವಿದ್ಯಾರ್ಥಿಗಳಿಗೆ ಒಂದೇ ಕೊಠಡಿಯಲ್ಲಿ ಪಾಠ!

**ಚಿತ್ರದುರ್ಗ:** ಸರ್ಕಾರಿ ಕಾಲೇಜಲ್ಲಿ ಸೀಟು ಸಿಕ್ಕರೆ ಎಲ್ಲಾ ಉಚಿತ ಅನ್ನೋ ಮಾತಿದೆ. ಆದರೆ ಚಿತ್ರದುರ್ಗದ ಸರ್ಕಾರಿ ಬಿಎಸ್ಸಿ ನರ್ಸಿಂಗ್ ವಿದ್ಯಾರ್ಥಿಗಳಿಗೆ ಪಾಠ ಕೇಳಲು ಕಟ್ಟಡವೇ ಇಲ್ಲ. ಹೀಗಾಗಿ ಇಷ್ಟಪಟ್ಟು ನರ್ಸಿಂಗ್ ಮಾಡಲು ಬಂದ ವಿದ್ಯಾರ್ಥಿಗಳು ಕಿಷ್ಕಿಂದೆಯಂತಹ ಕೊಠಡಿಯಲ್ಲಿ ಹರಸಾಹಸಪಟ್ಟು ಓದೋದೇ ದೊಡ್ಡ ಸವಾಲಾಗಿದೆ.

ಚಿತ್ರದುರ್ಗ ಜಿಲ್ಲಾಸ್ಪತ್ರೆ ಆವರಣದಲ್ಲಿರುವ ಬಿಎಸ್ಸಿ ನರ್ಸಿಂಗ್ ಕಾಲೇಜಲ್ಲಿ ಕಳೆದ ಮೂರು ವರ್ಷಗಳಿಂದಲೂ ಸೂಕ್ತ ಮೂಲಭೂತ ಸೌಕರ್ಯಗಳಿಲ್ಲ. ಸುಸಜ್ಜಿತ ಕಟ್ಟಡ, ಕೊಠಡಿ, ಲ್ಯಾಬ್ ವ್ಯವಸ್ಥೆಯೂ ಇಲ್ಲ. ಬಿಎಸ್‌ಸಿ ನರ್ಸಿಂಗ್ ಹಾಗೂ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಒಂದೇ ಕಟ್ಟಡದಲ್ಲಿ ನಡೆಯುತ್ತಿದೆ. ಸುಮಾರು 240 ವಿದ್ಯಾರ್ಥಿಗಳು ಒಂದೇ ಕೊಠಡಿಯೊಳಗೆ ಕುಳಿತು ಪಾಠ ಕೇಳುತ್ತಿದ್ದಾರೆ.

ಪುಟ 2



ರಷ್ಯಾ ಮೇಲೆ ಕ್ಷಿಪಣಿ ದಾಳಿಗೆ ಅಮೆರಿಕ ಒಪ್ಪಿಗೆ

## ಉಕ್ರೇನ್‌ಗೆ ಜೋ ಬೈಡನ್ ಬಲ

**ವಾಷಿಂಗ್ಟನ್:** ರಷ್ಯಾ-ಉಕ್ರೇನ್ ಯುದ್ಧವನ್ನು ನಿಲ್ಲಿಸುತ್ತೇನೆ ಎಂದು ನಿಯೋಜಿತ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದರೂ ಈಗ ಯದ್ಧ ಮತ್ತಷ್ಟು ತೀವ್ರಗೊಳ್ಳುತ್ತಾ ಎಂಬ ಪ್ರಶ್ನೆ ಈಗ ಸೃಷ್ಟಿಯಾಗಿದೆ.

ಇನ್ನೆರಡು ತಿಂಗಳು ಅಧಿಕಾರದಲ್ಲಿರುವ ಅಮೆರಿಕದ ಅಧ್ಯಕ್ಷ ಜೋ ಬೈಡನ್ ಅವರು ರಷ್ಯಾ ವಿರುದ್ಧ ಯುದ್ಧ ಮಾಡುವಂತೆ ಉಕ್ರೇನ್‌ಗೆ ಅನುಮತಿ ನೀಡಿದ್ದಾರೆ ಎಂದು ವರದಿಯಾಗಿದೆ. ಈ ಹಿಂದೆ ಅಮೆರಿಕ ಉಕ್ರೇನ್‌ಗೆ ದೂರ ಸಾಗಬಲ್ಲ ಕ್ಷಿಪಣಿಯನ್ನು ನೀಡಿತ್ತು. ಆದರೆ ಈ ಕ್ಷಿಪಣಿಯ ಬಳಕೆಗೆ ನಿರ್ಬಂಧ ಹೇರಿತ್ತು.

ಎರಡು ತಿಂಗಳು ಅಧಿಕಾರದಲ್ಲಿರುವ ಜೋ ಬೈಡೆನ್ ಸರ್ಕಾರ ಕೊನೆ ಗಳಿಗೆಯಲ್ಲಿ ಈ ನಿರ್ಬಂಧವನ್ನು ತೆಗೆದುಹಾಕಿದೆ. ಮುಂಬರುವ ದಿನಗಳಲ್ಲಿ ಉಕ್ರೇನ್ ತನ್ನ ಮೊದಲ ದೀರ್ಘ-ಶ್ರೇಣಿಯ ದಾಳಿಯನ್ನು ನಡೆಸಲು ಯೋಜಿಸಿದೆ ಎಂದು ವರದಿಯಾಗಿದೆ. ಉತ್ತರ ಕೊರಿಯಾದ ಪಡೆಗಳನ್ನು ರಷ್ಯಾ ನಿಯೋಜಿಸಿದ ಬೆನ್ನಲ್ಲೇ ಈ ಮಹತ್ವದ ವಿದ್ಯಮಾನ ನಡೆದಿದೆ.

ಪುಟ 2



12 ಜನ, ಇತರೆ ಪಿಡಿಒ ಪರೀಕ್ಷಾರ್ಥಿಗಳ ವಿರುದ್ಧ ಎಫ್‌ಐಆರ್ ದಾಖಲು

## ಪಿಡಿಒ ಪ್ರಶ್ನೆಪತ್ರಿಕೆ ಸೋರಿಕೆ ಪ್ರತಿಭಟನೆ

**ರಾಯಚೂರು:** ಪಿಡಿಒ ಪ್ರಶ್ನೆಪತ್ರಿಕೆ ಸೋರಿಕೆ ಪ್ರತಿಭಟನೆಯಲ್ಲಿ 12 ಜನ ಹಾಗೂ ಇತರೆ ಪಿಡಿಒ ಪರೀಕ್ಷಾರ್ಥಿಗಳ ವಿರುದ್ಧ ಸಿಂಧನೂರು ನಗರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ರಾಯಚೂರಿನ ಸಿಂಧನೂರಿನ ಸರ್ಕಾರಿ ಪದವಿ ಕಾಲೇಜು ಪರೀಕ್ಷಾ ಕೇಂದ್ರದಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಹುದ್ದೆ ಪರೀಕ್ಷೆಯಲ್ಲಿ ಅಕ್ರಮ, ಪೇಪರ್ ಲೀಕ್ ಆರೋಪಿಸಿ ಪರೀಕ್ಷೆ ಬಹಿಷ್ಕರಿಸಿ ನಿನ್ನೆ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದ್ದರು. ಈ ಬಗ್ಗೆ ಪರೀಕ್ಷಾ ಮೇಲ್ವಿಚಾರಕ ಬಸವರಾಜ ತಡಕಲ್ ದೂರು ನೀಡಿದ್ದು, ಪರೀಕ್ಷಾರ್ಥಿಗಳ ವಿರುದ್ಧ ಸಿಂಧನೂರು ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಬಹುತೇಕ ಯಾದಗಿರಿ ಜಿಲ್ಲೆಯ ಪರೀಕ್ಷಾರ್ಥಿಗಳ ಮೇಲೆ ಪ್ರಕರಣ ದಾಖಲಾಗಿದ್ದು, ಪೊಲೀಸರು ಓರ್ವ ಪರೀಕ್ಷಾರ್ಥಿಯನ್ನ ವಶಕ್ಕೆ ಪಡೆದು ಸ್ಟೇಷನ್ ಬೇಲ್ ಮೇಲೆ ಬಿಟ್ಟಿದ್ದಾರೆ.

ಪ್ರಶ್ನೆ ಪತ್ರಿಕೆ ಲೀಕ್ ಮಾಡಿದ್ದೀರಿ ಎಂದು ತಪ್ಪು ಭಾವಿಸಿ ಅನಗತ್ಯ ಗೊಂದಲ ಸೃಷ್ಟಿಸಲಾಗಿದೆ. ಪರೀಕ್ಷಾ ವೀಕ್ಷಕರೊಂದಿಗೆ ವಾಗ್ವಾದ ಮಾಡಿ, ಪರೀಕ್ಷಾ



ನಿಯಮಗಳ ಉಲ್ಲಂಘನೆ ಮಾಡಿದ್ದಾರೆ. ಪರೀಕ್ಷೆ ಬರೆಯಲು ಕುಳಿತಿದ್ದ ವಿದ್ಯಾರ್ಥಿಗಳಿಗೆ ಪ್ರಚೋದನೆ ನೀಡಿದ್ದಾರೆ. ಇತರ ಪರೀಕ್ಷಾರ್ಥಿಗಳು ಕೊಠಡಿಗಳಿಂದ ಹೊರ ಬರುವಂತೆ ಮಾಡಿ, ರಸ್ತೆಗಿಳಿದು ಪ್ರತಿಭಟನೆ ಮಾಡಿದ್ದಾರೆ. ಅನಗತ್ಯ ಗೊಂದಲ ಸೃಷ್ಟಿಸಿ ಇತರ ಪರೀಕ್ಷಾರ್ಥಿಗಳನ್ನ ಹೊರಗೆ ಕರೆದೊಯ್ಯಲಾಗಿದೆ. ಸುಳ್ಳು ಸುದ್ದಿ ಹರಡಿ ಕಾಲೇಜಿನ ಮುಂದುಗಡೆ ಗಲಾಟೆ ಮಾಡಿದ್ದಾರೆ ಎಂಬ ಆರೋಪದ ಹಿನ್ನೆಲೆ, ಕೊಠಡಿ ಸಂಖ್ಯೆ 05ರಲ್ಲಿ ಗೊಂದಲ ಸೃಷ್ಟಿಸಿ ಗಲಾಟೆ ಮಾಡಿದ ಪರೀಕ್ಷಾರ್ಥಿ ಕಾಶಿಪತಿಯನ್ನ ವಶಕ್ಕೆ ಪಡೆದು, ಸ್ಟೇಷನ್ ಬೇಲ್ ಮೇಲೆ ಬಿಡುಗಡೆ ಮಾಡಿದ್ದಾರೆ. ಬಾಬು, ಅಯ್ಯನಗೌಡ, ಅಮಿತ್, ವೆಂಕಟೇಶ್ ಸೇರಿ 12 ಜನ ಹಾಗೂ ಇತರರ ವಿರುದ್ಧ ಪ್ರಕರಣ ದಾಖಲಾಗಿದೆ.

ಗ್ರಾಮೀಣಾಭಿವೃದ್ಧಿ ಇಲಾಖೆಯ ಕಲ್ಯಾಣ ಕರ್ನಾಟಕ ವೃಂದದ 97 (ಪಿಡಿಒ) ಹುದ್ದೆಗಳ ನೇಮಕಾತಿಗೆ ಕರ್ನಾಟಕ ಲೋಕಸೇವಾ ಆಯೋಗ ಸಿದ್ದಪಡಿಸಲಾಗಿದ್ದ ಪ್ರಶ್ನೆ ಪತ್ರಿಕೆ ಸೋರಿಕೆ ಆಗಿದ್ಯಾ ಎಂಬ ಗಂಭೀರ ಪ್ರಶ್ನೆ ಎದ್ದಿದೆ.

ಇನ್ನೂ ಬಳ್ಳಾರಿಗೆ ಮುಖ ಮಾಡದ ಜಮೀರ್

## ಒಂದೇ ದಿನ ಮೂವರು ಗರ್ಭಿಣಿಯರು ಸಾವು

**ಬಳ್ಳಾರಿ:** ಜಿಲ್ಲಾಸ್ಪತ್ರೆಯಲ್ಲಿ ಮೂವರು ಬಾಣಂತಿಯರ ಸರಣಿ ಸಾವು ಇಡೀ ಜಿಲ್ಲೆಯ ಜನರ ನಿದ್ದೆಗೆಡಿಸಿದೆ. ಅಷ್ಟೇ ಅಲ್ಲದೇ ಸರ್ಕಾರಿ ಆಸ್ಪತ್ರೆಗಳ ಮೇಲಿನ ನಂಬಿಕೆ ಕಳೆದುಕೊಳ್ಳುವಂತೆ ಮಾಡಿದೆ. ದೊಡ್ಡ ದುರಂತ ನಡೆದರೂ ಇನ್ನೂ ಉಸ್ತುವಾರಿ ಸಚಿವ ಜಮೀರ್ ಅಹ್ಮದ್ ಖಾನ್ ಜಿಲ್ಲೆಯ ಕಡೆ ಮುಖ ಮಾಡಿಲ್ಲ.

ನ.9 ರಂದು ಹೆರಿಗೆಗೆ ಬಂದಿದ್ದ ಏಳು ಗರ್ಭಿಣಿಯರು ಬಳ್ಳಾರಿ ಜಿಲ್ಲಾ ಆಸ್ಪತ್ರೆಯಲ್ಲಿ ಸಿಸೇರಿಯನ್‌ಗೆ ಒಳಗಾಗಿದ್ದರು. ನ.10 ರಂದು ನಂದಿನಿ ಮತ್ತು ಲಲಿತಮ್ಮ ಸಾವನ್ನಪ್ಪಿದ್ದರೆ ನ.13 ರಂದು ರೋಜಮ್ಮ ಮೃತಪಟ್ಟಿದ್ದರು. ಉಳಿದ ನಾಲ್ವರು ಬಾಣಂತಿಯರು ಬಿಮ್ಸ್ ಆಸ್ಪತ್ರೆಯಲ್ಲಿ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.





**ಸಾವಿಗೆ ಕಾರಣ ಏನು?**

**ಮೂವರು ತಾಯಂದಿರ ಸಾವಿಗೆ ಅಸಲಿ ಕಾರಣ ಇನ್ನೂ ತಿಳಿದು ಬಾರದೇ ಇದ್ದರೂ ಮೇಲ್ನೋಟಕ್ಕೆ ಇದು ಮೆಡಿಕಲ್ ರಿಯಾಕ್ಷನ್ ಎನ್ನುವ ಅನುಮಾನ ಶುರುವಾಗಿದೆ. ಮೂವರ ಸಾವಿಗೆ ಐವಿ ಫ್ಲೂಯಿಡ್ ಔಷಧಿಯೇ ಕಾರಣ ಎಂಬ ಸಂಶಯ ವ್ಯಕ್ತವಾಗುತ್ತಿದೆ. ಯಾಕೆಂದರೆ ಸಿಸೇರಿಯನ್ ಬಳಿಕ ವೈದ್ಯರು ಐವಿ ಫ್ಲೂಯಿಡ್ ಹಾಗೂ ಎನ್‌ಎಸ್‌ಎಲ್ ಗ್ಲುಕೋಸ್ ಹಾಕಿದ್ದರು. ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮ ಕಳುಹಿಸಿದ್ದ ಗ್ಲುಕೋಸ್‌ಗಳನ್ನು ನ. 9 ರಂದು ಹಾಕಲಾಗಿತ್ತು. ಆ ಬಳಿಕ ಬಾಣಂತಿಯರ ಆರೋಗ್ಯದಲ್ಲಿ ಏಕಾಏಕಿ ಏರುಪೇರಾಗಿ ನ.10 ರಂದು ನಂದಿನಿ ಹಾಗೂ ಲಲಿತಮ್ಮ ಮೃತಪಟ್ಟಿದ್ದರು. ಕೂಡಲೇ ಇನ್ನುಳಿದ ಐದು ಬಾಣಂತಿಯರನ್ನು ಬಿಮ್ಸ್‌ಗೆ ರವಾನೆ ಮಾಡಲಾಗಿತ್ತು.**

## 19ರಂದು ನಗರದಲ್ಲಿ ಮಾದಕ ವ್ಯಸನ ಅರಿವು ಕಾರ್ಯಕ್ರಮ

**ಚಾಮರಾಜನಗರ:** ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ನೆಹರು ಯುವ ಕೇಂದ್ರ, ಜೈ ಭುವನೇಶ್ವರಿ ಕನ್ನಡ ಯುವ ವೇದಿಕೆ ಹಾಗೂ ಜೆ.ಎಸ್.ಎಸ್ ಸ್ಕೂಲ್ ಆಫ್ ನರ್ಸಿಂಗ್ ಇವರ ಸಹಯೋಗದಲ್ಲಿ ಮಾದಕ ವಸ್ತು ವಿರೋಧಿ ದಿನಾಚರಣೆ ಅಂಗವಾಗಿ ಮಾದಕ ವ್ಯಸನದ ಅರಿವು ಕಾರ್ಯಕ್ರಮವನ್ನು ನವೆಂಬರ್ 19ರಂದು ಬೆಳಿಗ್ಗೆ 11 ಗಂಟೆಗೆ ನಗರದ ಜೆ.ಎಸ್.ಎಸ್ ಗ್ರಂಥಾಲಯದ ಪಕ್ಕದಲ್ಲಿರುವ ಜೆ.ಎಸ್.ಎಸ್ ಸ್ಕೂಲ್ ಆಫ್ ನರ್ಸಿಂಗ್ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ. ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಯವರಾದ ಈಶ್ವರ್ ಅವರು ಕಾರ್ಯಕ್ರಮ ಉದ್ಘಾಟಿಸುವರು. ಜೆ.ಎಸ್.ಎಸ್ ಸ್ಕೂಲ್ ಆಫ್ ನರ್ಸಿಂಗ್ ನ ಪ್ರಾಂಶುಪಾಲರಾದ ಜಿ. ವಿನಯಕುಮಾರ್ ಅವರು ಅಧ್ಯಕ್ಷತೆ ವಹಿಸುವರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಟಿ ಕವಿತಾ, ಜಿಲ್ಲಾ ಸರ್ಕಾರಿ ಆಸ್ಪತ್ರೆಯ ಡಾ. ಕೆ.ಬಿ ಅಭಿಷೇಕ್, ಜೈ ಭುವನೇಶ್ವರಿ ಕನ್ನಡ ಯುವ ವೇದಿಕೆ ಅಧ್ಯಕ್ಷರಾದ ಜಿ. ಬಂಗಾರು, ನೆಹರು ಯುವ ಕೇಂದ್ರದ ಜಿಲ್ಲಾ ಯುವಜನ ಅಧಿಕಾರಿ ಅಭಿಷೇಕ್ ಚವರೆ ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು ಎಂದು ತಿಳಿಸಿದೆ. ವಿದ್ಯಾರ್ಥಿನಿಲಯದ ಸುಧಾಮಣಿ, ನಾಗೇಂದ್ರ, ಮಮತಾ, ಸುಚಿತ್ರ ಇತರರು ಹಾಜರಿದ್ದರು.

## ಬಯಲು ಶೌಚಮುಕ್ತ ವಾರ್ಡ್ ಘೋಷಿಸಲು ಆಕ್ಷೇಪಣೆ ಸಲ್ಲಿಸಿ

**ಚಾಮರಾಜನಗರ:** ಚಾಮರಾಜನಗರ ನಗರಸಭೆ ವ್ಯಾಪ್ತಿಯ 31 ವಾರ್ಡ್‌ಗಳನ್ನು ಬಯಲು ಶೌಚಮುಕ್ತ ವಾಡ್ ್ಗಳನ್ನಾಗಿ ಘೋಷಿಸಲು ಸಾರ್ವಜನಿಕರಿಂದ ಆಕ್ಷೇಪಣೆ ಮತ್ತು ಪ್ರತಿಕ್ರಿಯೆಗಳಿದ್ದಲ್ಲಿ ಸಲ್ಲಿಸುವಂತೆ ನಗರಸಭೆ ತಿಳಿಸಿದೆ. ಸ್ವಚ್ಛ ಭಾರತ್ ಮಿಷನ್ ಯೋಜನೆಯ ಅಂಗವಾಗಿ ನಗರಸಭೆ ವ್ಯಾಪ್ತಿಯಲ್ಲಿ ಬಯಲು ಶೌಚಮುಕ್ತ ವಾಡ್ ್ಗಳನ್ನಾಗಿ ಘೋಷಿಸಲು ಇದುವರೆವಿಗೆ 2048 ವೈಯಕ್ತಿಕ ಶೌಚಾಲಯಗಳನ್ನು ಸಾರ್ವಜನಿಕರು ನಿರ್ಮಿಸಿಕೊಂಡಿರುತ್ತಾರೆ. ಬಯಲಿನಲ್ಲಿ ಶೌಚ ಮಾಡುವ ಪ್ರದೇಶಗಳನ್ನು ಗುರುತಿಸಿ ಸಮುದಾಯ ಶೌಚಾಲಯಗಳನ್ನು ನಿರ್ಮಿಸಲಾಗಿದೆ. ಬಯಲು ಶೌಚ ಮಾಡದಂತೆ ಆಟೋ ಮೂಲಕ ಪ್ರಚಾರ ಮಾಡಲಾಗಿದ್ದು, ಸ್ವಸಹಾಯ ಸಂಘದವರಿಗೆ ಅರಿವು ಮೂಡಿಸಲಾಗಿದೆ. ಶಾಲಾ ಕಾಲೇಜುಗಳಿಗೆ ಸ್ವಯಂ ಸೇವಕರ ಮೂಲಕ ಶೌಚಾಲಯಗಳ ಸಮರ್ಪಕ ಬಳಕೆ ಮಾಡಲು ತಿಳಿಸಲಾಗಿದೆ. ಈ ನಿಟ್ಟಿನಲ್ಲಿ ನಗರಸಭೆಯ 31 ವಾರ್ಡ್‌ಗಳನ್ನು ಬಯಲು ಶೌಚ ಮುಕ್ತ ವಾರ್ಡ್‌ಗಳೆಂದು ಘೋಷಿಸಲು ಹಾಗೂ ಇದರ ಬಗ್ಗೆ ಸಾರ್ವಜನಿಕರಿಂದ ಆಕ್ಷೇಪಣೆ ಮತ್ತು ಪ್ರತಿಕ್ರಿಯೆಗಳಿದ್ದಲ್ಲಿ ನವೆಂಬರ್ 20ರೊಳಗಾಗಿ ಲಿಖಿತವಾಗಿ ನಗರಸಭೆ ಕಚೇರಿಗೆ ಸಲ್ಲಿಸುವಂತೆ ಪೌರಾಯುಕ್ತರು ತಿಳಿಸಿದ್ದಾರೆ.

## ಸಾಕು ಪ್ರಾಣಿಗಳನ್ನು ರಸ್ತೆಗೆ ಬಿಡದಂತೆ ನಗರಸಭೆ ಸೂಚನೆ

**ಚಾಮರಾಜನಗರ:** ನಗರಸಭೆ ವ್ಯಾಪ್ತಿಯಲ್ಲಿ ಬಿಡಾಡಿ ದನಗಳು, ಮೇಕೆಗಳು, ಕುದುರೆಗಳು ಹಾಗೂ ಇತರೆ ಸಾಕು ಪ್ರಾಣಿಗಳನ್ನು ರಸ್ತೆಗೆ ಬಿಡದಂತೆ ಮಾಲೀಕರಿಗೆ ನಗರಸಭೆ ಸೂಚಿಸಿದೆ.

ಪಟ್ಟಣದ ಪ್ರಮುಖ ವೃತ್ತಗಳಲ್ಲಿ ಬಿಡಾದಿ ದನಗಳು, ಮೇಕೆಗಳು, ಕುದುರೆಗಳು ಹಾಗೂ ಇತರೆ ಸಾಕು ಪ್ರಾಣಿಗಳು ಅಡ್ಡಾಡುತ್ತಿರುವುದರಿಂದ ಸಾರ್ವಜನಿಕರ ಓಡಾಡಕ್ಕೆ, ವಾಹನ ಸಂಚಾರಕ್ಕೆ ಅಡ್ಡಿಯಾಗಿ ಅಪಘಾತ ಸಂಭವಿಸುತ್ತಿದ್ದು. ಹೆಚ್ಚಾಗಿ ಜನಸಂದಣಿ ಇರುವ ಪಚ್ಚಪ್ಪ ವೃತ್ತ ಮತ್ತು ಸಂತೇಮರಹಳ್ಳಿ ವೃತ್ತದ ರಸ್ತೆಯಲ್ಲಿ ಪ್ರಾಣಿಗಳು ದಿನದ ಎಲ್ಲಾ ವೇಳೆಯಲ್ಲಿಯೂ ವಾಸ್ತವ್ಯ ಹೂಡುತ್ತಿರುವುದು ಕಂಡುಬಂದಿದೆ. ಮಾಲೀಕರು ಸಾಕುಪ್ರಾಣಿಗಳನ್ನು ರಸ್ತೆಗೆ ಬಿಡದೇ ತಮ್ಮ ಮನೆಯ ಆವರಣದಲ್ಲಿ ಸಾಕಬೇಕು. ತಪ್ಪಿದಲ್ಲಿ ರಸ್ತೆಗೆ ಬರುವ ಸಾಕುಪ್ರಾಣಿಗಳನ್ನು ನಗರಸಭೆವತಿಯಿಂದ ಸೆರೆಹಿಡಿದು ಮೈಸೂರಿನ ಪಿಂಜರಪೋಲ್‌ಗೆ ಕಳುಹಿಸಲಾಗುವುದೆಂದು ನಗರಸಭೆಯ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ವಿದ್ಯುತ್ ಸಂಬಂಧಿತ ಸಮಸ್ಯೆಗಳಿಗೆ ಸಹಾಯವಾಣಿ

**ಚಾಮರಾಜನಗರ:** ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ಚಾಮರಾಜನಗರ ಉಪವಿಭಾಗದ ಅಧೀನದಲ್ಲಿ 4 ಶಾಖಾ ಕಚೇರಿಗಳು ಕಾರ್ಯನಿರ್ವಹಿಸುತ್ತಿದ್ದು, ಚಾಮರಾಜನಗರ ವಿಭಾಗ ವ್ಯಾಪ್ತಿಯ ಅಪಾಯಕಾರಿ ಸ್ಥಿತಿಯಲ್ಲಿರುವ ಸ್ಥಳಗಳನ್ನು ಗುರುತಿಸಿ ಸರಿಪಡಿಸುವ ಕಾರ್ಯ ಪ್ರಗತಿಯಲಿದೆ. ಗ್ರಾಹಕರು, ಸಾರ್ವಜನಿಕರ ಕುಂದುಕೊರತೆ, ಅಹವಾಲುಗಳನ್ನು ಬಗೆಹರಿಸಲು ಪ್ರತಿ ಉಪವಿಭಾಗಕ್ಕೆ ಒಂದರಂತೆ ದಿನದ 24 ದೂರು ನಿರ್ವಹಣಾ ಕೇಂದ್ರ, ಶಾಖಾ ಕಚೇರಿಗಳಿದ್ದು, ಆಯಾ ಗ್ರಾಮ ಅಥವಾ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸಂಬಂಧಿತ ಅಪಾಯಕಾರಿ ಸ್ಥಿತಿಯಲ್ಲಿರುವ ಸ್ಥಳಗಳು ಕಂಡುಬಂದಲ್ಲಿ ಹಾಗೂ ವಿದ್ಯುತ್ ಸಂಬಂಧಿತ ಯಾವುದೇ ಸಮಸ್ಯೆಗಳಿದ್ದಲ್ಲಿ ಸಂಬಂಧಪಟ್ಟ ಕಚೇರಿಯ ಶಾಖಾಧಿಕಾರಿಗಳ ದೂರವಾಣಿ ಸಂಖ್ಯೆಗೆ ಕರೆಮಾಡಿ ಪರಿಹರಿಸಿಕೊಳ್ಳಬಹುದು. ದೂರು ನಿರ್ವಹಣಾ ಕೇಂದ್ರದ ಶಾಖಾ ಕಚೇರಿಯ ದೂ.ಸಂ 08226-225038, 9449598686, 944959866 ಚಾಮರಾಜನಗರ ಶಾಖಾ ಕಚೇರಿಯ ಮೊ.ಸಂ 9448994867, ರಾಮಸಮುದ್ರ ಶಾಖಾ ಕಚೇರಿಯ ಮೊ.ಸಂ 9448499918, ಮಾದಾಪುರ ಶಾಖಾ ಕಚೇರಿಯ ಮೊ.ಸಂ 9448994868, ಹಾಗೂ ಬದನಗುಪ್ಪೆ ಶಾಖಾ ಕಚೇರಿಯ ಮೊ.ಸಂ 9480810364, ಅನ್ನು ಸಂಪರ್ಕಿಸಬಹುದು. ಹೆಚ್ಚಿನ ವಿದ್ಯುತ್ ಸಮಸ್ಯೆಗಳಿಗೆ ಚಾ.ವಿ.ಸ.ನಿ.ನಿ ದ ಕೇಂದ್ರೀಯ ದೂರು ನಿರ್ವಹಣಾ ಘಟಕದ ದೂ.ಸಂ 1912 ಅಥವಾ ಮೊ.ಸಂ 9448991912 ಸಂಪರ್ಕಿಸಿ.

# ಕನಕ ಗೌರವ, ಕನಕ ಯುವ ಪುರಸ್ಕಾರಕ್ಕೆ ಹಲವರ ಆಯ್ಕೆ

**ಬೆಂಗಳೂರು:** ಸಂತಕವಿ ಕನಕದಾಸ ಮತ್ತು ತತ್ವಪದ ಅಧ್ಯಯನ ಕೇಂದ್ರದಿಂದ ವಾರ್ಷಿಕವಾಗಿ ಕೊಡಮಾಡುವ ಕನಕ ಗೌರವ ಮತ್ತು ಕನಕ ಯುವ ಪುರಸ್ಕಾರಕ್ಕೆ ನಾಲ್ಕು ವರ್ಷಗಳ ಅವಧಿಗೆ ಪರಿಣಿತರ ಆಯ್ಕೆ ಸಮಿತಿಯು ಆಯ್ಕೆ ಮಾಡಿದೆ.

ಕನಕ ಗೌರವ ಪುರಸ್ಕಾರವನ್ನು 50 ವರ್ಷಕ್ಕೂ ಮೇಲ್ಪಟ್ಟ ಹಿರಿಯ ವಿದ್ವಾಂಸರಿಗೆ ಕನಕ ಗೌರವ ಪುರಸ್ಕಾರವನ್ನು ನೀಡಲಾಗುತ್ತದೆ. ಈ ಪುರಸ್ಕಾರದ ಮೊತ್ತ ರೂ.75,000/-ಗಳು. ಇದರೊಂದಿಗೆ ಪ್ರಶಸ್ತಿ ಪುತ್ಥಳಿ, ಪ್ರಶಸ್ತಿ ಫಲಕ, ಶಾಲು, ಫಲತಾಂಬೂಲವನ್ನು ನೀಡಲಾಗುತ್ತದೆ. ಈಗಾಗಲೇ ಕನಕದಾಸರ ಬಗ್ಗೆ ಆಳವಾದ ಅಧ್ಯಯನ ಮಾಡಿ ಪ್ರಕಟಣೆಗಳನ್ನು ಹೊರತಂದಿರುವ ಹಿರಿಯ ವಿದ್ವಾಂಸರನ್ನು ಪುರಸ್ಕಾರಕ್ಕೆ ಪರಿಗಣಿಸಲಾಗುತ್ತದೆ.

ಕನಕ ಯುವ ಪುರಸ್ಕಾರವನ್ನು 40 ವರ್ಷದೊಳಗಿನ ಕಿರಿಯ ವಿದ್ವಾಂಸರಿಗೆ ಕನಕ ಯುವ ಪುರಸ್ಕಾರವನ್ನು ನೀಡಲಾಗುತ್ತದೆ. ಈ ಪ್ರಶಸ್ತಿಯ ಮೊತ್ತ ರೂ.50,000/-ಗಳು. ಇದರೊಂದಿಗೆ ಪ್ರಶಸ್ತಿ ಪುತ್ಥಳಿ, ಪ್ರಶಸ್ತಿ ಫಲಕ, ಶಾಲು, ಫಲತಾಂಬೂಲವನ್ನು ನೀಡಲಾಗುತ್ತದೆ. ಕನಕದಾಸರ ಬಗ್ಗೆ ಅಧ್ಯಯನ ಪೂರ್ಣ ಅಭ್ಯಾಸ ಮಾಡುತ್ತಿರುವ ಪ್ರಕಟಣೆಗಳನ್ನು ಹೊರತರುತ್ತಿರುವ, ಕನಕದಾಸರ ಸಾಹಿತ್ಯ - ಸಂದೇಶಗಳನ್ನು ಪ್ರಚಾರ ಮಾಡುತ್ತಿರುವ ಯುವ ವಿದ್ವಾಂಸರನ್ನು 'ಕನಕ ಯುವ ಪುರಸ್ಕಾರ'ಕ್ಕೆ ಪರಿಗಣಿಸಲಾಗುತ್ತದೆ. 2021-22 ನೇ ಸಾಲಿನಲ್ಲಿ ಡಾ.ಅನಿಲ್‌ಕುಮಾರ್, 2022-23 ನೇ ಸಾಲಿನಲ್ಲಿ ಡಾ. ಚಿಕ್ಕಮಗಳೂರು ಗಣೇಶ 2023-24 ನೇ ಸಾಲಿನಲ್ಲಿ ಡಾ.ಉಮೇಶ ಎಂ. (ಉಬಾಮ) ಇವರು ಕನಕ ಯವ ಪುರಸ್ಕಾರಕ್ಕೆ ಭಾಜನರಾಗಿದ್ದಾರೆ.

**ತತ್ವಪದಕಾರರ 18 ಸಂಪುಟಗಳ ಬಿಡುಗಡೆ:** ಕರ್ನಾಟಕ ತತ್ವಪದಕಾರರ ಸಮಗ್ರ ಸಾಹಿತ್ಯ ಪ್ರಕಟಣೆ ಯೋಜನೆಯ 50 ತತ್ವಪದ ಸಂಪುಟಗಳ ಪ್ರಕಟಣಾ ಮಾಲೆಯಡಿ 32 ಸಂಪುಟಗಳು 2019ರಲ್ಲಿ ಹೊರಬಂದಿದ್ದವು. ಈಗಾಗಲೇ 32 ಸಂಪುಟಗಳು ಕರ್ನಾಟಕದ ಜನ ಸಮುದಾಯದ ಮೆಚ್ಚುಗೆಗೆ ಪಾತ್ರವಾಗಿದೆ. ಉಳಿದ 18 ಸಂಪುಟಗಳು ತಾಂತ್ರಿಕ ಕಾರಣಗಳಿಂದಾಗಿ ವಿಳಂಬವಾಗಿದ್ದ ಬಾಕಿ 18 ಸಂಪುಟಗಳು ಈಗ ಸಿದ್ಧವಾಗಿವೆ. ಡಾ. ನಟರಾಜ ಬೂದಾಳ್ ಅವರ ಯೋಜನಾ ಸಂಪಾದಕತ್ವದಲ್ಲಿ ಡಾ.ಕೆ.ನೀಲಾ ಅವರು ಸಂಪಾದಿಸಿರುವ ಕರಿಬಸವೇಶ್ವರ ಮತ್ತು ನೀಲಗ್ರೀವರ ತತ್ವಪದಗಳು, ಡಾ.ಪ್ರಭು ಖಾನಾಪುರ ಅವರು ಸಂಪಾದಿಸಿರುವ ಗುರುಬಸವಾರ್ಯ, ಚನ್ನಪ್ಪಕವಿ ಮತ್ತು ಇತರರ ತತ್ವಪದಗಳು, ಡಾ. ಪ್ರಭು ಖಾನಾಪುರ ಹಾಗೂ ಡಾ. ಜಗನ್ನಾಥ ಹೆಬ್ಬಾಳೆ ಅವರು ಸಂಪಾದಿಸಿರುವ ಕ್ವಾನಳ್ಳಿ ಹೊನ್ನಪ್ಪ ಮಹಾರಾಜರು ಮತ್ತು ಇತರರ ತತ್ವಪದಗಳು, ಡಾ. ಮೀನಾಕ್ಷಿ ಬಾಳಿ ಅವರು ಸಂಪಾದಿಸಿರುವ ಬಸವಣ್ಣ, ಅಲ್ಲಮ ಮತ್ತು ಇತರರ ತತ್ವಪದಗಳು, ಡಾ. ಬಿ. ನಂಜುಂಡಸ್ವಾಮಿ ಅವರು ಸಂಪಾದಿಸಿರುವ ಬಂಡೆಗುರು, ಸೋದೆ ಸದಾಶಿವರಾಯ ಮತ್ತು ಇತರರ ತತ್ವಪದಗಳು.

ಡಾ. ಎಸ್. ನಟರಾಜ ಬೂದಾಳ್ ಅವರು ಸಂಪಾದಿಸಿರುವ ಮೈಲಾರ ಬಸವಲಿಂಗ ಶರಣರು ಮತ್ತು ಇತರರ ತತ್ವಪದಗಳು, ಡಾ. ಬಸರವಾಜ ಸಬರದ ಅವರು ಸಂಪಾದಿಸಿರುವ ಹೇರೂರ ವಿರುಪಣ್ಣ ಮತ್ತು ಇತರರ ತತ್ವಪದಗಳು, ಡಾ. ಜೆ. ಕರಿಯಪ್ಪ ಮಾಳಗೆ ಅವರು ಸಂಪಾದಿಸಿರುವ ಕರೀಂಪೀರ್ ಮತ್ತು ಇತರರ ತತ್ವಪದಗಳು, ಡಾ. ವೈ.ಬಿ. ಹಿಮ್ಮಡಿ ಅವರು ಸಂಪಾದಿಸಿರುವ ಅಲಭೈರಿ ಮತ್ತು ಇತರರ ತತ್ವಪದಗಳು, ಡಾ. ಕೆ. ನೀಲಾ ಅವರು ಸಂಪಾದಿಸಿರುವ ಸಾಲೋಟಗಿ ಶಿವಲಿಂಗೇಶ್ವರ ಮತ್ತು ಇತರರ ತತ್ವಪದಗಳು, ಡಾ. ಎಂ.ಡಿ. ಒಕ್ಕುಂದ ಹಾಗೂ ಡಾ. ಚಂದ್ರನ್ನ ಸೊಬಟಿ ಅವರು ಸಂಪಾದಿಸಿರುವ ಅಮ್ಮಿಣಭಾವಿ ಅಯ್ಯಣ್ಣಜ್ಜ ಚಲವಾದಿ ಚಂದಪ್ಪ ಮತ್ತು ಇತರರ ತತ್ವಪದಗಳು, ಡಾ.ಪದ್ಮಾಲಯ ನಾಗರಾಜ ಅವರು ಸಂಪಾದಿಸಿರುವ ಅಚಲ ತತ್ವಪದಗಳು, ಡಾ. ನ. ಗುರುಮೂರ್ತಿ ಅವರು ಸಂಪಾದಿಸಿರುವ ತಾವರೆಕೆರೆ ರಾಮನ ಧೂತರು ಮತ್ತು ಇತರರ ತತ್ವಪದಗಳು, ಡಾ. ಗಂಗಪ್ಪ ತಳವಾರ್ ಅವರು ಸಂಪಾದಿಸಿರುವ ಗಟ್ಟಿಹಳ್ಳಿ ಆಂಜನಪ್ಪನವರ ಸುಜ್ಞಾನಬೋಧ ತತ್ವಪದಗಳು, ಡಾ. ಪರಮಶಿವಯ್ಯ ಹೆಚ್ ಅವರು ಸಂವಾದಿಸಿರುವ ಗಟ್ಟಿಹಳ್ಳಿ ಆಂಜನಪ್ಪನವರ ಅಚಲಬೋಧ ತತ್ವಪದಗಳು, ಡಾ. ಜಯಮಂಗಲ ಚಂದ್ರಶೇಖರ್ ಅವರು ಸಂಪಾದಿಸಿರುವ ಕೈವಾರ ನಾರೇಯಣಪ್ಪ ಮತ್ತು ಇತರರ ತತ್ವಪದಗಳು, ಡಾ. ಕೆ.ವಿ. ನಾಯಕ ಅವರು ಸಂಪಾದಿಸಿರುವ ಕೊಂಡಾರ್ಯ ನಾಗಾರ್ಯ ಮತ್ತು ಇತರರ ತತ್ವಪದಗಳು, ಡಾ. ಪದ್ಮಾಲಯ ನಾಗರಾಜ ಅವರು ಸಂಪಾದಿಸಿರುವ ಶ್ರೀಗುರು ಅಲ್ಲೀ ಸಾಹೇಬು ಮತ್ತು ಶಿಲವೇರಿ ಶಿವಪ್ಪನವರ ತತ್ವಪದಗಳ ಸಂಪುಟಗಳು ಬಿಡುಗಡೆಗೊಳ್ಳಲಿವೆ.

ನವೆಂಬರ್ 18 ರಂದು ಸಂಜೆ 5.30ಕ್ಕೆ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಕನ್ನಡ ಸಂಸ್ಕೃತಿ ಇಲಾಖೆಯು ಆಯೋಜಿಸುವ ಕನಕ ಜಯಂತಿ ಸಮಾರಂಭದಲ್ಲಿ ಕನಕ ಗೌರವ ಮತ್ತು ಕನಕ ಯುವಪುರಸ್ಕಾರವನ್ನು ಪ್ರದಾನ ಮಾಡಲಾಗುವುದು.

ಕನಕ ಪುರಸ್ಕಾರದ ಜೊತೆಗೆ ಸಮಗ್ರ ತತ್ವಪದ ಸಂಪುಟಗಳ 18 ಸಂಪುಟಗಳು ಸಹ ಇದೇ ವೇದಿಕೆಯಲ್ಲಿ ಲೋಕಾರ್ಪಣೆಗೊಳ್ಳಲಿವೆ. ಪ್ರಶಸ್ತಿ ಪ್ರದಾನ ಮತ್ತು ಸಂಪುಟಗಳ ಬಿಡುಗಡೆಯನ್ನು ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಅವರು ಮಾಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾದ ಶಿವರಾಜ ತಂಗಡಗಿ ಅವರು ಆಗಮಿಸಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ಶಾಸಕರಾದ ಉದಯ ಬಿ ಗರುಡಾಚಾರ್ ಅವರು ವಹಿಸಲಿದ್ದಾರೆ. ಈ ಸಮಾರಂಭದಲ್ಲಿ ಇತರೆ ಗಣ್ಯರೂ ಭಾಗವಹಿಸಲಿದ್ದಾರೆ ಎಂದು ಬೆಂಗಳೂರಿನ ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರದ ಅಧ್ಯಕ್ಷರಾದ ಕಾ.ತ. ಚಿಕ್ಕಣ್ಣ ತಿಳಿಸಿದ್ದಾರೆ.

# ಬಿರ್ಸಾ ಮುಂಡಾರ ಜಯಂತಿ



**ಕೋಲಾರ:** ಬಿರ್ಸಾ ಮುಂಡಾರವರು ಬುಡಕಟ್ಟು ಸಮಾಜದ ಸ್ಥಿತಿ ಹಾಗೂ ದಿಕ್ಕನ್ನು ಬದಲಿಸುವಲ್ಲಿ ಇವರ ಪಾತ್ರವು ಬಹುದೊಡ್ಡದು. ಬ್ರಿಟಿಷರ ವಿರುದ್ಧ ಹಾಗೂ ಹೋರಾಟ ಮಾಡಿದ ನಾಯಕರಲ್ಲಿ ಇವರು ಸಹ ಒಬ್ಬರಾಗಿದ್ದಾರೆ ಎಂದು ಅಪರ ಜಿಲ್ಲಾಧಿಕಾರಿಗಳಾದ ಮಂಗಳ ರವರು ಹೇಳಿದರು.

ಇಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಕೋಲಾರದ ಟಿ. ಚನ್ನಯ್ಯ ರಂಗಮಂದಿರದಲ್ಲಿ ಧರ್ತಿ ಅಬಾ ಭಗವಾನ್ ಬಿರ್ಸಾ ಮುಂಡಾ ರವರ 150 ನೇ ಜನ್ಮ ಜಯಂತಿಯ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು ಭಾರತೀಯ ಇತಿಹಾಸದಲ್ಲಿ ಮಹಾನ್ ವೀರ ಎಂಬ ಹೆಸರಿನಿಂದ ಕರೆಯಲಾಗುವ ಬಿರ್ಸಾ ಮುಂಡಾ ರವರು 1875 ರ ನವೆಂಬರ್ 15 ರಂದು ಜಾರ್ಖಂಡ್‌ನ ಉಲಿಹಾತು ಎಂಬ ಗ್ರಾಮದ ಆದಿವಾಸಿ ಕುಟುಂಬದಲ್ಲಿ ಜನಿಸಿದರು ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಆದಿವಾಸಿಗಳು ಅನೇಕ ರೀತಿಯ ಕೊಡುಗೆಗಳನ್ನು ನೀಡಿದಾರೆ ಎಂದರು.

ಬ್ರಿಟಿಷರ ಅನ್ಯಾಯ ಮತ್ತು ಬುಡಕಟ್ಟು ಜನರ ಶೋಷಣೆ ಹಾಗೂ ಮತಾಂತರ ವಿರುದ್ಧ ಧ್ವನಿ ಎತ್ತುವ ಮೂಲಕ ಸ್ವಾತಂತ್ರ್ಯ ಹೋರಾಟದಲ್ಲಿ ಬುಡಕಟ್ಟು ಜನರ ಪ್ರಮುಖ ನಾಯಕರಾಗಿ ಗುರುತಿಸಿಕೊಂಡರು ಬಿರ್ಸಾ ಮುಂಡಾ ರವರು ತನ್ನದೇ ಆದ ಸ್ವಂತಃ ಸೈನ್ಯದೊಂದಿಗೆ ಆದಿವಾಸಿಗಳ ನೆಲ ಹಾಗೂ ಸಂಸ್ಕೃತಿಯನ್ನು ರಕ್ಷಿಸಲು ಹೋರಾಟ ಮಾಡುವಾಗ ಜೈಲಿಗೆ ಸೇರಿದರು, ಜೈಲಿನಲ್ಲಿ ಅವರಿಗೆ ವಿಷ ನೀಡಿ ಸಾಯಿಸಲಾಯಿತು ಎಂದು ಪ್ರಸ್ತುತ ಬುಡಕಟ್ಟು ಸಮುದಾಯದಲ್ಲಿ ಬಿರ್ಸಾ ಮುಂಡಾ ರವರನ್ನು ದೇವರಂತೆ ಪೂಜಿಸಲಾಗಿತ್ತಿದೆ. ಅವರ ಜನ್ಮ ದಿನವನ್ನು ನವೆಂಬರ್ 15 ರಂದು ರಾಷ್ಟ್ರೀಯ ಮಟ್ಟದಲ್ಲಿ ಬುಡಕಟ್ಟು ಹೆಮ್ಮೆಯ ದಿನದ ಪ್ರಯುಕ್ತ ಸುಮಾರು 6,900 ಕೋಟಿಗಳ ಯೋಜನೆಗಳ ಅನುಷ್ಠಾನ ಹಾಗೂ ಶಿಲಾನ್ಯಾಸವನ್ನು ಬಿಹಾರದ ಜಮುಯಿ ಜಿಲ್ಲೆಯಲ್ಲಿ ಪ್ರಧಾನ ಮಂತ್ರಿಗಳು ಲೋಕಾರ್ಪಣೆ ಮಾಡಲಾಗುತ್ತಿದೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರಾದ ಶ್ರೀನಿವಾಸ್ ರವರು ಮಾತನಾಡಿ ಸರ್ಕಾರದ ಅನುದಾನಗಳನ್ನು ಹಾಗೂ ಯೋಜನೆಗಳನ್ನು ಬಳಸಿಕೊಂಡು ಆದಿವಾಸಿ ಸಮುದಾಯಗಳು ತಮ್ಮ ಜೀವನವನ್ನು ಅಭಿವೃದ್ಧಿ ಪಡಿಸಿಕೊಳ್ಳಬೇಕು ಎಂದರು. ದೇಶದ ಮೂಲೆ-ಮೂಲೆಗಳಲ್ಲಿರುವ ಬುಡಕಟ್ಟು ಜನರಿಗೆ ಅರಿವು ಮೂಡಿಸಿ ಅವರಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಿಕೊಡಬೇಕು ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯತಿ ಯೋಜನಾ ನಿರ್ದೇಶಕರಾದ ವೆಂಕಟಚಲಪತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ವಿಜಯಲಕ್ಷ್ಮಿ, ಸಹಾಯಕ ನಿರ್ದೇಶಕರು ಚನ್ನ ಬಸಪ್ಪ, ಜಿಲ್ಲಾ ಜಾಗೃತಿ ಸಮಿತಿಯ ಸದಸ್ಯರಾದ ಮಾಲೂರು ವೆಂಕಟರಮಣ, ಮಂಜುಳ, ದಲಿತ ಹೋರಾಟಗಾರಾರದ ಟಿ. ವಿಜಯ ಕುಮಾರ್ ಉಪಸ್ಥಿತರಿದ್ದರು.

# ಪೋಕ್ಸೋ ಪ್ರಕರಣಗಳಿಂದ ಮಕ್ಕಳನ್ನು ರಕ್ಷಿಸಿಕೊಳ್ಳಬೇಕು

**ಚಾಮರಾಜನಗರ:** ಇತ್ತೀಚಿನ ದಿನಗಳಲ್ಲಿ ಹೆಚ್ಚಾಗುತ್ತಿರುವ ಪೋಕ್ಸೋ ಪ್ರಕರಣಗಳಿಂದ ಮಕ್ಕಳನ್ನು ರಕ್ಷಿಸಿ ಕಾಪಾಡಿಕೊಳ್ಳುವುದು ಎಲ್ಲ ಪೋಷಕರ ಕರ್ತವ್ಯವಾಗಿದೆ ಎಂದು ವಕೀಲರಾದ ಮಹಾಲಿಂಗಸ್ವಾಮಿ ಅವರು ತಿಳಿಸಿದರು.

ನಗರದ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯದಲ್ಲಿಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಆಸರೆ ಚಾರಿಟಬಲ್ ಟ್ರಸ್ಟ್ ಹಾಗೂ ಬಾಲಕಿಯರ ವಿದ್ಯಾರ್ಥಿನಿಲಯ ಇವರ ಸಂಯುಕ್ತಾಶ್ರಯದಲ್ಲಿ ಇತ್ತೀಚೆಗೆ ನಡೆದ ಮಕ್ಕಳ ದಿನಾಚರಣೆ ಹಾಗೂ ಕಾನೂನು ಅರಿವು ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಹೆಣ್ಣು ಮಕ್ಕಳು ಪ್ರೀತಿ ಪ್ರೇಮಕ್ಕೆ ಮರುಳಾಗಿ ಹೆಚ್ಚು ಪೋಕ್ಸೋ ಪ್ರಕರಣಕ್ಕೆ ಕಾರಣವಾಗುತ್ತಿದೆ. ಮಕ್ಕಳನ್ನು ರಕ್ಷಿಸಿ ಸುರಕ್ಷಿತ ವಾತಾವರಣದಲ್ಲಿ ಬೆಳೆಸಲು ಸಹಾಯ ಮಾಡಲು ಪೋಷಕರು, ಶಿಕ್ಷಕರು ಮತ್ತು ಸಮಾಜ ಸಹಕಾರಿಯಾಗಬೇಕು. ಭಾರತದಲ್ಲಿ ಪ್ರತಿ ವರ್ಷ ನವೆಂಬರ್ 14ರಂದು ಮಕ್ಕಳ ದಿನವನ್ನು ಆಚರಿಸಲಾಗುತ್ತದೆ. ಮಕ್ಕಳ ದಿನದ ಅಂಗವಾಗಿ ಮಕ್ಕಳ ಹಕ್ಕುಗಳಾದ ಶಿಕ್ಷಣ, ಆರೋಗ್ಯ ಮತ್ತು ಸುರಕ್ಷತೆಯ ಅರಿವು ಮೂಡಿಸುವುದು ಅವಶ್ಯವಾಗಿದೆ ಎಂದು ಮಹಾಲಿಂಗಸ್ವಾಮಿ ತಿಳಿಸಿದರು.

ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದ ಆಸರೆ ಚಾರಿಟಬಲ್ ಟ್ರಸ್ಟ್ ಕಾರ್ಯದರ್ಶಿ ಟಿ.ಜೆ. ಸುರೇಶ್ ಅವರು ಮಾತನಾಡಿ ಪುಟ್ಟಮಕ್ಕಳ ಜೀವನ ತೆರೆದಿಟ್ಟ ಬಿಳಿಯ ಹಾಳೆಯಂತೆ. ಅದರಲ್ಲಿ ನಮಗೆ ಏನು ಬೇಕೋ ಅದನ್ನೇ ಬರೆದುಕೊಳ್ಳಬಹುದು. ಆ ಹಾಳೆಯಲ್ಲಿ ನಮ್ಮ ಸಂಸ್ಕೃತಿ, ಸಂಬಂಧಗಳ ಮೌಲ್ಯ, ನಡವಳಿಕೆ, ಗೌರವ, ಪ್ರಾಮಾಣಿಕತೆ, ಜವಾಬ್ದಾರಿ, ಆರೋಗ್ಯಕರ ಅಭ್ಯಾಸಗಳು, ಆತ್ಮವಿಶ್ವಾಸ, ದೇಶಭಕ್ತಿ ಎಂಬ ಪಾಠಗಳನ್ನು ಬರೆದು ಒಳ್ಳೆಯ ಸಂಸ್ಕಾರದ ಛಾಯೆಯನ್ನು ಮೂಡಿಸುತ್ತ ಅವರನ್ನು ಸತ್ಪ್ರಜೆಗಳನ್ನಾಗಿ ಮಾಡುವ ಜವಾಬ್ದಾರಿ, ಕರ್ತವ್ಯ ನಮ್ಮ ಮೇಲಿದೆ ಎಂದರು.

ಮಕ್ಕಳ ಹಕ್ಕು ಹಾಗೂ ಶಿಕ್ಷಣದ ಮಹತ್ವವನ್ನು ತಿಳಿಸುವ ಉದ್ದೇಶದಿಂದ ಪ್ರತಿ ವರ್ಷ ನವೆಂಬರ್ 14 ರಂದು ಭಾರತದಲ್ಲಿ ಮಕ್ಕಳ ದಿನ ಆಚರಿಸಲಾಗುತ್ತದೆ. ವಿಶ್ವಸಂಸ್ಥೆ ನವೆಂಬರ್ 20ಕ್ಕೆ ಮಕ್ಕಳ ದಿನ ಆಚರಿಸಿದರೂ ಭಾರತದಲ್ಲಿ ನವೆಂಬರ್ 14ರಂದೇ ಮಕ್ಕಳ ದಿನ ಆಚರಿಸಲಾಗುತ್ತದೆ. ಮಕ್ಕಳು ಶಿಕ್ಷಣಕ್ಕೆ ಹೆಚ್ಚು ಆದ್ಯತೆ ಕೊಡಬೇಕು. ಪ್ರತಿಯೊಬ್ಬರೂ ಜೀವನದಲ್ಲಿ ಗುರಿಯನ್ನು ಇಟ್ಟುಕೊಳ್ಳಬೇಕು. ತಂದೆ ತಾಯಿಯ ಮಾತನ್ನು ಕೇಳುವ ಮೂಲಕ ಉತ್ತಮ ಜೀವನ ಕಟ್ಟಿಕೊಳ್ಳಬೇಕು ಎಂದು ಸುರೇಶ್ ತಿಳಿಸಿದರು.



# ಲೋಕ ಕಲ್ಯಾಣಕ್ಕಾಗಿ ಲಕ್ಷ ದೀಪೋತ್ಸವ

**ಬೆಂಗಳೂರು:** ಜಯನಗರ ಐದನೇ ಬಡಾವಣೆಯಲ್ಲಿರುವ ನಂಜನಗೂಡು ಶ್ರೀರಾಘವೇಂದ್ರ, ಸ್ವಾಮಿಗಳ ಮಠದಲ್ಲಿ ಪರಮ ಪೂಜ್ಯ ಶ್ರೀ1008 ಶ್ರೀ ಸುಬುಧೇಂದ್ರತೀರ್ಥ ಶ್ರೀಪಾದಂಗಳವರ ಆದೇಶ ಅನುಗ್ರಹದೊಂದಿಗೆ ಶ್ರೀಮಠದ ಹಿರಿಯ ವ್ಯವಸ್ಥಾಪಕರಾದ ಆರ್. ಕೆ. ವಾದೀಂದ್ರಾಚಾರ್ ಅವರ ನೇತೃತ್ವದಲ್ಲಿ ಕಾರ್ತಿಕ ಪೌರ್ಣಮಿ ಮತ್ತು 'ಲೋಕ ಕಲ್ಯಾಣಕ್ಕಾಗಿ ಲಕ್ಷ ದೀಪೋತ್ಸವದ ಕಾರ್ಯಕ್ರಮವು ವಿಶೇಷವಾಗಿ ನೆರವೇರಿತು ಎಂದು ಶ್ರೀನಂದಕಿಶೋರ್ ಆಚಾರ್ಯರು ತಿಳಿಸಿದರು, ಈ ಸಂದರ್ಭದಲ್ಲಿ ಸನ್ನಿಧಿಗೆ ಆಗಮಿಸಿದ ಭಕ್ತರಿಗೆ ಮತ್ತು ಸೇವಾ ಕರ್ತೃಗಳಿಗೆ ಸಂಕಲ್ಪವನ್ನು ಅರ್ಚಕರಿಂದ ಮಾಡಿಸಲಾಯಿತು ತದನಂತರ ದೀಪಗಳನ್ನು ರಾಯ ಸನ್ನಿಧಿಯ ಪ್ರಕಾರದ ಸುತ್ತಲೂ ಮತ್ತು ಹೊರಭಾಗದಲ್ಲಿಯೂ ದೀಪಗಳನ್ನು ಪ್ರಜ್ವಲಿಸಿ ಚೊಕ್ಕ ಸುಡುವ ಮೂಲಕ ಮಹಾಮಂಗಳಾರತಿಯನ್ನು ನೆರವೇರಿಸಲಾಯಿತು ಭಕ್ತಾದಿಗಳು ಭಕ್ತಿಯಿಂದ ಲೋಕಕಲ್ಯಾಣಕ್ಕಾಗಿ ರಾಯರ ಮುಂದೆ ಪ್ರಾರ್ಥನೆಯನ್ನು ಸಲ್ಲಿಸಿ ದೀಪಗಳನ್ನು ಪ್ರಜ್ವಲಿಸಿ ಪ್ರಸಾದವನ್ನು ಸ್ವೀಕರಿಸಿ ಶ್ರೀ ಹರಿ ವಾಯು ಗುರುಗಳ ಅನುಗ್ರಹಕ್ಕೆ ಪಾತ್ರರಾದರು.

## ಕಾಣೆಯಾದ ವ್ಯಕ್ತಿಯ ಪತ್ತೆಗಾಗಿ ಮನವಿ

**ಕೋಲಾರ:** ಕಾಣೆಯಾದ ವ್ಯಕ್ತಿಯ ಚಹರೆ: ಹೆಸರು: ಬಾಲಾಜಿ, 36 ವರ್ಷ, ದುಂಡು ಮುಖ, ಧೃಡಕಾಯ ಮೈಕಟ್ಟು, ಎಣ್ಣೆಗೆಂಪು ಮೈಬಣ್ಣ, 5.6 ಅಡಿ ಎತ್ತರ, ಬಲ ಕೈಮೇಲೆ ಎಂಬ ಹಚ್ಚೆಯಿರುತ್ತದೆ. ಕನ್ನಡ, ತೆಲುಗು, ಹಿಂದಿ ಭಾಷೆ ಮಾತನಾಡುತ್ತಾರೆ.

ಈ ವ್ಯಕ್ತಿಯ ಬಗ್ಗೆ ಮಾಹಿತಿ ತಿಳಿದು ಬಂದಲ್ಲಿ ಮುಳಬಾಗಿಲು ನಗರ ಪೊಲೀಸ್ ಠಾಣೆಗೆ ದೂರು ನೀಡಬಹುದು ಎಂದು ಆರಕ್ಷಕ ನಿರೀಕ್ಷಕರು ರವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



### ವೇದಮೂರ್ತಿಗೆ ಒಲಿದ ಜಯ

**ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಮಂಡ್ಯ ಜಿಲ್ಲಾ ಶಾಖೆ ಚುನಾವಣೆಯಲ್ಲಿ ಪಶು ಸಂಗೋಪನಾ ಇಲಾಖೆಯ ವೇದಮೂರ್ತಿ ಅವರು ಜಯಗಳಿಸಿದರು.**

# ಧಾತ್ರಿ ಹವನ, ಲಲಿತ ಸಹಸ್ರನಾಮ, ಸುಹಾಸಿನಿಯರ ಪೂಜೆ

**ಮೈಸೂರು:** ನಗರದ ಹುಣಸೂರು ರಸ್ತೆಯಲ್ಲಿರುವ ಮುಲಕನಾಡು ಸಭಾದಲ್ಲಿಂದು ಕಾರ್ತಿಕ ಮಾಸದ ದಾಮೋದರ ಪೂಜೆ, ಧಾತ್ರಿ ಹವನ, 60 ಜನ ಸುಹಾಸಿನಿಯರಿಂದ ಶ್ರೀ ಲಲಿತ ನಾಮಾರ್ಚನೆ, ಸುಹಾಸಿನಿಯರ ಪೂಜೆ ಏರ್ಪಡಿಸಲಾಗಿತ್ತು. ಕಾರ್ಯಕ್ರಮದಲ್ಲಿ ಸಭಾದ ಅಧ್ಯಕ್ಷರಾದ ಗುರುಮೂರ್ತಿಯವರು ಮಾತನಾಡಿ, ಪ್ರತಿ ವರ್ಷದಂತೆ ಈ ವರ್ಷವೂ ಕಾರ್ತಿಕ ಮಾಸದಲ್ಲಿ ವಿಶೇಷವಾಗಿ ಧಾತ್ರಿ ಹವನ, ಲಲಿತ ಸಹಸ್ರನಾಮ, ಸುಹಾಸಿನಿಯರ ಪೂಜೆಯನ್ನು ಏರ್ಪಡಿಸಿದ್ದೇವೆ. ಸಮಾಜದಲ್ಲಿ ಎಲ್ಲರಿಗೂ ಒಳಿತಾಗಲೆಂದು ಭಗವಂತನಲ್ಲಿ ಪ್ರಾರ್ಥಿಸಿ, ನೊಂದ ಮನಸ್ಸುಗಳಿಗೆ, ಕಷ್ಟದಲ್ಲಿರುವ ಎಲ್ಲರಿಗೂ ಕೂಡ ಆಯುರಾರೋಗ್ಯ ಲಭಿಸಲೆಂದು ವಿಶೇಷವಾಗಿ ಸಂಕಲ್ಪ ಮಾಡಿ, ಹೋಮ, ಹವನಾದಿಗಳನ್ನು ನೆರವೇರಿಸಿದ್ದೇವೆ. ನಮ್ಮ ಸಭಾದ ವತಿಯಿಂದ ಈ ದಿನದ ಕಾರ್ಯಕ್ರಮ ಅತ್ಯಂತ ಭಕ್ತಮಹಾಶಯರಿಂದ ಯಶಸ್ವಿಯಾಗಿದ್ದು, ಸುಮಾರು 300ಕ್ಕೂ ಹೆಚ್ಚು ಆಸ್ತಿಕರು ಭಾಗವಹಿಸಿದ್ದು ವಿಶೇಷವಾಗಿತ್ತು.



ಕಾರ್ಯಕ್ರಮದಲ್ಲಿ ಸಭಾದ ಗೌರವ ಕಾರ್ಯದರ್ಶಿ ನಟರಾಜ್ ಅವರು ಮಾತನಾಡಿ, ಲೋಕಕಲ್ಯಾಣಾರ್ಥವಾಗಿ ಹಾಗೂ ಸಮುದಾಯದ ಸರ್ವತೋಮುಖ ಬೆಳವಣಿಗೆಗಾಗಿ ಈ ಕಾರ್ಯಕ್ರಮ ಹಮ್ಮಿಕೊಂಡಿದ್ದು, ಸಂಸ್ಥೆಯ ಬೆಂಗಳೂರು ಮತ್ತು ಮೈಸೂರಿನ ಅನೇಕ ಸದಸ್ಯರು ಭಾಗವಹಿಸಿ, ಕೃತಾರ್ಥರಾದರು ಎಂದರು. ಇಂತಹ ಅಭೂತಪೂರ್ವ ಕಾರ್ಯಕ್ರಮಗಳು ನಮಗೆ ಸಂತೋಷದ ಜೊತೆಗೆ ನೆಮ್ಮದಿ ತರುವ ವಿಚಾರ ಎಂದು ಅಭಿಪ್ರಾಯಿಸಿದರು. ಕಾರ್ಯಕ್ರಮದಲ್ಲಿ ಕಾರ್ಯದರ್ಶಿ ಎಂ.ಡಿ.ಶ್ರೀದತ್ತ ಹಾಗೂ ಆಸ್ತಿಕ ಮಹಾಶಯರು, ಸಭಾ ಸದಸ್ಯರು, ಸುಹಾಸಿನಿಯರು ಭಾಗವಹಿಸಿದ್ದರು.

# 30ರಂದು ಜಿಲ್ಲಾ ಯುವ ಜನೋತ್ಸವ ಕಾರ್ಯಕ್ರಮ

**ಬೆಂಗಳೂರು ಗ್ರಾಮಾಂತರ:** 2024-25ನೇ ಸಾಲಿನ ಜಿಲ್ಲಾಮಟ್ಟದ ಯುವಜನೋತ್ಸವ ಕಾರ್ಯಕ್ರಮವನ್ನು ನವೆಂಬರ್ 30 ರಂದು ದೇವನಹಳ್ಳಿ ಟೌನ್ ನಲ್ಲಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಆವರಣದಲ್ಲಿ ಆಯೋಜಿಸಲು ನಿರ್ಧರಿಸಲಾಗಿದ್ದು, ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಜಿಲ್ಲಾಧಿಕಾರಿಯವರು ಸೂಚಿಸಿದರು.

ಜಿಲ್ಲಾಡಳಿತ ಭವನದ ಜಿಲ್ಲಾಧಿಕಾರಿಯವರ ನ್ಯಾಯಾಲಯ ಸಭಾಂಗಣದಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ನೆಹರೂ ಯುವ ಕೇಂದ್ರ ವತಿಯಿಂದ ಹಮ್ಮಿಕೊಂಡ ಜಿಲ್ಲಾ ಮಟ್ಟದ ಯುವ ಜನೋತ್ಸವ ಕಾರ್ಯಕ್ರಮದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿಕೊಂಡು ಅವರು ಮಾತನಾಡಿದರು.

ನವೆಂಬರ್ 27 ರಂದು ನಡೆಯಲಿರುವ ಯುವ ಜನೋತ್ಸವ ಸ್ಪರ್ಧೆಯಲ್ಲಿ ಜಿಲ್ಲೆಯ 15 ವರ್ಷದಿಂದ 29 ವರ್ಷ ವಯೋಮಾನದೊಳಗಿನ ಯುವಕರು ಹಾಗೂ ಯುವತಿಯರು ತಮ್ಮ ಹೆಸರನ್ನು ನೋಂದಾಯಿಸಿಕೊಂಡು ಭಾಗವಹಿಸಬಹುದಾಗಿದೆ.

ಜಿಲ್ಲೆಯ ಎಲ್ಲಾ ಶಾಲಾ ಕಾಲೇಜುಗಳಿಗೆ ಮಾಹಿತಿ ನೀಡಿ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಪಾಲ್ಗೊಳ್ಳಲು ಕ್ರಮ ವಹಿಸಿ ಎಂದರಲ್ಲದೇ ಸಂಬಂಧಪಟ್ಟ ಅಧಿಕಾರಿಗಳು ಕಾರ್ಯಕ್ರಮ ಯಶಸ್ವಿಗೆ ಕಾರ್ಯ ನಿರ್ವಹಿಸಿ ಎಂದು ಹೇಳಿದರು. ಹೆಚ್ಚಿನ ವಿವರಗಳಿಗಾಗಿ ದೂರವಾಣಿ ಸಂಖ್ಯೆ: 9980590960/ 8328673178 ಇವರನ್ನು ಸಂಪರ್ಕಿಸಬಹುದು. ಸಭೆಯಲ್ಲಿ ಜಿಲ್ಲಾ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕರಾದ ಜಯಲಕ್ಷ್ಮೀ, ಜಿಲ್ಲಾ ನೆಹರೂ ಯುವ ಕೇಂದ್ರದ ಯುವ ಅಧಿಕಾರಿಗಳಾದ ಶ್ರೀವಾಣಿ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

### ಗುಂಪು ಸ್ಪರ್ಧೆಗಳು

**01. ವಿಜ್ಞಾನ ಮೇಳ (ಗುಂಪು),**
**02. ಜಾನಪದ ನೃತ್ಯ (ತಂಡ) (ಕನ್ನಡ/ ಆಂಗ್ಲ/ ಹಿಂದಿ ಭಾಷೆ),**
**03. ಜಾನಪದ ಗೀತೆ (ತಂಡ) (ಕನ್ನಡ/ ಆಂಗ್ಲ/ ಹಿಂದಿ ಭಾಷೆ),**

### ವೈಯಕ್ತಿಕ ಸ್ಪರ್ಧೆಗಳು

**01. ಜಾನಪದ ನೃತ್ಯ(ಕನ್ನಡ/ ಆಂಗ್ಲ/ ಹಿಂದಿ ಭಾಷೆ),**
**02. ಜಾನಪದ ಗೀತೆ(ಕನ್ನಡ/ ಆಂಗ್ಲ/ ಹಿಂದಿ ಭಾಷೆ),**
**03. ಕವಿತೆ ಬರೆಯುವುದು**
**04. ಕಥೆ ಬರೆಯುವುದು (ವೈಯಕ್ತಿಕ) ಸ್ಟೋರಿ ರೈಟಿಂಗ್ (1000 ಪದಗಳು ಮೀರದಂತೆ) - (ಕನ್ನಡ/ ಆಂಗ್ಲ/ ಹಿಂದಿ ಭಾಷೆ),**
**05. ಚಿತ್ರ ಕಲೆ- ಕನ್ನಡ /ಆಂಗ್ಲ/ಹಿಂದಿ)**
**06. ಮೊಬೈಲ್ ಛಾಯಾಗ್ರಹಯ ಸ್ಪರ್ಧೆ**
**07. ವಿಜ್ಞಾನ ಮೇಳ (ವೈಯಕ್ತಿಕ)**
**08. ಯುವ ಚಿತ್ರ ಕಲಾ ಸ್ಪರ್ಧೆ**
**09. ಛಾಯಾಚಿತ್ರಣ (ವೈಯಕ್ತಿಕ)**
**10. ಕವನ ಬರಹಗಾರರ ಸ್ಪರ್ಧೆ**

### ಯುವ ಕೃತಿ

**01. ಗುಡಿ ಕೈಗಾರಿಕೆಯ ಕಲಾ ಪ್ರಕಾರ**
**02. ನೇಕಾರಿಕೆ / ಜವಳಿ**
**03. ಕೃಷಿ ಉತ್ಪನ್ನಗಳು**

# ಸುದ್ದಿಮನೆಯಲ್ಲಿ ಅಧ್ಯಯನಶೀಲತೆಗೆ ಆದ್ಯತೆ ನೀಡಿ

**ಬೆಂಗಳೂರು:** ಕರ್ನಾಟಕ ಕಾರ್ಯ ನಿರತ ಪತ್ರಕರ್ತರ ಸಂಘದ ವತಿಯಿಂದ ಹಿರಿಯ ಪತ್ರಕರ್ತರಾದ ದತ್ತಾತ್ತೇಯ ಮಹಬಲೇಶ್ವರ ಭಟ್ (ಡಿ.ಎಂ.ಭಟ್) ಅವರನ್ನು ಅವರ ಮನೆಯ ಅಂಗಳದಲ್ಲಿಯೇ ಗೌರವಿಸುವ ಮೂಲಕ ರಾಷ್ಟ್ರೀಯ ಪತ್ರಿಕಾ ದಿನಾಚರಣೆಯನ್ನು ಆಚರಣೆ ಮಾಡಲಾಯಿತು.



ಉತ್ತರ ಕನ್ನಡ ಜಿಲ್ಲೆ ಹೊನ್ನಾವರದ ಡಿ.ಎಂ.ಭಟ್ 1977ರಲ್ಲಿ ವೃತ್ತಿ ಹರಸಿ ಬೆಂಗಳೂರಿಗೆ ಬಂದು ಇಲ್ಲಿಯೇ ನೆಲೆ ನಿಂತವರು. ಸತತ 37 ವರ್ಷಗಳ ಕಾಲ ಕನ್ನಡಪ್ರಭ ಪತ್ರಿಕೆಯಲ್ಲಿ ಮತ್ತು ವಿಶ್ವವಾಣಿ ಪತ್ರಿಕೆ ಸೇರಿದಂತೆ ಮಾಧ್ಯಮದಲ್ಲಿ 4 ದಶಕಗಳ ಕಾಲ ಸಲ್ಲಿಸಿರುವ ಸೇವೆಯನ್ನು ಸ್ಮರಿಸಿ ಡಿ.ಎಂ.ಭಟ್ ಮತ್ತು ಗೌರಿ ದಂಪತಿಗಳನ್ನು ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಅವರು ಸನ್ಮಾನಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಡಿ.ಎಂ.ಭಟ್, ಕನ್ನಡಪ್ರಭ ಪತ್ರಿಕೆಯ ಸಂಪಾದಕರಾದ ಖಾದ್ರಿ, ಶಾಮಣ್ಣ ಅವರು ನನಗೆ ಉದ್ಯೋಗ ಕಲ್ಪಿಸಿದರು. ಆ ಸಂದರ್ಭದಲ್ಲಿ ನನ್ನ ನೆರವಿಗೆ ನಿಂತವರು ಬಿವಿಎಂ ಎಂದು ಹಳೆಯ ದಿನಗಳ ನೆನಪನ್ನು ಮೆಲುಕು ಹಾಕಿದರು.

ಪತ್ರಕರ್ತರಾದವರು ಶಬ್ದಕೋಶ ವೃದ್ಧಿಸಿಕೊಳ್ಳಬೇಕು ಜೊತೆಗೆ ಅಧ್ಯಯನಶೀಲತೆ ಬಹಳ ಮುಖ್ಯ. ಹಿಂದೆ ಪತ್ರಕರ್ತರಿಗೆ ಇದ್ದ ಅಧ್ಯಯನ ತುಡಿತ ಈಗಿಲ್ಲ. ಇಂದಿನ ಪತ್ರಕರ್ತರಲ್ಲಿ ಆ ಅಧ್ಯಯನಶೀಲತೆ ಕಡಿಮೆ ಆಗುತ್ತಿದೆ. ಈ ಬಗ್ಗೆ ಸುದ್ದಿಮನೆ ಗಂಭೀರವಾಗಿ ಗಮನಿಸಬೇಕು. ಮಾಹಿತಿ ಪೂರ್ಣವಿರುವ ಹಾಗೂ ಸರಿಯಾದ ವೃತ್ತಿ ನಿರತ ಪತ್ರಕರ್ತರನ್ನು ರೂಪಿಸಲು ಆದ್ಯತೆ ನೀಡಬೇಕಾಗಿದೆ ಎಂದರು.

5 ವಿಶೇಷ ಪುಟ ಕವರೇಜ್: ನಾಡಿನ ಉದ್ದಗಲಕ್ಕೂ ಕ್ರೀಡಾಕೂಟ ವರದಿಗಳನ್ನು ಮಾಡಿದ್ದೇನೆ. ಒಮ್ಮೆ ಗ್ರಾಮೀಣ ಕ್ರೀಡಾಕೂಟದ ಕವರೇಜ್ ಗಾಗಿ ಹೋಗಿದ್ದಾಗ 5 ಪುಟಗಳ ಸುದ್ದಿಯನ್ನು ನಾನೇ ಕೊಟ್ಟಿದ್ದೆ. ನಾಡಹಬ್ಬ ಮೈಸೂರು ದಸರಾ ಕವರೇಜ್ಗಾಗಿ ಹೋಗಿದ್ದಾಗಲೂ ಅಷ್ಟೆ. 5 ಪುಟಗಳ ಸುದ್ದಿಯನ್ನು ನಾನೇ ಕೊಟ್ಟಿದ್ದೆ. ಇದು ನನಗೆ ವೃತ್ತಿ ಜೀವನದ ಸವಾಲಾಗಿತ್ತು ಎಂದರು.

**ಭಾರತ-ಪಾಕಿಸ್ತಾನ ಮ್ಯಾಚ್:** ಆಗಿನ ಕಾಲಘಟ್ಟದಲ್ಲಿ ರಣಜಿ ಕ್ರಿಕೆಟ್ ಮ್ಯಾಚ್ ಅಂದರೆ ಬಾರಿ ಮಹತ್ವದ್ದು. ಕರ್ನಾಟಕ ಮತ್ತು ತಮಿಳುನಾಡು ನಡುವೆ ಮ್ಯಾಚ್ ಇದ್ದರೆ ಅದು ಭಾರತ ಪಾಕಿಸ್ತಾನ ನಡುವೆ ನಡೆಯುವ ಮ್ಯಾಚ್ ರೀತಿ ಇರುತಿತ್ತು. ಆ ಮ್ಯಾಚ್ನಲ್ಲಿ ಅಂಪೈರ್, ಕರ್ನಾಟಕ ತಂಡದ ಜಿ.ಆರ್.ವಿಶ್ವನಾಥ್ ಔಟ್ (ನಿಜವಾಗಿ ಔಟ್ ಆಗಿರಲಿಲ್ಲ) ಕೊಟ್ಟಾಗ ದೊಡ್ಡ ಗದ್ದಲವೇ ಸೃಷ್ಟಿಯಾಯಿತು. ಆಗ ಪೊಲೀಸ್ ಕಮಿಷನರ್ ಸಾಂಗ್ಲಿಯಾನ ಮಧ್ಯ ಪ್ರವೇಶ ಮಾಡಿ ಗಲಾಟೆಯನ್ನು ನಿಯಂತ್ರಿಸದೆ ಇದ್ದಿದ್ದರೆ ದೊಡ್ಡ ರದ್ಧಾಂತವೇ ನಡೆಯುತಿತ್ತು ಎಂದರು. ದೇಶದ ಪತ್ರಿಕಾ ಸ್ವಾತಂತ್ರವನ್ನು ಎತ್ತಿ ಹಿಡಿಯುವ ಉದ್ದೇಶದಿಂದ 1966 ನವೆಂಬರ್ 16ರಂದು ಪತ್ರಿಕಾ ಮಂಡಳಿಯನ್ನು ಅಸ್ತಿತ್ವಕ್ಕೆ ತಂದ ದಿನವನ್ನು ರಾಷ್ಟ್ರೀಯ ಪತ್ರಿಕಾ ದಿನಾಚರಣೆಯಾಗಿದೆ. ಈ ದಿನ ಹಿರಿಯ ಪತ್ರಕರ್ತರನ್ನು ಗೌರವಿಸುವ ಮೂಲಕ ರಾಷ್ಟ್ರೀಯ ಪತ್ರಿಕಾ ದಿನವನ್ನು ಕೆಯುಡಬ್ಲ್ಯೂಜೆ ಸರಳವಾಗಿ ಆಚರಣೆ ಮಾಡುತ್ತಿದೆ ಎಂದರು. ನಾಲ್ಕು ದಶಕಗಳ ಕಾಲ ಮಾಡಿರುವ ಡಿ.ಎಂ.ಭಟ್ ಅವರ ವೃತ್ತಿ ಸೇವೆಯನ್ನು ಸ್ಮರಿಸಿದರು. ಅಧ್ಯಕ್ಷ ಬಿ.ವಿ.ಮಲ್ಲಿಕಾರ್ಜುನಯ್ಯ ಮಾತನಾಡಿ, ಡಿ.ಎಂ.ಭಟ್ ಅವರದ್ದು ಸರಳ ವ್ಯಕ್ತಿತ್ವ. ಅವರು ಬೆಂಗಳೂರಿಗೆ ಬಂದ ದಿನದಿಂದಲೇ ಅವರನ್ನು ನಾನು ಗಮನಿಸುತ್ತಲೇ ಬಂದಿದ್ದೇನೆ. ಒಟ್ಟಿಗೆ ಕೆಲಸ ಮಾಡಿದ್ದೇವೆ. ಯಾರಿಗೆ ತೊಂದರೆ ಕೊಡದೆ, ಸದಾ ವೃತ್ತಿಪರವಾಗಿ ಕೆಲಸ ಮಾಡಿಕೊಂಡು ಬಂದಿರುವುದು ಶ್ಲಾಘನೀಯ ಎಂದರು. ಕರ್ನಾಟಕ ಕಾರ್ಯ ನಿರತ ಪತ್ರಕರ್ತರ ಸಂಘ ಪ್ರಧಾನ ಕಾರ್ಯದರ್ಶಿ ಜಿ.ಸಿ.ಲೋಕೇಶ ಸ್ವಾಗತಿಸಿದರು. ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ದೇವರಾಜು ವಂದಿಸಿದರು. ಬೆಂಗಳೂರು ನಗರ ಘಟಕದ ಶಿವರಾಜು, ಶರಣು ಬಸಪ್ಪ ಮತ್ತಿತರರು ಹಾಜರಿದ್ದರು.

# ಪುಸ್ತಕಗಳನ್ನು ಅಧ್ಯಯನ ಮಾಡಿ ಜೀವನ ಸಾರ್ಥಕ ಪಡಿಸಿಕೊಳ್ಳೋಣ

**ಚಾಮರಾಜನಗರ:** ಕನ್ನಡ ಸಾಹಿತ್ಯದಲ್ಲಿ ಶ್ರೇಷ್ಠ ಚಿಂತಕರು, ಜ್ಞಾನಿಗಳು ,ಸಾಹಿತಿಗಳು ,ಕವಿಗಳು ಸಾಹಿತ್ಯ ರಚನೆಯ ಮೂಲಕ ಮಹತ್ವದ ಕೊಡುಗೆ ನೀಡಿದ್ದಾರೆ. ಎಂಟು ಜ್ಞಾನಪೀಠ ಪ್ರಶಸ್ತಿಗಳು, ಮತ್ತು ಮೂರು ರಾಷ್ಟ್ರಕವಿ ಪ್ರಶಸ್ತಿಗಳು ಸಂದಿವೆ ಎಂದು ಕವಿ ಡಾ. ಬಿ ಆರ್ ಕೃಷ್ಣ ಕುಮಾರ್ ತಿಳಿಸಿದರು.

ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಸಭಾಂಗಣದಲ್ಲಿ ಅಖಿಲ ಕರ್ನಾಟಕ ಕನ್ನಡ ಮಹಾಸಭಾ ಜಿಲ್ಲಾ ಮತ್ತು ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಸಹಯೋಗದಲ್ಲಿ ನಡೆಯುತ್ತಿರುವ 50 ದಿನಗಳ ನಿರಂತರ ಕನ್ನಡ ರಾಜ್ಯೋತ್ಸವದ 15ನೇ ದಿನದ ಕಾರ್ಯಕ್ರಮದಲ್ಲಿ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಕುರಿತು ಮಾತನಾಡುತ್ತಾ ಕುವೆಂಪು, ಬೇಂದ್ರೆ, ಶಿವರಾಮ ಕಾರಂತ ,ಮಾಸ್ತಿ ವೆಂಕಟೇಶ ಅಯ್ಯಂಗಾರ್ ,ಗೋಕಾಕ್ ಅನಂತಮೂರ್ತಿ, ಗಿರೀಶ್ ಕಾರ್ನಾಡ್ , ಚಂದ್ರಶೇಖರ ಕಂಬಾರ ಕೃತಿಗಳ ಬಗ್ಗೆ ಮಾತನಾಡುತ್ತಾ ಸಾಹಿತ್ಯ ಕೃತಿಗಳು ಕನ್ನಡಿಗರ ಗೌರವದ ಕೃತಿಗಳಾಗಿವೆ. ಕನ್ನಡ ಸಾಹಿತ್ಯ ಓದುವ ಮೂಲಕ ಪುಸ್ತಕಗಳನ್ನು ಅಧ್ಯಯನ ಮಾಡಿ ಜೀವನವನ್ನು ಸಾರ್ಥಕ ಪಡಿಸಿಕೊಳ್ಳೋಣ ಎಂದರು.

ಉದ್ಘಾಟನೆಯನ್ನು ಸಂಸ್ಕೃತಿ ಚಿಂತಕ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸುರೇಶ್ ಎನ್ ಋಗ್ವೇದಿ ನೆರವೇರಿಸಿ ಮಾತನಾಡುತ್ತಾ ಕನ್ನಡದ ಸಾಹಿತ್ಯ ಮೇರು ಸಾಹಿತ್ಯ. ವಿಶ್ವದಲ್ಲೇ ಪ್ರಸಿದ್ಧಿಯನ್ನು ಪಡೆದಿರುವ ಸಾವಿರಾರು ಕೃತಿಗಳು ಇವೆ. ವಿಶ್ವದ ಎಲ್ಲೆಡೆ ಕನ್ನಡಿಗರು ವಾಸಿಸುತ್ತಿದ್ದು ಕನ್ನಡದ ಸಂಸ್ಕೃತಿ ಪರಂಪರೆ ಹಾಗೂ ರಾಜ್ಯೋತ್ಸವ ಕಾರ್ಯಕ್ರಮಗಳನ್ನು ಎಲ್ಲೆಡೆ ಕಾಣಬಹುದಾಗಿದೆ . ಸ್ವಾಭಿಮಾನ ಅಭಿಮಾನ ಜಾಗೃತಿ ಮೂಡುತ್ತಿದೆ. ಯುವ ಪೀಳಿಗೆಗೆ ಸಾಹಿತ್ಯದ ಅಭಿರುಚಿಯನ್ನು ಬೆಳೆಸುವ ಕಾರ್ಯ ಆಗಬೇಕು. ಸಂಘ-ಸಂಸ್ಥೆಗಳು ರಿಯಾಯಿತಿ ತರದಲ್ಲಿ ಪುಸ್ತಕಗಳನ್ನು ನೀಡಿದಾಗ ಕೊಂಡು ಓದುವ ಪ್ರವೃತ್ತಿ ಹೆಚ್ಚಾಗುತ್ತದೆ. ಪ್ರತಿ ಮನೆಯಲ್ಲೂ ನೂರಾರು ಕನ್ನಡ ಪುಸ್ತಕಗಳನ್ನು ಇಟ್ಟುಕೊಂಡು ಭವಿಷ್ಯದ ಮಕ್ಕಳಿಗೆ ಪುಸ್ತಕವನ್ನು ನೀಡುವ ಜೊತೆಗೆ ಕನ್ನಡದ ಸಾಹಿತ್ಯದ ಬೆಳವಣಿಗೆಗೆ ಎಲ್ಲರೂ ಕಾರಣ ಆಗಬೇಕಾಗಿದೆ. ನಮ್ಮೊಡನೆ ನೂರಾರು ಕವಿಗಳು, ಸಾಹಿತಿಗಳು, ಜ್ಞಾನಿಗಳು ಇದ್ದಾರೆ. ಅವರೊಂದಿಗೆ ಸಂವಾದ ,ಚರ್ಚೆ ಹಾಗೂ ಮಾತುಕತೆಯನ್ನು ಆಡುವ ಮೂಲಕ ಅಭಿಮಾನವನ್ನು ಬೆಳೆಸಬೇಕಿದೆ ಎಂದರು.



ಅಖಿಲ ಕರ್ನಾಟಕ ಕನ್ನಡ ಮಹಾಸಭಾ ಅಧ್ಯಕ್ಷರಾದ ಶ್ರೀನಿವಾಸ್ ಗೌಡ ಮಾತನಾಡಿ ಕನ್ನಡ ರಾಜ್ಯೋತ್ಸವ ಹಾಗೂ ಸುವರ್ಣ ಸಂಭ್ರಮದ ಅಂಗವಾಗಿ 50 ದಿನಗಳ ನಿರಂತರ ಕನ್ನಡ ರಾಜ್ಯೋತ್ಸವ ಸಮಾರಂಭದಲ್ಲಿ ಪ್ರತಿನಿತ್ಯ 630 ರಿಂದ 7:30ರ ವರೆಗೆ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಉಪನ್ಯಾಸ ,ಚರ್ಚೆ ,ಗಾಯನ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ .ಕನ್ನಡದ ಅಭಿಮಾನಿಗಳು, ಸಾಹಿತ್ಯ ಪರಿಷತ್ತಿನ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಿ ಕೊಡಬೇಕು. ಕನ್ನಡವನ್ನು ಎಲ್ಲರೂ ಸೇರಿ ಕಟ್ಟೋಣ ,ಕನ್ನಡ ಉಳಿವಿಗಾಗಿ ಶ್ರಮಿಸೋಣ ಎಂದರು. ಹಿರಿಯ ಕನ್ನಡ ಚಳುವಳಿಗಾರ ಶಾ ಮುರಳಿ,ರಾಜಗೋಪಾಲ್, ತಮಿಳು ಸಂಘದ ಅಧ್ಯಕ್ಷ ಜಗದೀಶ್ ,ಪನ್ಯದಹುಂಡಿ ರಾಜು ,ಶಿವಲಿಂಗ ಮೂರ್ತಿ, ಲಿಂಗರಾಜು, ಪದ್ಮ ಪುರುಷೋತ್ತಮ್, ದ್ವಾರಕೀಶ್, ಶಿವಮೂರ್ತಿ, ಶಿವಣ್ಣ, ಮುಂತಾದವರು ಉಪಸ್ಥಿತರಿದ್ದರು.

# ಪ್ರತಿ ಕ್ವಿಂಟಾಲ್ ರಾಗಿಗೆ 4290 ರೂಪಾಯಿ ಬೆಂಬಲ ಬೆಲೆ ನಿಗದಿ

**ಬೆಂಗಳೂರು ಗ್ರಾಮಾಂತರ:** ಕನಿಷ್ಠ ಬೆಂಬಲ ಬೆಲೆ ಯಡಿ ರೈತರಿಂದ ರಾಗಿ ಖರೀದಿಸಲು ಡಿಸೆಂಬರ್ 01 ರಿಂದ ನೋಂದಣಿ ಪ್ರಕ್ರಿಯೆ ಶುರುವಾಗಲಿದ್ದು, ನೋಂದಣಿ ಪ್ರಕ್ರಿಯೆಗೆ ಅಗತ್ಯ ಸಿದ್ಧತೆ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಡಾ.ಎನ್. ಶಿವಶಂಕರ್ ಅವರು ಸೂಚಿಸಿದರು.
ಜಿಲ್ಲಾಡಳಿತ ಭವನದ ಜಿಲ್ಲಾಧಿಕಾರಿಯವರ ಕಚೇರಿ ಸಭಾಂಗಣದಲ್ಲಿ ನಡೆದ ರೈತರಿಂದ ರಾಗಿ ಖರೀದಿಸಲು ಪೂರ್ವ ಸಿದ್ಧತಾ ಕ್ರಮಗಳ ಮೊದಲನೆಯ ಜಿಲ್ಲಾ ಟಾಸ್ಕ್ ಫೋರ್ಸ್ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಪ್ರತಿ ಕ್ವಿಂಟಾಲ್ ರಾಗಿಗೆ 4290 ರೂಪಾಯಿಗಳು ಬೆಂಬಲ ಬೆಲೆಯನ್ನು ಸರ್ಕಾರ ನಿಗದಿ ಪಡಿಸಿದೆ. ಕನಿಷ್ಟ ಬೆಂಬಲ ಯೋಜನೆಯಡಿ ರಾಗಿ ಖರೀದಿಗೆ ಸಂಬಂಧಿಸಿದಂತೆ ಸಂಗ್ರಹಣಾ ಏಜೆನ್ಸಿಗಳು ಪ್ರತಿ ತಾಲ್ಲೂಕು ಹಂತದಲ್ಲಿ ಅಗತ್ಯಕ್ಕೆ ತಕ್ಕಂತೆ ಖರೀದಿ ಕೇಂದ್ರಗಳನ್ನು ತೆರೆಯಬೇಕು, ರಾಗಿ ಖರೀದಿಗೆ ಸಂಬಂಧಿಸಿದಂತೆ ನೋಂದಣಿ ಪ್ರಕ್ರಿಯೆಗೆ ನಿಗದಿತ ಸ್ಥಳಗಳನ್ನು ಗುರ್ತಿಸಿ ರೈತರಿಗೆ ಮುಂಚಿತವಾಗಿ ಮಾಹಿತಿ ನೀಡಬೇಕು. ಖರೀದಿ ಕೇಂದ್ರಗಳ ನೋಂದಣಿಗೆ ಅವಶ್ಯಕತೆ ಇರುವ ಟೇಬಲ್, ಚೇರ್, ಕಂಪ್ಯೂಟರ್ ಗಳು, ವಿದ್ಯುತ್ ಸಂಪರ್ಕ, ಇಂಟರ್ನೆಟ್, ತೂಕದ ಯಂತ್ರ ವ್ಯವಸ್ಥೆ ಮಾಡಿ, ರೈತರಿಗೆ ಕುಡಿಯುವ ನೀರು, ಶೌಚಾಲಯ ವ್ಯವಸ್ಥೆ ಕಲ್ಪಿಸಿ ಎಂದು ಕೃಷಿ ಮಾರುಕಟ್ಟೆ ಮತ್ತು ಎ.ಪಿ.ಎಂ.ಸಿ ಅಧಿಕಾರಿಗಳಿಗೆ ಸೂಚಿಸಿದರು.ಡಿಸೆಂಬರ್ 01 ರಿಂದ ನೋಂದಣಿ ಪ್ರಕ್ರಿಯೆ ಶುರುವಾಗಲಿದ್ದು ಜನವರಿ ಮಾಹೆಯಲ್ಲಿ ರಾಗಿ ಖರೀದಿ ಪ್ರಕ್ರಿಯೆ ಶುರುವಾಗಲಿದೆ. ಹಾಗಾಗಿ ರೈತರಿಂದ ಖರೀದಿಸಿದ ರಾಗಿಯನ್ನು ಕ್ರೂಡಿಕರಿಸಿ ಶೇಖರಿಸಲು ಉಗ್ರಾಣಗಳು ವ್ಯವಸ್ಥಿತ ಗುಣಮಟ್ಟದಲ್ಲಿ ಇದೆಯೇ ಎಂದು ಪರಿಶೀಲಿಸಿ, ಅವಶ್ಯವಿದ್ದಲ್ಲಿ ಹೆಚ್ಚುವರಿ ಉಗ್ರಾಣಗಳನ್ನು ನಿಗದಿ ಪಡಿಸಿ ಎಂದರು. ರೈತರು ಕಡ್ಡಾಯವಾಗಿ ಕೃಷಿ ಇಲಾಖೆಯಿಂದ ಜಾರಿಗೊಳಿಸಿರುವ ಫ್ರೂಟ್ಸ್ ದತ್ತಾಂಶದಲ್ಲಿ ನೋಂದಾಯಿಸಿಕೊಂಡು, ಫ್ರೂಟ್ಸ್ ಐಡಿ ಪಡೆದಿರಬೇಕು. ನೋಂದಣಿ ಪ್ರಕ್ರಿಯೆಯಲ್ಲಿ ಫ್ರೂಟ್ಸ್ ಐಡಿ ಕಡ್ಡಾಯ ಎಂದು ಜಿಲ್ಲಾಧಿಕಾರಿ ಹೇಳಿದರು. ಸಭೆಯಲ್ಲಿ ಆಹಾರ ನಾಗರಿಕ ಸರಬರಾಜು ಇಲಾಖೆಯ ಉಪನಿರ್ದೇಶಕರಾದ ಜಿ.ಶಂಕರಮೂರ್ತಿ, ಕರ್ನಾಟಕ ಆಹಾರ ನಾಗರಿಕ ಸರಬರಾಜು ನಿಗಮದ ಜಿಲ್ಲಾ ವ್ಯವಸ್ಥಾಪಕರಾದ ತನ್ವೀರ್, ಕೃಷಿ ಇಲಾಖೆ ಜಂಟಿ ನಿರ್ದೇಶಕಿ ಕಲಾವತಿ, ಉಪನಿರ್ದೇಶಕಿ ಗಾಯಿತ್ರಿ, ಜಿಲ್ಲಾ ಉಗ್ರಾಣ ಕೇಂದ್ರಗಳ ವ್ಯವಸ್ಥಾಪಕರು ಮತ್ತು ಇತರರು ಉಪಸ್ಥಿತರಿದ್ದರು.

### ರಾಗಿ ನೋಂದಣಿ ಹಾಗೂ ಖರೀದಿ ಕೇಂದ್ರಗಳ ತೆರೆಯುವ ಸ್ಥಳಗಳು

ನೆಲಮಂಗಲ ತಾಲ್ಲೂಕು: ಕರ್ನಾಟಕ ಆಹಾರ ನಾಗರಿಕ ಸರಬರಾಜು ನಿಗಮದ ಅಕ್ಷರ ದಾಸೋಹ ಕೇಂದ್ರ, ಕೆಂಪಲಿಂಗನಹಳ್ಳಿ ಕ್ರಾಸ್, ಕುಣಿಗಲ್ ರಸ್ತೆ, ನೆಲಮಂಗಲ ತಾಲ್ಲೂಕು. ದೊಡ್ಡಬಳ್ಳಾಪುರ ತಾಲ್ಲೂಕು: ರೈತ ಭವನ ಕೇಂದ್ರ, ಎಂಪಿಎಂಸಿ ಯಾರ್ಡ್, ದೊಡ್ಡಬಳ್ಳಾಪುರ.ದೇವನಹಳ್ಳಿ ತಾಲ್ಲೂಕು: ಕರ್ನಾಟಕ ಆಹಾರ ನಾಗರಿಕ ಸರಬರಾಜು ನಿಗಮದ ಅಕ್ಷರ ದಾಸೋಹ ಕೇಂದ್ರ, ಕುರುಬರ ದೊಡ್ಡಿ ರಸ್ತೆ, ಚಿಕ್ಕಬಳ್ಳಾಪುರ ರಸ್ತೆ, ದೇವನಹಳ್ಳಿ. ಹೊಸಕೋಟೆ ತಾಲ್ಲೂಕು: ಕರ್ನಾಟಕ ಆಹಾರ ನಾಗರಿಕ ಸರಬರಾಜು ನಿಗಮದ ಅಕ್ಷರ ದಾಸೋಹ ಕೇಂದ್ರ, ವೀರಭದ್ರೇಶ್ವರ ರೈಸ್ ಮಿಲ್ ಕಾಂಪೌಂಡ್, ಮಾಲೂರು ರಸ್ತೆ, ಹೊಸಕೋಟೆ.

## ಮಾಜಿ ಕೇಂದ್ರ ಸಚಿವ ಎಂ. ವೀರಪ್ಪಮೊಯ್ಲಿ ಸಲಹೆ

# ಸವಾಲುಗಳಿಗೆ ಮಾಧ್ಯಮ ಕ್ಷೇತ್ರ ಸಜ್ಜಾಗಲಿ

**ಬೆಂಗಳೂರು:** ಇಂದಿನ ದಿನನಿತ್ಯದ ಸವಾಲುಗಳಿಗೆ ಮಾಧ್ಯಮ ಕ್ಷೇತ್ರ ಸುಸಜ್ಜಿತಗೊಳ್ಳಬೇಕು. ಸವಾಲುಗಳನ್ನು ಎದುರಿಸಲು ಎಲ್ಲಾ ಕಾಲದಲ್ಲೂ ನಮ್ಮನ್ನು ನಾವು ಸಿದ್ಧಪಡಿಸಿಕೊಳ್ಳಬೇಕೆಂದು ಮಾಜಿ ಮುಖ್ಯಮಂತ್ರಿ ಹಾಗೂ ಮಾಜಿ ಕೇಂದ್ರ ಸಚಿವ ಎಂ. ವೀರಪ್ಪಮೊಯ್ಲಿ ತಿಳಿಸಿದರು.

ಇಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸುಲೋಚನಾ ಸಭಾಂಗಣದಲ್ಲಿ ಕರ್ನಾಟಕ ಮಾಧ್ಯಮ ಅಕಾಡೆಮಿ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಹಯೋಗದಲ್ಲಿ ''ರಾಷ್ಟ್ರೀಯ ಪತ್ರಿಕಾ ದಿನಾಚರಣೆ'' ಅಂಗವಾಗಿ ''ಬದಲಾಗುತ್ತಿರುವ ಪತ್ರಿಕಾ ಮಾಧ್ಯಮದ ಸ್ವರೂಪ'' ವಿಷಯದ ಕುರಿತು ಹಮ್ಮಿಕೊಂಡಿದ್ದ ವಿಚಾರ ಸಂಕಿರಣ ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿ ಮಾತನಾಡಿದರು.

ಸುದ್ದಿ ಮಾಧ್ಯಮವಿರಬಹುದು, ಡಿಜಿಟಲ್ ಮಾಧ್ಯಮವಿರಬಹುದು, ಸಾಮಾಜಿಕ ಜಾಲತಾಣವಿರಬಹುದು ಇದರ ಎಲ್ಲಾ ಒಳಹರಿವು ನಮ್ಮ ಮುಂದಿದೆ ಮತ್ತು ಇದರ ಭವಿಷ್ಯತ್ ಕೂಡ ಆಶಾದಾಯಕವಾಗಿದೆ. ಸವಾಲನ್ನು ಯಾವ ರೀತಿ ಎದುರಿಸಬೇಕು ಎನ್ನುವ ಬಗ್ಗೆಯು ರಾಷ್ಟ್ರೀಯ ಪತ್ರಿಕಾ ದಿನಾಚರಣೆ ಆಚರಿಸುವ ಸಂದರ್ಭದಲ್ಲಿ ಬದಲಾಗುತ್ತಿರುವ ಪತ್ರಿಕಾ ಮಾಧ್ಯಮದ ಸ್ವರೂಪದ ವಿಶ್ವರೂಪವನ್ನೇ ಡಾ.ಎ.ನಾರಾಯಣ ಅವರು ನಮ್ಮ ಮುಂದೆ ಇಟ್ಟಿದ್ದಾರೆ ಎಂದರು.

ಮನುಷ್ಯನಲ್ಲಿ ಯಾವ ರೀತಿ ಕ್ಷಿಪ್ರವಾಗಿ ಬದಲಾವಣೆಯಾಗುತ್ತಿದೆ. ಅದಕ್ಕೆ ಸರಿಯಾದ ಸ್ಪಂದನೆಯನ್ನು ಕೂಡ ಮಾಧ್ಯಮ ಕ್ಷೇತ್ರ ನೀಡುತ್ತಿದೆ. ಮಾಧ್ಯಮ ನಿಂತ ನೀರಲ್ಲ, ಮನುಷ್ಯ ಯಾವ ರೀತಿ ಬದಲಾವಣೆಯಾಗುತ್ತಾನೋ ಅದೇ ರೀತಿ ಮಾಧ್ಯಮ ಕ್ಷೇತ್ರವು ಬದಲಾಗುತ್ತಿದೆ. ಕ್ಷಿಪ್ರತೆಗಳಿರಬಹುದು, ದೋಷಗಳಿರಬಹುದು, ಬದಲಾವಣೆಗಳಿರಬಹುದು ಸವಾಲು ನೀಡುತ್ತಿರುವ ಕ್ಷೇತ್ರದಲ್ಲಿ ಸಾಧಕ-ಬಾಧಕಗಳನ್ನು ತೆರೆದಿಡುತ್ತಿದೆ. ಇದೆಲ್ಲ ಬದಲಾವಣೆಯ ಲಕ್ಷಣಗಳು. ನಿರಾಶಾದಾಯಕವಲ್ಲ ಎಂದರು.



ಮಾಧ್ಯಮ ಮುನ್ನಡೆದಂತೆ ಸಮಾಜವು ಒಗ್ಗಿಕೊಂಡು ಹೋಗುತ್ತಿದೆ ಎಂದು ನಾವು ಆಶಿಸಿದ್ದೇವೆ. ಭಾರತದಲ್ಲಿಯೇ ಅಲ್ಲ ಇಡೀ ವಿಶ್ವದಲ್ಲೆ 4ನೇ ಅಂಗವಾಗಿ ಪತ್ರಿಕೋದ್ಯಮ ಇದೆ. ಪ್ರಜಾಪ್ರಭುತ್ವ ಬದುಕಬೇಕಾದರೆ ಮಹತ್ತರ ಪಾತ್ರವನ್ನು ಮಾಧ್ಯಮ ನಿರ್ವಹಿಸಬೇಕು. ನಾಗರೀಕರ ಬದಲಾವಣೆಯ ಸ್ಪಂದನೆಗಳಿಗೆ ಮಾಧ್ಯಮ ಬದಲಾವಣೆಯಾಗಬೇಕು. ಮಾಧ್ಯಮದ ಅನುಗುಣವಾಗಿ ಸಮಾಜ ಬದಲಾಗಬೇಕು ಎಂದರು.

ಕರ್ನಾಟಕ ಮಾಧ್ಯಮ ಅಕಾಡೆಮಿಯ ಅಧ್ಯಕ್ಷೆ ಶ್ರೀಮತಿ ಆಯೇಶಾ ಖಾನಂ ಅವರು ಮಾತನಾಡಿ, ಇಂದು ನಮ್ಮ ಜೊತೆ ಮಾಜಿ ಮುಖ್ಯಮಂತ್ರಿ ವೀರಪ್ಪ ಮೊಯ್ಲಿ ಅವರು ಇದ್ದಾರೆ, ಇದು ಕರ್ನಾಟಕ ಮಾಧ್ಯಮ ಅಕಾಡೆಮಿಗೆ ಇನ್ನೊಂದು ಹೆಮ್ಮೆಯ ವಿಷಯ. ಏಕೆಂದರೆ ಗುಂಡೂರಾವ್ ಸರ್ಕಾರದಲ್ಲಿ ಹಣಕಾಸು ಮಂತ್ರಿಯಾಗಿ ಅವರು ಮಾಧ್ಯಮ ಅಕಾಡೆಮಿಯನ್ನು ಅಸ್ಥಿತ್ವಕ್ಕೆ ತಂದರು. ಆಗಿನ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷರಾದ ಅರ್ಜುನ್ ದೇವ್ ಅವರ ನೇತೃತ್ವದಲ್ಲಿ ಕನ್ನಡ ಮಾಧ್ಯಮ ಅಕಾಡೆಮಿ ಸ್ಥಾಪನೆ ಮಾಡಿದರು. ಮತ್ತು ಮಾಜಿ ಮುಖ್ಯಮಂತ್ರಿ ಎಂ. ವೀರಪ್ಪ ಮೊಯ್ಲಿ ಅವರು ಈ ಅಕಾಡೆಮಿಯನ್ನು ಅಸ್ತಿತ್ವಕ್ಕೆ ತಂದರು.

ಕಾರ್ಯಕ್ರಮದಲ್ಲಿ ಮಾತನಾಡಿದ ಅಜಿಂ ಪ್ರೇಂಜಿ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಡಾ. ಎ. ನಾರಾಯಣ ಅವರು ಮಾತನಾಡುತ್ತಾ, ಎಲ್ಲಾ ಮಾಧ್ಯಮಗಳಿಗಿಂತ ಮುದ್ರಣ ಮಾಧ್ಯಮವೇ ಮಿಗಿಲು. ಆದರೆ ಇಂದಿನ ದಿನಗಳಲ್ಲಿ ವಿದ್ಯುನ್ಮಾನ ಮಾಧ್ಯಮ ಮತ್ತು ಸಾಮಾಜಿಕ ಜಾಲತಾಣಗಳಾದ ಫೇಸ್‌ಬುಕ್, ಇಂಟರ್‌ನೆಟ್, ಟ್ವಿಟ್ಟರ್, ಯೂ ಟ್ಯೂಬ್ ಮಾಧ್ಯಮಗಳ ಪ್ರಭಾವದಿಂದಾಗಿ ಪತ್ರಿಕಾ ಮಾಧ್ಯಮವು ಪತ್ರಿಕಾ ರಂಗ ಬಹಳಷ್ಟು ಸೊರಗಿಹೋಗಿದೆ. ಜನರು ಪತ್ರಿಕೆಗಳನ್ನು ಓದುವ ಅಭ್ಯಾಸವನ್ನು ಜನರು ಮರೆತು ಹೋಗಿದ್ದಾರೆ ಎಂದು ತಿಳಿಸಿದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆಯುಕ್ತರಾದ ಹೇಮಂತ್ ಎಂ. ನಿಂಬಾಳ್ಕರ್ ಅವರು ಮಾತನಾಡುತ್ತಾ, ಇಂದು ಪ್ರತಿಯೊಬ್ಬರೂ ಸಹ ಪತ್ರಕರ್ತರೆ. ಪ್ರತಿಯೊಬ್ಬರೂ ಫೇಸ್‌ಬುಕ್, ಟ್ವಿಟ್ಟರ್, ಯುಟ್ಯೂಬ್ ಮುಂತಾದ ಜಾಲತಾಣಗಳಲ್ಲಿ ತತ್‌ಕ್ಷಣ ಸುದ್ದಿಗಳನ್ನು ಹಂಚಿಕೊಳ್ಳುತ್ತಾರೆ. ಆದರೆ ಆದ್ಯ ಪತ್ರಕರ್ತ ಯಾರು? ನಿಜವಾದ, ಸತ್ಯವಾದ, ವಸ್ತು ನಿಷ್ಟವಾದ ಸುದ್ದಿಗಳನ್ನು ನೀಡುವವನೇ ಆದ್ಯ ಪತ್ರಕರ್ತ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕಾರ್ಯನಿರತ ಪತ್ರಕರ್ತರ ಅಧ್ಯಕ್ಷರಾದ ಶಿವಾನಂದ ತಗಡೂರು, ಮಾಧ್ಯಮ ಅಕಾಡೆಮಿಯ ಕಾರ್ಯದರ್ಶಿಗಳಾದ ಎಂ.ಸಹನ, ಮಾಧ್ಯಮ ಅಕಾಡೆಮಿಯ ಸದಸ್ಯರುಗಳು ಹಾಗೂ ಹಿರಿಯ ಪತ್ರಕರ್ತರು ಸೇರಿದಂತೆ ವಿವಿಧ ಕಾಲೇಜಿನ ಪತ್ರಿಕೋದ್ಯಮ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಬೋರನಕಣಿವೆಯಲ್ಲಿ ವರ್ಣರಂಜಿತ ಮಕ್ಕಳ ದಿನಾಚರಣೆ

**ಹುಳಿಯಾರು:** ಹುಳಿಯಾರು ಹೋಬಳಿಯ ಬೋರನಕಣಿವೆ ಪ್ರೌಢಶಾಲಾ ವಿಭಾಗದಲ್ಲಿ ಮಕ್ಕಳ ದಿನಾಚರಣೆಯು ವರ್ಣ ರಂಜಿತವಾಗಿ ಆಚರಿಸಲ್ಪಟ್ಟಿತು. ವಿದ್ಯಾರ್ಥಿ ಸಚಿವ ಸಂಪುಟದ ಪ್ರಧಾನಿ ತೇಜಸ್ವಿನಿ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಎಲ್ಲವೂ ಮಕ್ಕಳಿಂದಲೇ ನಿರ್ವಹಿಸಲ್ಪಟ್ಟಿತ್ತು,

ಮಕ್ಕಳೇ ಮುಖ್ಯ ಅತಿಥಿಗಳು. ಭಾಷಣಕಾರರು, ಮಕ್ಕಳೇ ಹಾಡಿದರು, ನರ್ತಿಸಿದರು, ಏಕ ಪಾತ್ರಾಭಿನಯ ಮಾಡಿದರು, ಸ್ಪರ್ಧೆಗಳನ್ನು ಏರ್ಪಡಿಸಿದ್ದರು, ಬಹುಮಾನಗಳನ್ನು ವಿಸರಿಸಿದರು, ತಮಗೆ ಪಾಠ ಮಾಡಿದ ಶಿಕ್ಷಕರನ್ನು ಗೌರವಿಸಿದರು, ಸ್ವಾಗತ ನಿರೂಪಣೆ, ವಂದನಾರ್ಪಣೆ, ಪ್ರಸ್ತಾವನೆ ಎಲ್ಲವೂ ಮಕ್ಕಳಿಂದಲೇ ನಡೆಯಿತು,

ಸಭೆಯಲ್ಲಿ ಶಿಕ್ಷಕ ವಸಂತಕುಮಾರ್ ಪೋಸ್ಕೋ ಕಾಯ್ದೆ ಬಗ್ಗೆ ವಿವರಿಸಿದರು. ಡಾಕ್ಟರ್ ವಿಜಯ ರಾಘವೇಂದ್ರ ಆರೋಗ್ಯದ ಬಗ್ಗೆ ಮಾಹಿತಿ ನೀಡಿದರು, ಪ್ರೊ.ಬಸವರಾಜು ಉತ್ತಮ ಸಾಧನೆ ಮಾಡ್ರಿ ಎಂದು ಸಲಹೆ ನೀಡಿದರು,

ವರ್ಣರಂಜಿತವಾಗಿ ನಡೆದ ಸಮಾರಂಭದಲ್ಲಿ ಸುವರ್ಣ ವಿದ್ಯಾ ಚೇತನದ ಅಧ್ಯಕ್ಷ ರಾಮಕೃಷ್ಣಪ್ಪ, ಎಸ್‌ಡಿಎಂಸಿ ಅಧ್ಯಕ್ಷ ಶಿವಶಂಕರ್, ವಿಶ್ರಾಂತ ಹಿರಿಯ ಶಿಕ್ಷಕಿ ಮಂಜಮ್ಮ, ಮುಖ್ಯ ಶಿಕ್ಷಕ ಟಿ.ಎನ್. ರಮೇಶ್, ಶಿಕ್ಷಕರಾದ ಓಂಕಾರ್, ರೇಖಾ, ರಮೇಶ್, ಅನಿತಾ, ಬಸವರಾಜು, ಚಂದ್ರು, ಕಾರ್ಯಾಲಯ ಸಿಬ್ಬಂದಿ ವಿಷ್ಣು ವಿಜಯಮ್ಮ, ಅಡುಗೆಯವರು, ಬಿಎಡ್ ಪ್ರಶಿಕ್ಷಣಾರ್ಥಿಗಳು ಹಾಗು ಪ್ರೌಢಶಾಲಾ ವಿದ್ಯಾರ್ಥಿಗಳು ಭಾಗವಹಿಸಿದ್ದರು.



### ಜಯ ಗಳಿಸಿದ ಜಿ.ಎನ್.ನಾಗೇಶ್

**ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಸದಸ್ಯರ ಚುನಾವಣೆಯಲ್ಲಿ ಜಿ.ಎನ್.ನಾಗೇಶ್ 39 ಮತಗಳನ್ನು ಪಡೆದು ಜಯಗಳಿಸಿದ್ದಾರೆ. ವಿಧಾನ ಪರಿಷತ್ ಸದಸ್ಯ ವಿವೇಕಾನಂದ ಅವರು ಸನ್ಮಾನಿಸಿದರು. ಕೃಷ್ಣೆಗೌಡ ಶಿವಾನಂದ ಹುಚ್ಚಯ್ಯ ವಿರೂಪಾಕ್ಷ ರವಿ ಭಾಗವಹಿಸಿದ್ದರು.**

# ಮಳೆಗಾಳಿಗೆ ನೆಲಕ್ಕೆ ಬಿದ್ದ ರಾಗಿ ಬೆಳೆ

**ಹುಳಿಯಾರು:** ಚಿಕ್ಕನಾಯಕನಹಳ್ಳಿ ತಾಲೂಕಿನಲ್ಲಿ ಗುರುವಾರ ಸಂಜೆ ಸುರಿದ ಧಾರಾಕಾರ ಮಳೆಗೆ ರಾಗಿ ಬೆಳೆ ನೆಲಕ್ಕೆ ಬಿದ್ದಿದೆ. ಪರಿಣಾಮ ಅಪಾರ ಪ್ರಮಾಣದ ಫಸಲು ನಷ್ಟವಾಗುವ ಆತಂಕ ರೈತರನ್ನು ಕಾಡುತ್ತಿದೆ. ಕಳೆದ ವರ್ಷ ಇಡೀ ತಾಲೂಕಿನಲ್ಲಿ ಮಳೆಯ ಕೊರತೆಯಾಗಿ ಬರಗಾಲ ಆವರಿಸಿ ಬಿತ್ತನೆ ಕುಂಟಿತವಾಗಿತ್ತು. ಆದರೆ ಈ ವರ್ಷ ವಾಡಿಕೆಗಿಂತ ಹೆಚ್ಚು ಮಳೆಯಾಗಿದ್ದರಿಂದ ತಾಲೂಕಿನ ಗುರಿ ಮೀರಿ ಬಿತ್ತನೆಯ ಪ್ರಗತಿಯಾಗಿದೆ. 31,500 ಹೆಕ್ಟೆರ್ ರಾಗಿ ಬಿತ್ತನೆಯಾಗಿತ್ತು. ಆದರೆ ಸೆಪ್ಟೆಂಬರ್ ಮಾಹೆಯಲ್ಲಿ ಒಂದೇ ಒಂದು ಹನಿ ಮಳೆ ನೀರು ಭೂ ರಮೆಯ ತಣಿಸದೆ ರೈತನಿಗೆ ಆಘಾತ ನೀಡಿತ್ತು. ತೇವಾಂಶದ ಕೊರತೆಯುಂಟಾಗಿ ಬೆಳೆ ಹಾನಿಯ ಭೀತಿ ಎದುರಾಗಿತ್ತು. ಉತ್ತಮ ಮಳೆಯಾಗುವ ನಿರೀಕ್ಷೆಯಲ್ಲಿ ಸಾಲ?ಸೋಲ ಮಾಡಿ ತಮ್ಮ ಹೊಲಗಳಲ್ಲಿ ಬಿತ್ತನೆ ಮಾಡಿದ್ದ ರೈತ ಚಿಂತಾಕ್ರಾಂತರಾನ್ನಾಗಿಸಿತ್ತು. ಅದೃಷ್ಟವಶತ್ ರಾಗಿ ಕಾಳು ಕಟ್ಟುವ ಹಂತದಲ್ಲಿದ್ದ ಸಂದರ್ಭದಲ್ಲಿ ಉತ್ತಮ ಮಳೆಯಾಯಿತು. ಇಡೀ ವಾರ ತುಂತುರು ಮಳೆಯಾದ ಪರಿಣಾಮ ಒಣಗುತ್ತವೆ ಎನ್ನುತ್ತಿದ್ದ ರಾಗಿ ಸಹ ನಳನಳಿಸುವಂತಾಯಿತು. ಈ ವರ್ಷ ಬಂಪರ್ ಬೆಳೆ ಬಂದೇ ತೀರುತ್ತದೆ ಎನ್ನುವಷ್ಟರಲ್ಲಿ ಮತ್ತೆ ಮಳೆ ಸುರಿದು ರೈತರನ್ನು ಆತಂಕಕ್ಕೀಡು ಮಾಡಿದೆ. ಗುರುವಾರ ಗಂಟೆಗೂ ಹೆಚ್ಚು ಕಾಲ ಸುರಿದ ಮಳೆಗೆ ರಾಗಿ ಬೆಳೆ ನೆಲ ಕಚ್ಚಿದ್ದು ಅಪಾರ ಪ್ರಮಾಣದ ಫಸಲು ನಷ್ಟದ ಹಾದಿಯಲ್ಲಿದೆ. ಬಹುತೇಕ ಬೆಳೆಗಳು ಬೆಳೆಗಾರರ ಕೈಗೆ ಬಂದಿವೆ. ಇನ್ನೂ ಸ್ವಲ್ಪ ದಿನಗಳು ಕಳೆದರೇ ಪೂರ್ಣ ಬೆಳೆ ಕೈಗೆ ಸಿಗಲಿದ್ದು, ಈ ಹಂತದಲ್ಲಿ ಜಡಿ ಮಳೆ ಪರಿಣಾಮ ಹಾಗೂ ಮೋಡ ಕವಿದ ವಾತಾವರಣದಿಂದ ಗಾಳಿಗೆ ರಾಗಿ ಬೆಳೆಗಳು ನೆಲ ಕಚ್ಚಿವೆ. ಬೆಳೆದು ನಿಂತಿರುವ ರಾಗಿ ತೆನೆಗಳಲ್ಲಿ ತೇವಾಂಶ ಉಳಿದುಕೊಂಡಿದ್ದು ಬೆಳೆಗಾರರಿಗೆ ನಷ್ಟದ ಆತಂಕ ಎದುರಾಗಿದೆ. ಅಲ್ಲದೆ ಈಗಾಗಲೇ ಕೊಯ್ಲು ಮಾಡಿರುವ ರಾಗಿ ಒಣಗಿಸಿ, ಕಣ ಮಾಡಿ ತೆನೆ ಬೇರ್ಪಡಿಸಲು ಅಡ್ಡಿಯಾಗಿದೆ. ನೆಲ ಕಚ್ಚಿರುವ ರಾಗಿ ಪೈರನ್ನು ಎತ್ತಿಕಟ್ಟುವ ಕಾರ್ಯವಾಗಬೇಕು. ಆದರೇ ಬೆಳೆಗಾರರು ಹೊಲಗಳ ಒಳಗೆ ಹೋಗಲಾರದಂತ ಸ್ಥಿತಿಯಲ್ಲಿ ಚಾಪೆ ರೀತಿಯಲ್ಲಿ ರಾಗಿ ಪೈರು ಮಲಗಿರುವುದು ಬೆಳೆಗಾರರಲ್ಲಿ ಆತಂಕಕ್ಕೆ ಕಾರಣವಾಗಿದೆ. ಅಲ್ಲದೆ ಬಿಸಿಲಿಲ್ಲದೆ ಇಡೀ ದಿನ ಮೋಡಕವಿದ ವಾತವರಣ ಮತ್ತಷ್ಟು ರೈತರನ್ನು ಚಿಂತೆಗೀಡು ಮಡಿದೆ. ಇನ್ನೂ ಐದಾರು ದಿನ ಮಳೆಯಾಗುವ ಸೂಚನೆಯನ್ನು ಹವಮಾನ ಇಲಾಖೆ ನೀಡಿದೆ. ಅಂತಿಮ ಹಂತದಲ್ಲಿ ಸತತ ಮಳೆಯಾದರೇ ರಾಗಿ ಫಸಲು ತೆನೆಯಲ್ಲೇ ಮೊಳಕೆ ಹೊಡೆದು ನಷ್ಟಕ್ಕೆ ಒಳಗಾಗಲಿದೆ ಎನ್ನುತ್ತಾರೆ ರೈತರು.

## ವಾರ್ಡ್ ಮತ್ತು ಗ್ರಾಮಸಭೆ

**ಕೋಲಾರ:** ಪ್ರಸಕ್ತ ಸಾಲಿನ ವಾರ್ಡ್ ಸಭೆ ಮತ್ತು ಗ್ರಾಮ ಸಭೆಯನ್ನು ಸಾರ್ವಜನಿಕರ ಕುಂದುಕೊರತೆಗಳ ಮತ್ತು ವಿವಿಧ ಯೋಜನೆಗಳ ಫಲಾನುಭವಿಗಳ ಆಯ್ಕೆ, ದೂರದೃಷ್ಠಿ ಯೋಜನೆ, ಗ್ರಾಮನೈರ್ಮಲ್ಯ ಯೋಜನೆ, ತೆರಿಗೆ ಪರಿಷ್ಕರಣೆ ಹಾಗೂ ವಿವಿಧ ಅಭಿವೃದ್ಧಿ ಕಾಮಗಾರಿಗಳ ಪಟ್ಟಿ ತಯಾರು ಮಾಡಲು ನವೆಂಬರ್ 20 ರಂದು ಮುದುವಾಡಿ, ವಾನರಾಸಿ, ಅರಿನಾಗನಹಳ್ಳಿ ಹಾಗೂ ನವೆಂಬರ್ 21 ರಂದು ನಾಗನಾಯಕನಹಳ್ಳಿ, ಜನಪನಹಳ್ಳಿ, ತೊಟ್ಲಿಗಾನಹಳ್ಳಿ ಮತ್ತು ಮು/ಹೊಸಹಳ್ಳಿಗಳಲ್ಲಿ ವಾರ್ಡ್ ಸಭೆ ಮತ್ತು ಗ್ರಾಮಸಭೆಗಳನ್ನು ಏರ್ಪಡಿಸಲಾಗಿದೆ. ಸಭೆಯನ್ನು ನವೆಂಬರ್ 26 ರಂದು ಬೆಳಿಗ್ಗೆ 11.00 ಗಂಟೆಗೆ ಗ್ರಾಮ ಪಂಚಾಯ್ತಿಯ ಕಟ್ಟಡದಲ್ಲಿ ಅಧ್ಯಕ್ಷರಾದ ಎಂ.ಎಸ್.ಹರೀಶ್ ಬಾಬು ರವರ ಅಧ್ಯಕ್ಷತೆಯಲ್ಲಿ ಹಾಗೂ ನೋಡಲ್ ಅಧಿಕಾರಿಯಾದ ಚನ್ನಬಸಪ್ಪ ರವರ ಸಮ್ಮುಖದಲ್ಲಿ ಗ್ರಾಮಸಭೆಯನ್ನು ನಡೆಸಲಾಗುವುದು. ಎಲ್ಲಾ ಸಾರ್ವಜನಿಕರು ವಿವಿಧ ಸಂಘ-ಸಂಸ್ಥೆಗಳ ಅಧ್ಯಕ್ಷರು, ಸದಸ್ಯರು, ಪ್ರತಿನಿಧಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಸಭೆಗಳನ್ನು ಯಶಸ್ವಿಗೊಳಿಸಬೇಕೆಂದು ಮುದುವಾಡಿ ಗ್ರಾಮ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಆರೋಗ್ಯ ಕಾರ್ಯಕ್ರಮ

**ಹುಳಿಯಾರು:** ಹುಳಿಯಾರು ಹೋಬಳಿಯ ದಸೂಡಿ ಗ್ರಾಮ ಪಂಚಾಯಿತಿಯಿಂದ ತಾಲೂಕ್ ಮಟ್ಟದ ಆರೋಗ್ಯ ಕಾರ್ಯಕ್ರಮ ಆಯೋಜಿಸಲಾಯಿತು. ಈ ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯಿತಿ ಸದಸ್ಯ ಮರಿಯಪ್ಪನವರು ಮಾತನಾಡಿ ಆರೋಗ್ಯ ಇಲಾಖೆ ಗ್ರಾಮಪಂಚಾಯಿತಿಗೆ ಗ್ರಾಮದ ಸ್ವಚ್ಛತೆ ಬಗ್ಗೆ ಆರೋಗ್ಯ ಸುಧಾರಣ ಕ್ರಮದ ಬಗ್ಗೆ ಆಗಾಗ್ಗೆ ಸಲಹೆ ಸೂಚನೆ ನೀಡಬೇಕು. ಅದನ್ನು ಸರಿಯಾಗಿ ಪಾಲಿಸಲು ನಮ್ಮ ಪಂಚಾಯಿತಿ ಸದಾ ಸಿದ್ಧ ಈ ರೀತಿ ಕಾರ್ಯಕ್ರಮಗಳು ಬರಿ ಆಶಾಕಾರ್ಯಕರ್ತರು, ಅಂಗನವಾಡಿ ಕಾರ್ಯಕರ್ತರಿಗೆ ಮತ್ತು ವಾಟರ್ಮನ್ ಗಳಿಗೆ ಮಾತ್ರವಲ್ಲದೆ ಗ್ರಾಮದ ಪ್ರತಿಯೊಬ್ಬ ನಾಗರಿಕರಿಗೂ ತಲಪಬೇಕು ಎಂದು ಅಭಿಪ್ರಾಯಪಟ್ಟರು. ದಸೂಡಿ ಗ್ರಾಮ ಪಂಚಾಯಿತಿ ಪಿಡಿಓ ಮುದ್ದಲಿಂಗಯ್ಯ, ಗ್ರಾಮ ಪಂಚಾಯಿತಿ ಅಧ್ಯಕ್ಷೆ ಮಂಜುಳಾ ಸೇರಿದಂತೆ ಸದಸ್ಯರು, ಅಂಗನವಾಡಿ ಕಾರ್ಯಕರ್ತರು, ಆಶಾಕಾರ್ಯಕರ್ತರು, ವಾಟರ್ ಮ್ಯಾನ್‌ಗಳು ಭಾಗವಹಿಸಿದ್ದರು.

## ಇಂಧನ ಸಚಿವರ ಜಿಲ್ಲಾ ಪ್ರವಾಸ

**ಚಾಮರಾಜನಗರ:** ಇಂಧನ ಸಚಿವರಾದ ಕೆ.ಜೆ ಜಾರ್ಜ್ ಅವರು ನವೆಂಬರ್ 19ರಂದು ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ. ಅಂದು ಬೆಳಿಗ್ಗೆ 10.30 ಗಂಟೆಗೆ ಚಾಮರಾಜನಗರಕ್ಕೆ ಆಗಮಿಸಿ ಜಿಲ್ಲಾ ಕಾಂಗ್ರೆಸ್ ಸಮಿತಿ ಕಚೇರಿಗೆ ಭೇಟಿ ನೀಡುವರು. ಬೆಳಿಗ್ಗೆ 11.30 ಗಂಟೆಗೆ ನಗರದ ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿರುವ ಕೆ.ಡಿ.ಪಿ ಸಭಾಂಗಣದಲ್ಲಿ ಜಿಲ್ಲೆಯ ಚುನಾಯಿತ ಜನಪ್ರತಿನಿಧಿಗಳೊಂದಿಗೆ ಇಂಧನ ಇಲಾಖೆಗೆ ಸಂಬಂಧಿಸಿದಂತೆ ಪ್ರಗತಿ ಪರಿಶೀಲನಾ ಸಭೆ ನಡೆಸುವರು ಎಂದು ಪ್ರಕಟಣೆ ತಿಳಿಸಿದೆ.

## ಅಧಿಕ ಭಾರ ಸಾಗಿಸುವ ವಾಹನಗಳ ಮೇಲೆ ಕಾನೂನು ಕ್ರಮ

**ಚಿಕ್ಕಬಳ್ಳಾಪುರ:** ಚಿಕ್ಕಬಳ್ಳಾಪುರ ವ್ಯಾಪ್ತಿಯ ಚದಲಪುರ ಗೇಟ್ ಬಳಿ ಅಪಘಾತ ಸಂಭವಿಸಿದ ಕಾರಣ ಪ್ರಾದೇಶಿಕ ಸಾರಿಗೆ ಇಲಾಖೆಯು ಅಧಿಕ ಭಾರ ಸಾಗಿಸುವ ರವಾನೆದಾರ ಮತ್ತು ಪರವಾನಿಗೆದಾರರ ಸರಕು ಸಾಗಣೆ ವಾಹನಗಳ ಮೇಲೆ ಮೋಟಾರು ವಾಹನಗಳ ಕಾಯ್ದೆ 194 ರ ಪ್ರಕಾರ ಕಟ್ಟುನಿಟ್ಟಿನ ಕ್ರಮವಹಿಸಲಾಗುತ್ತದೆ ಎಂದು ಪ್ರಾದೇಶಿಕ ಸಾರಿಗೆ ಅಧಿಕಾರಿ ಎ.ವಿವೇಕಾನಂದ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ದೇಸಿ ಸಾಂಸ್ಕೃತಿಕ ಸಂಭ್ರಮ

**ಚಿಕ್ಕಬಳ್ಳಾಪುರ:** ಗೌತಮ ಬುದ್ಧ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಘ (ರಿ), ಇಡಗೂರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಧನದಲ್ಲಿ ದೇಸಿ ಸಾಂಸ್ಕೃತಿಕ ಸಂಭ್ರಮವನ್ನು ನವೆಂಬರ್ 20 ರಂದು ಸರ್ಕಾರಿ ಸ್ವತಂತ್ರ ಪದವಿ ಪೂರ್ವ ಕಾಲೇಜು ಆವರಣ, ಕೋಟಾಲದಿನ್ನೆ, ಇಲ್ಲಿ ಆಯೋಜಿಸಲಾಗಿದೆ. ಉದ್ಘಾಟನೆಯ ಮತ್ತು ಅಧ್ಯಕ್ಷತೆಯನ್ನು ಗೌರಿಬಿದನೂರು ವಿಧಾನಸಭಾ ಕ್ಷೇತ್ರದ ಶಾಸಕರಾದ ಕೆ.ಹೆಚ್. ಪುಟ್ಟಸ್ವಾಮಿಗೌಡ ರವರು ನೆರವೇರಿಸಲಿದ್ದಾರೆ. ಪ್ರಸ್ತಾವಿಕ ನುಡಿಯನ್ನು ಸರ್ಕಾರಿ ಸ್ವತಂತ್ರ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಆರ್.ಆದಿಕೇಷರಾವ್ ರವರು ನೆರವೇರಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಗೌರಿಬಿದನೂರು ತಹಶೀಲ್ದಾರ್ ಎಸ್.ಮಹೇಶ್ ಪತ್ರಿ, ತಾಲ್ಲೂಕು ಪಂಚಾಯ್ತಿ ಕಾರ್ಯನಿರ್ವಹಣಾಧಿಕಾರಿ ಜಿ.ಕೆ ಹೊನ್ನಯ್ಯ, ಹೊಸೂರು ಗ್ರಾಮ ಪಂಚಾಯ್ತಿ ಅಧ್ಯಕರಾದ ಕೆ. ಗೀತನಾಗರಾಜು, ಉಪಾಧ್ಯಕ್ಷರಾದ ಗಂಗರತ್ನತಿಮ್ಮರಾಜು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಡಿ.ಎಂ.ರವಿಕುಮಾರ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕರಾದ ಎಂ.ಜುಂಜಣ್ಣ, ಕರ್ನಾಟಕ ನಾಟಕ ಅಕಾಡೆಮಿಯ ಸದಸ್ಯರಾದ ಕೆ.ವಿ ನಾಯಕ್ ರವರು ಭಾಗವಹಿಸಲಿದ್ದಾರೆ.

## ಹುಳಿಯಾರಿನಲ್ಲಿ ಉಚಿತ ಗಾರ್ಮೆಂಟ್ ಟೈಲರಿಂಗ್ ತರಬೇತಿ

**ಹುಳಿಯಾರು:** ಹುಳಿಯಾರಿನ ದುರ್ಗಮ್ಮನ ಗುಡಿ ಬೀದಿಯಲ್ಲಿರುವ ಕಿಯೋನಿಕ್ಸ್ ಕಂಪ್ಯೂಟರ್ ತರಬೇತಿ ಸಂಸ್ಥೆಯು



18 ರಿಂದ 45 ವರ್ಷ ವಯಸ್ಸಿನ ನಿರುದ್ಯೋಗಿ ಯುವಕ ಯುವತಿಯರಿಗೆ 2 ತಿಂಗಳ ಉಚಿತ ಟೈಲರಿಂಗ್ ತರಬೇತಿ (ಸಿದ್ಧ ಉಡುಪು ತಯಾರಿಕೆ) ನೀಡಲಿದ್ದು, ಆಸಕ್ತರು ಮೇಲ್ಕಂಡ ವಿಳಾಸದಲ್ಲಿ 25/11/2024 ರ ಒಳಗೆ ಅರ್ಜಿ ಸಲ್ಲಿಸಬಹುದಾಗಿದೆ. ತರಬೇತಿ ಪಡೆದಂತವರಿಗೆ ಜಿಲ್ಲೆಯ ಪ್ರಖ್ಯಾತ ಗಾರ್ಮೆಂಟ್ಸ್ ಗಳಲ್ಲಿ ಉದ್ಯೋಗ ಕಲ್ಪಿಸಲು ನೆರವು ನೀಡಲಾಗುವುದು. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ ಸಿ.ಎನ್.ಪ್ರಭು, ಕಿಯೋನಿಕ್ಸ್ ಕಂಪ್ಯೂಟರ್ ತರಬೇತಿ ಸಂಸ್ಥೆ. ಹುಳಿಯಾರು 9141689595 9448748259.ಷ

## ಕಿತ್ತೂರುರಾಣಿ ಚೆನ್ನಮ್ಮ ಪ್ರಶಸ್ತಿ ಪುರಸ್ಕೃತೆ ಬಿ.ಎಸ್.ಅನುಪಮಾ ಬಣ್ಣನೆ

# ಸಿದ್ಧಗಂಗಾಶ್ರೀಗಳ ದಾಸೋಹ ಸೇವೆ ಅನನ್ಯ

**ಮಂಡ್ಯ :** ಕಾಯಕ ಮತ್ತು ದಾಸೋಹದ ಮೂಲಕ ಸರ್ವರನ್ನೂ ಸಮಾನವಾಗಿ ಕಂಡ ಹನ್ನೆರಡನೇ ಶತಮಾನದ ವಿಶ್ವಗುರು ಬಸವಣ್ಣನವರ ಆದರ್ಶಗಳನ್ನು 21ನೇ ಶತಮಾನದಲ್ಲಿ ಅನುಷ್ಠಾನಗೊಳಿಸಿದ ಕರ್ನಾಟಕರತ್ನ, ಪದ್ಮಭೂಷಣ ಸಿದ್ದಗಂಗಾಶ್ರೀಗಳ ದಾಸೋಹ ಸೇವೆ ಅವಿಸ್ಮರಣೀಯ ಎಂದು ಕಿತ್ತೂರುರಾಣಿ ಚೆನ್ನಮ್ಮ ಪ್ರಶಸ್ತಿ ಪುರಸ್ಕೃತೆ ಬಿ.ಎಸ್. ಅನುಪಮಾ ಬಣ್ಣಿಸಿದರು.

ನಗರದ ಸ್ವರ್ಣಸಂದ್ರಬಡಾವಣೆಯಲ್ಲಿರುವ ಪೂಜ್ಯಸಿದ್ದಗಂಗಾಶ್ರೀಗಳ ಉದ್ಯಾನವನದಲ್ಲಿ ಹುಣ್ಣಿಮೆಯ ಅಂಗವಾಗಿ ಕಾಯಕಯೋಗಿ ಫೌಂಡೇಶನ್ ವತಿಯಿಂದ ನಡೆದ 'ದಾಸೋಹ ಹುಣ್ಣಿಮೆ' ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಹಸಿದುಬಂದವರಿಗೆ ಅನ್ನ ನೀಡುವುದೇ ಧರ್ಮ ಎಂದು ಲೋಕಕ್ಕೆ ಸಾರಿದ ಸಿದ್ದಗಂಗಾಶ್ರೀಗಳು ಜಾತಿ, ಮತ, ಪಂಥಗಳೆನ್ನದೆ ತಮ್ಮ ಸುದೀರ್ಘ 111ವರ್ಷಗಳ ಅವಧಿಯಲ್ಲಿ ಕೋಟ್ಯಾಂತರ ಮಂದಿಗೆ ಅನ್ನ, ಅರಿವು, ಆಸರೆಯನ್ನು ನೀಡಿ ಬಡಮಕ್ಕಳ ಉದ್ಧಾರಕ್ಕೆ ಶ್ರಮಿಸಿದ ಮಹಾನ್ ಸಂತ ಎಂದರು. ಶಿಕ್ಷಣದ ಮೂಲಕ ಸಮಾಜದ ಉದ್ಧಾರ ಸಾಧ್ಯ ಎಂಬುದನ್ನು ಅರಿತಿದ್ದ ಸ್ವಾಮೀಜಿ ಸ್ವಾತಂತ್ರ?ಯ ಪೂರ್ವದಿಂದಲೇ ಗ್ರಾಮಾಂತರ ಪ್ರದೇಶಗಳಲ್ಲಿ ಶಿಕ್ಷಣಕ್ಕೆ ಒತ್ತು ನೀಡಿ ಒಂದು ವರ್ಗಕ್ಕೆ ಮೀಸಲಾಗಿದ್ದ ಸಂಸ್ಕೃತ ಭಾಷೆಯನ್ನು ಸರ್ವರೂ ಕಡ್ಡಾಯವಾಗಿ ಕಲಿಯಬೇಕೆಂದು ಸಂಸ್ಕೃತ ಪಾಠಶಾಲೆಯನ್ನು ಸಿದ್ದಗಂಗಾಮಠದಲ್ಲಿ ಆರಂಭಿಸಿ ಉಚಿತವಾಗಿ ಎಲ್ಲರಿಗೂ ವಿದ್ಯೆ ದೊರೆಯುವಂತೆ ಮಾಡಿ ಶೈಕ್ಷಣಿಕ ಕ್ರಾಂತಿಯನ್ನೇ ಮಾಡಿದ ಮಹಾಮಾನವತಾವಾದಿ ಎಂದು ಹೇಳಿದರು.



ದಾಸೋಹಕ್ಕೆ ಚಾಲನೆ ನೀಡಿ ಮಾತನಾಡಿದ ಕಾಯಕಯೋಗಿ ಫೌಂಡೇಶನ್ ಅಧ್ಯಕ್ಷ ಎಂ.ಶಿವಕುಮಾರ್, ಪರಮಪೂಜ್ಯ ಸಿದ್ದಗಂಗಾಶ್ರೀಗಳು ನಾಡಿನ ಎಲ್ಲಾ ಮಠಾಧಿಪತಿಗಳಿಗೆ ಆದರ್ಶಪ್ರಾಯವಾಗಿದ್ದಾರೆ. ಜಾತ್ಯಾತೀತ ಪರಿಕಲ್ಪನೆಯ ಪ್ರತೀಕದಂತಿದ್ದ ಪರಮಪೂಜ್ಯ ಸಿದ್ದಗಂಗಾಶ್ರೀಗಳು ಬಸವಣ್ಣನವರ ತತ್ವ ಸಿದ್ಧಾಂತಗಳನ್ನು ತಮ್ಮ ಕಾಯಕ ಹಾಗೂ ದಾಸೋಹ ಸೇವೆಯ ಮೂಲಕ ಜನಮಾನಸದಲ್ಲಿ ಬೇರೂರಿದ ಶ್ರೇಷ್ಠ ದಾರ್ಶನಿಕರಾಗಿದ್ದಾರೆ ಎಂದರು.

ಪ್ರೀತಿ ವಾತ್ಸಲ್ಯಗಳ ಮಹಾಮೇರುವಾಗಿದ್ದ ಸಿದ್ದಗಂಗಾಶ್ರೀಗಳು ಬಡವ ಬಲ್ಲಿದರೆನ್ನದಂತೆ ಎಲ್ಲರನ್ನೂ ಸಮಭಾವದಿಂದ ಕಾಣುವ ಸಮದರ್ಶಿಗಳಾಗಿದ್ದರು. ಕಾಯಕಮಾಡದೆ ಉಣ್ಣುವುದು ಕೂಳಿಗೆ ಸಮ ಎಂದು ಬೋದಿಸಿದ ಸ್ವಾಮೀಜಿ ಕಾಯಕತತ್ವಕ್ಕೆ ಹೆಚ್ಚಿನ ಮಹತ್ವ ನೀಡಿದ ಪರಿಣಾಮ ಇಂದಿಗೂ ಕೋಟ್ಯಾಂತರ ಭಕ್ತರ ಭಾವಕೋಶದಲ್ಲಿ ಕಾಯಕಯೋಗಿ, ಲೋಕಜಂಗಮ, ನಡೆದಾಡುವ ದೇವರೆಂದು ನೆಲೆಯಾಗಿದ್ದಾರೆ. ಅಂತಹವರ ಸಂಸ್ಮರಣೆಯಲ್ಲಿ ಪ್ರತಿ ಹುಣ್ಣಿಮೆಯಲ್ಲೂ ಉದ್ಯಾನವನದಲ್ಲಿ 'ದಾಸೋಹ' ಸೇವೆ ನಡೆಸಲಾಗುತ್ತಿದೆ ಎಂದರು.

ಸಿದ್ದಗಂಗಾಶ್ರೀ ಸೇವಾ ಸಮಿತಿ ಅಧ್ಯಕ್ಷ ಎಂ.ಆರ್. ಮಂಜುನಾಥ್, ಲಿಂಗಾಯತಮಹಾಸಭಾ ಅಧ್ಯಕ್ಷ ಎಂ.ಎಸ್.ಮಂಜುನಾಥ್ ಬೆಟ್ಟಹಳ್ಳಿ, ತಬ್ರೈಸ್ಖಾನ್, ಯೋಗೀಶ್ಗೌಡ, ಬಿಜೆಪಿ ಮುಖಂಡ ಜಗದೀಶ್, ಆಟೋಚಾಲಕರ ಸಂಘದ ರಾಜಣ್ಣ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ದೈಹಿಕ, ಮಾನಸಿಕ ಆರೋಗ್ಯಕ್ಕೆ ಸಹಕಾರಿ

**ಚಾಮರಾಜನಗರ:** ವಿದ್ಯಾರ್ಥಿಗಳು ಪಠ್ಯೇತರ ಚಟುವಟಿಕೆಯಲ್ಲಿ ಭಾಗವಹಿಸುವುದು ಬಹಳ ಮುಖ್ಯ. ಇದರಿಂದ ದೈಹಿಕ ಹಾಗೂ ಮಾನಸಿಕ ಆರೋಗ್ಯಕ್ಕೆ ಸಹಕಾರಿಯಾಗುತ್ತದೆ ಎಂದು ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರಾದ ಎನ್. ಮುನಿರಾಜು ಅಭಿಪ್ರಾಯಪಟ್ಟರು.

ನಗರದ ಹೊರವಲಯದಲ್ಲಿರುವ ಭೋಗಪುರದ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದ ವಸತಿಯುಕ್ತ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿಂದು ಹಮ್ಮಿಕೊಳ್ಳಲಾಗಿದ್ದ ಸಾಂಸ್ಕೃತಿಕ, ಕ್ರೀಡೆ, ರಾಷ್ಟ್ರೀಯ ಸೇವಾ ಯೋಜನೆ ಹಾಗೂ ವಿವಿಧ ಸಮಿತಿಗಳ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು.

ಪ್ರತಿ ವಿದ್ಯಾರ್ಥಿಯು ಓದಿನ ಜತೆ ಕ್ರೀಡೆ, ಸಾಂಸ್ಕೃತಿಕ, ಕಾಲೇಜಿನ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಬೇಕು. ಕೌಶಲ್ಯ ಪೂರ್ಣ ಜೀವನ ವೃದ್ಧಿಸಿಕೊಳ್ಳಬೇಕು. ನಿಮ್ಮ ಭವಿಷ್ಯ ನಿಮ್ಮ ಕೈಯಲ್ಲಿದೆ, ನಿಮಗೆ ನೀವೆ ಬೆಳಕು, ನಿಮ್ಮ ಏಳಿಗೆಗೆ ನೀವೆ ಶಕ್ತಿ ಎಂಬ ಮಹನೀಯರ ತತ್ವ ವಾಣಿಗಳನ್ನು ಆದರ್ಶವಾಗಿಟ್ಟುಕೊಂಡು ಜೀವನದಲ್ಲಿ ಉತ್ತುಂಗಕ್ಕೇರಬೇಕು. ಡಾ. ಬಿ.ಆರ್. ಅಂಬೇಡ್ಕರ್ ಅಂತರಾಷ್ಟ್ರೀಯ ಶಿಷ್ಯ ವೇತನ ಯೋಜನೆಯಡಿ ವಿದೇಶದಲ್ಲಿ ವ್ಯಾಸಂಗ ಮಾಡುವ ಅವಕಾಶವನ್ನು ಸಮಾಜ ಕಲ್ಯಾಣ ಇಲಾಖೆ ಮಾಡಿಕೊಟ್ಟಿದೆ. ಇದನ್ನು ಸದುಪಯೋಗಪಡಿಸಿಕೊಳ್ಳಿ ಎಂದರು.

ಬಿರ್ಸಾ ಮುಂಡಾ ಅವರು ಬುಡಕಟ್ಟು ಸಮುದಾಯವನ್ನು ಜಾಗೃತಿಗೊಳಿಸಿ ಬ್ರಿಟಿಷರ ವಿರುದ್ಧ ಹೋರಾಡಿ ತಮ್ಮ ಜೀವನವನ್ನು ದೇಶಕ್ಕಾಗಿ ಅರ್ಪಿಸಿದರು. ಅವರು ಯುವ ಪೀಳಿಗೆಗೆ ಪ್ರೇರಣೆಯಾಗಿದಾರೆ. ಬಿರ್ಸಾ ಮುಂಡಾ ಹೆಸರಿನಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರ ಬುಡಕಟ್ಟು ಸಮುದಾಯದ ಅಭಿವೃದ್ಧಿಗೆ ಅನೇಕ ಯೋಜನೆಗಳನ್ನು ಜಾರಿಗೆ ತಂದಿದೆ ಎಂದು ಮುನಿರಾಜು ಅವರು ತಿಳಿಸಿದರು.

ಸುಸಜ್ಜಿತ ವಸತಿಯುಕ್ತ ಸರ್ಕಾರಿ ಪ್ರಥಮ ದರ್ಜೆ ಕಾಲೇಜನ್ನು ನಿರ್ಮಿಸಿರುವುದು ಇದೇ ಮೊದಲು. ಹಾಸ್ಟೆಲ್ ನಿರ್ವಹಿಸುವ ಜವಾಬ್ದಾರಿಯನ್ನು ಸಮಾಜ ಕಲ್ಯಾಣ ಇಲಾಖೆಯು ಆದಷ್ಟು ಬೇಗ ಕೈಗೊಳ್ಳಲಿದೆ. ಹಾಸ್ಟೆಲ್ ಪ್ರಾರಂಭವಾಗುವವರೆಗೆ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಪಟ್ಟಣದ ವಿದ್ಯಾರ್ಥಿನಿಲಯದಲ್ಲಿ ಅವಕಾಶ ನೀಡಲಾಗುವುದು ಎಂದರು.

ವಿದ್ಯಾರ್ಥಿಗಳು ಓದಿನ ಕಡೆ ಗಮನಹರಿಸಿ ಜೀವನದಲ್ಲಿ ಯಶಸ್ವಿಯಾಗಬೇಕು. ಪ್ರಸ್ತುತ್ತ ದಿನಗಳಲ್ಲಿ ಯುವ ಸಮೂಹ ಅತಿ ಹೆಚ್ಚು ಮೊಬೈಲ್ ಬಳಸುತ್ತಿದ್ದು ಇದರಿಂದ ಕೇಳಿಸಿಕೊಳ್ಳುವ ಶಕ್ತಿ ಮತ್ತು ಕೌಶಲ್ಯಗಳು ಕಡಿಮೆಯಾಗುತ್ತದೆ. ಮೊಬೈಲ್ ಬಳಕೆಯು ಆರೋಗ್ಯಕರವಾಗಿರಬೇಕು ಎಂದು ಮುನಿರಾಜು ಅವರು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ವಸತಿಯುಕ್ತ ಕಾಲೇಜಿನ ಪ್ರಾಂಶುಪಾಲರಾದ ಡಾ. ಪಿ. ದೇವರಾಜು ಅವರು ಮಾತನಾಡಿ 2023-24ನೇ ಸಾಲಿನಲ್ಲಿ ಕಾಲೇಜು ಶಿಕ್ಷಣ ಇಲಾಖೆಯ ನೆರವಿನೊಂದಿಗೆ ಅಚ್ಚುಕಟ್ಟಾದ ವಸತಿಯುಕ್ತ ಪದವಿ ದರ್ಜೆ ಕಾಲೇಜು ಸ್ಥಾಪನೆಯಾಗಿದ್ದು ಶೈಕ್ಷಣಿಕವಾಗಿ ಹಿಂದುಳಿದ ವಿದ್ಯಾರ್ಥಿಗಳನ್ನು ಉನ್ನತ ಶಿಕ್ಷಣದಲ್ಲಿ ಮುಂದುವರಿಸುವಂತಹ ಉದ್ದೇಶದಿಂದ ಮಾದರಿ ವಸತಿ ಕಾಲೇಜನ್ನು ಆರಂಭಿಸಲಾಗಿದೆ. ವಿದ್ಯಾರ್ಥಿಗಳು ಪ್ರಬುದ್ಧರಾಗಿ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ತಮ್ಮದೇ ಆದ ಛಾಪನ್ನು ಮೂಡಿಸುವಂತಹ ವ್ಯಕ್ತಿತ್ವ ಬೆಳೆಸಿಕೊಳ್ಳಬೇಕು ಎಂದರು. ಹನೂರಿನ ಜಿ.ವಿ. ಗೌಡ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಚಂದ್ರಮ್ಮ, ಶ್ರೀ ಮಹರ್ಷಿ ವಾಲ್ಮೀಕಿ ಪ್ರಶಸ್ತಿ ಪುರಸ್ಕೃತರಾದ ಡಾ. ರತ್ನಮ್ಮ, ಸಾಂಸ್ಕೃತಿಕ ಚಿಂತಕರು, ಅಂತರಾಷ್ಟ್ರೀಯ ಮಟ್ಟದ ಖ್ಯಾತ ಗಾಯಕರಾದ ಸಿ.ಎಂ ನರಸಿಂಹಮೂರ್ತಿ, ಭೋಗಾಪುರ ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ರೂಪ, ಪಂಚಾಯತ್ ಅಭಿವೃದ್ಧಿ ಅಧಿಕಾರಿ ಮಾನಸ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಸಂಜೆ ಟಿಪ್ಸ್

## ಟೀಚ್ ಫಾರ್ ಇಂಡಿಯಾದಿಂದ ಭಾರತದಲ್ಲಿ ಆರ್ಟ್ಸ್ ಫೆಲೋಶಿಪ್ ಪ್ರಕಟಣೆ

ಲಾಭರಹಿತ ಶೈಕ್ಷಣಿಕ ಸಮಾನತೆಗೆ ಶ್ರಮಿಸುತ್ತಿರುವ ಸಂಸ್ಥೆ ಟೀಚ್ ಫಾರ್ ಇಂಡಿಯಾ ಭಾರತದಲ್ಲಿ ತನ್ನ 15ನೇ ವಾರ್ಷಿಕೋತ್ಸವದ ಅಂಗವಾಗಿ 'ವಿಥ್ ಲವ್' ಸಂಗೀತ ಕಾರ್ಯಕ್ರಮದೊಂದಿಗೆ ಆರ್ಟ್ಸ್ ಫೆಲೋಶಿಪ್ ಪ್ರಕಟಿಸಿದೆ. ಈ ಎರಡನೆಯ ಆವೃತ್ತಿಯು ಟೀಚ್ ಫಾರ್ ಇಂಡಿಯಾ ಒದಗಿಸುತ್ತಿರುವ ಸಂಸ್ಥೆಯ ಎರಡು ವರ್ಷಗಳ ಫೆಲೋಶಿಪ್ ನ ಎರಡನೇ ಆವೃತ್ತಿಯಾಗಿದೆ. ಈ ಹೊಸ ಕಾರ್ಯಕ್ರಮದೊಂದಿಗೆ ಟೀಚ್ ಫಾರ್ ಇಂಡಿಯಾ ಈಗ ಮಕ್ಕಳಿಗೆ ಅತ್ಯುತ್ತಮ ಶಿಕ್ಷಣ ಪಡೆಯಲು ಮತ್ತು ಫೆಲೋಗಳಿಗೆ ನಾಯಕತ್ವ ಅಭಿವೃದ್ಧಿಯ ಅವಕಾಶಗಳನ್ನು ಒದಗಿಸಲು ನೆರವಾಗುತ್ತದೆ. ಜನವರಿ 6, 2025ರ ನಂತರ ಆಕಾಂಕ್ಷಿಗಳು ಹೊಸ ಪೂರ್ಣಕಾಲಿಕ ಪಾವತಿಸಿದ ಆರ್ಟ್ಸ್ ಫೆಲೋಶಿಪ್ ಗೆ ಅರ್ಜಿ ಸಲ್ಲಿಸಬಹುದು. ಈ ಆವಿಷ್ಕಾರಕ ಕಾರ್ಯಕ್ರಮವು ಫೆಲೋಗಳಿಗೆ ವಿದ್ಯಾರ್ಥಿಯ ಧ್ವನಿ, ಅಭಿವ್ಯಕ್ತಿ ಮತ್ತು ಸಂಪರ್ಕವನ್ನು ಭಾರತದಲ್ಲಿ ಅವಕಾಶ ವಂಚಿತರ ಶಾಲೆಗಳಲ್ಲಿ ಬೆಳೆಸಲು ಉನ್ನತ ಗುಣಮಟ್ಟದ ಕಲಾ ಶಿಕ್ಷಣ ನೀಡುವ ಮೂಲಕ ಶೈಕ್ಷಣಿಕ ಅಸಮಾನತೆಯ ಅಂತರ ತುಂಬಲು ಶಕ್ತಿ ನೀಡುತ್ತದೆ. ಈ ಆರ್ಟ್ಸ್ ಫೆಲೋಶಿಪ್ ಅನ್ನು ಟೀಚ್ ಫಾರ್ ಇಂಡಿಯಾ ಆಲಮ್ಸ್, ಹೊರಗಿನ ಪರಿಣಿತರು ಮತ್ತು ಶಿಕ್ಷಣದಲ್ಲಿ ಕಲೆಗೆ ಕೆಲಸ ಮಾಡುವ ಸದಸ್ಯರ ಮೂಲಕ ಕಲಿತಿದ್ದು ಅಂತಿಮವಾಗಿ ಅದು ಆರ್ಟ್ಸ್ ಫೆಲೋಶಿಪ್ ನಲ್ಲಿ ಅಂತ್ಯಗೊಂಡಿತು. ಈ ಧ್ಯೇಯೋದ್ದೇಶವನ್ನು ಮತ್ತಷ್ಟು ಮುಂದುವರಿಸುವ ಉದ್ದೇಶದಿಂದ ಟೀಚ್ ಫಾರ್ ಇಂಡಿಯಾ ತನ್ನ ಕಾರ್ಯಾಚರಣೆಗಳನ್ನು 2032ರ ವೇಳೆಗೆ 3-5 ಹೊಸ ನಗರಗಳಿಗೆ ವಿಸ್ತರಿಸಲಿದೆ. ಇದು ತನ್ನ ವ್ಯಾಪ್ತಿಯನ್ನು ದೇಶವ್ಯಾಪಿ 11-13 ನಗರಗಳಿಗೆ ವಿಸ್ತರಿಸಲಿದೆ (ಪ್ರಸ್ತುತ ಟೀಚ್ ಫಾರ್ ಇಂಡಿಯಾ ಅಹಮದಾಬಾದ್, ಬೆಂಗಳೂರು, ಚೆನ್ನೈ, ದೆಹಲಿ, ಹೈದರಾಬಾದ್, ಕೋಲ್ಕತಾ, ಮುಂಬೈ ಮತ್ತು ಪುಣೆಗಳನ್ನು ಒಳಗೊಂಡು 8 ನಗರಗಳಲ್ಲಿದೆ). ಈ ಸಂಸ್ಥೆಯು 2032ರ ವೇಳೆಗೆ ಶಿಕ್ಷಕರು, ಶಿಕ್ಷಕರ ತರಬೇತುದಾರರು, ಶಾಲಾ ನಾಯಕರು, ವಿದ್ಯಾರ್ಥಿ ನಾಯಕರು, ಸರ್ಕಾರದ ಅಧಿಕಾರಿಗಳು ಮತ್ತು ಉದ್ಯಮಿಗಳನ್ನು ಒಳಗೊಂಡು 50,000 ನಾಯಕರನ್ನು ಅಭಿವೃದ್ಧಿಪಡಿಸಲು ಬದ್ಧವಾಗಿದೆ. ಈ ಮಹತ್ತರ ಕ್ಷಣದ ಕುರಿತು ಟೀಚ್ ಫಾರ್ ಇಂಡಿಯಾ ಸಂಸ್ಥಾಪಕ ಮತ್ತು ಸಿಇಒ ಶಹೀನ್ ಮಿಸ್ತ್ರಿ, ''ಇದು ನಮಗೆ ಅತ್ಯಂತ ಭಾವನಾತ್ಮಕ ಕ್ಷಣವಾಗಿದೆ. 15 ವರ್ಷಗಳ ಟೀಚ್ ಫಾರ್ ಇಂಡಿಯಾದ ಪ್ರಯಾಣವು ತೃಪ್ತಿಕರ ಅನುಭವ ನೀಡಿದೆ ಎಂದರು.

## ಕ್ಯಾಬೇಜ್ ಪಕೋಡ

### ಪಾಕ ಶಾಲೆ



### ಬೇಕಿರುವ ಸಾಮಗ್ರಿ

ಸಣ್ಣಗೆ ಹೆಚ್ಚಿದ 2 ಕಪ್ ಕ್ಯಾಬೇಜ್, ಸಣ್ಣಗೆ ಹೆಚ್ಚಿದ ಒಂದು ಈರುಳ್ಳಿ, ಮುಕ್ಕಾಲು ಕಪ್ ಕಡಲೆ ಹಿಟ್ಟು, ಕಾಲು ಕಪ್ ಅಕ್ಕಿ ಹಿಟ್ಟು, ಒಂದು ಚಮಚ ಅಚ್ಚಖಾರದ ಪುಡಿ, ಕಾಲು ಚಮಚ ಅರಿಶಿನ, ಚಿಟಿಕೆ ಇಂಗು, 1 ಚಮಚ ಶುಂಠಿ-ಬೆಳ್ಳುಳ್ಳಿ ಪೇಸ್ಟ್, ಹೆಚ್ಚಿದ ಕರಿಬೇವಿನ ಎಲೆ, ರುಚಿಗೆ ತಕ್ಕಷ್ಟು ಉಪ್ಪು, ಕರಿಯಲು ಎಣ್ಣೆ.

### ಮಾಡುವ ವಿಧಾನ

ಒಂದು ಬೌಲ್ ನಲ್ಲಿ ಹೆಚ್ಚಿದ ಕ್ಯಾಬೇಜ್, ಈರುಳ್ಳಿ ಹಾಕಿ. ಅದಕ್ಕೆ ಕಡಲೆಹಿಟ್ಟು, ಅಕ್ಕಿ ಹಿಟ್ಟನ್ನು ಕೂಡ ಹಾಕಿಕೊಳ್ಳಿ. ಅಚ್ಚಖಾರದ ಪುಡಿ, ಅರಿಶಿನ, ಇಂಗು, ಶುಂಠಿ-ಬೆಳ್ಳುಳ್ಳಿ ಪೇಸ್ಟ್, ಕರಿಬೇವಿನ ಎಲೆ ಮತ್ತು ಉಪ್ಪು ಹಾಕಿ ಚೆನ್ನಾಗಿ ಮಿಕ್ಸ್ ಮಾಡಿ. ಈರುಳ್ಳಿ ಮತ್ತು ಕ್ಯಾಬೇಜ್ ಅನ್ನು ಚೆನ್ನಾಗಿ ಹಿಸುಕಿದರೆ ಅದರಿಂದ ನೀರಿನ ಅಂಶ ಹೊರಬರುತ್ತದೆ. ಹಿಟ್ಟನ್ನು ಕಲಸಲು ಸುಲಭವಾಗುತ್ತದೆ. ಅಗತ್ಯವಿದ್ದಲ್ಲಿ 2 ಚಮಚ ನೀರು ಬೆರೆಸಬಹುದು. ರೆಡಿ ಮಾಡಿದ ಹಿಟ್ಟನ್ನು ಸಣ್ಣಸಣ್ಣ ಉಂಡೆಗಳನ್ನಾಗಿ ಮಾಡಿ ಬಿಸಿ ಎಣ್ಣೆಯಲ್ಲಿ ಬಿಡಿ. ಮಧ್ಯಮ ಉರಿಯಲ್ಲಿ ಪಕೋಡ ಗರಿಗರಿಯಾಗುವವರೆಗೆ ಹೊಂಬಣ್ಣಕ್ಕೆ ಬರುವವರೆಗೆ ಕರಿಯಿರಿ. ಗರಿಗರಿಯಾದ ಕ್ಯಾಬೇಜ್ ಪಕೋಡವನ್ನು ಟೊಮೆಟೋ ಸಾಸ್ ಜೊತೆಗೆ ಸವಿಯಿರಿ.

## ಪುಷ್ಪಾ-2 ಟ್ರೇಲರ್ ಬಿಡುಗಡೆ: ಹೊಸ ದಾಖಲೆ



ಐಕಾನ್ ಸ್ಟಾರ್ ಅಲ್ಲು ಅರ್ಜುನ್ ಅಭಿನಯದ ಪುಷ್ಪ 2 ಚಿತ್ರದ ಟ್ರೈಲರ್ ಬಿಡುಗಡೆಯಾಗಿದೆ. ಪುಷ್ಪ 2 ಸಿನಿಮಾದ ಟ್ರೇಲರ್ ನೋಡಿದ ಫ್ಯಾನ್ಸ್ ಫುಲ್ ಖುಷ್ ಆಗಿದ್ದಾರೆ. ಮಾತ್ರವಲ್ಲ ಟ್ರೈಲರ್ನಲ್ಲಿ ಅಲ್ಲು ಅರ್ಜುನ್ ಅಬ್ಬರ ಕಂಡು ಸಿನಿಪ್ರಿಯರು ಫುಲ್ ಫಿದಾ ಆಗಿದ್ದಾರೆ.

ಸಿನಿಮಾದಲ್ಲಿ ಪುಷ್ಪ 2 ಚಿತ್ರದ ಟ್ರೇಲರ್ ಗೆ ನಿರ್ದೇಶಕ ಸುಕುಮಾರ್ ಪವರ್ ಪ್ಯಾಕ್ಡ್ ಆಯಕ್ಷನ್ ಗಳನ್ನು ತುಂಬಿದ್ದಾರೆ. ಇದೀಗ ಟ್ರೈಲರ್ ರಿಲೀಸ್ ಆದ ಕೆಲವೇ ಗಂಟೆಗಳಲ್ಲಿ ಈ ಸಿನಿಮಾ ಭಾರತೀಯ ಸಿನಿಮಾ ಇತಿಹಾದಸಲ್ಲೇ ವಿಭಿನ್ನ ದಾಖಲೆಯೊಂದನ್ನು ಮಾಡಿದೆ ಎಂದು ಸಿನಿಮಾ ತಂಡ ಎಕ್ಸ್ (ಟ್ವೀಟ್) ಮೂಲಕ ಬಹಿರಂಗಪಡಿಸಿದೆ.

ಅಲ್ಲು ಅರ್ಜುನ್ ಹಾಗೂ ರಶ್ಮಿಕಾ ಮಂದಣ್ಣ ನಟನೆಯ ಪುಷ್ಪಾ 2 ಟ್ರೈಲರ್ ಬಿಹಾರದ ಪಾಟ್ನಾದಲ್ಲಿ ಅದ್ದೂರಿಯಾಗಿ ಲಾಂಚ್ ಮಾಡಲಾಯಿತು. ಪಾಟ್ನಾದಲ್ಲಿ ಬಿಡುಗಡೆಯಾದ ಟ್ರೈಲರ್ ರಿಲೀಸ್ ಕಾರ್ಯಕ್ರಮದಲ್ಲಿ ಬರೋಬ್ಬರಿ 2 ಲಕ್ಷ ಜನ ಸೇರಿದ್ದರು. ಆ ಮೂಲಕ ಟ್ರೈಲರ್ ಅನ್ನು ಸಿನಿಮಾ ತಂಡ ಅದ್ದೂರಿಯಾಗಿ ಬಿಡುಗಡೆ ಮಾಡಲಾಯಿತು. ಪುಷ್ಪಾ-2 ಟ್ರೇಲರ್ ಅನ್ನು ಸಿನಿಮಾ ತಂಡ ಅದ್ದೂರಿಯಾಗಿ ಬಿಡುಗಡೆ ಮಾಡಲಾಯಿತು. ಇದೀಗ ಟ್ರೇಲರ್ ಬಿಡುಗಡೆಯಾದ ಕಲವೇ ಗಂಟೆಯಲ್ಲಿ ವಿಶೇಷ ದಾಖಲೆಯೊಂದನ್ನು ಬರೆದಿದೆ. ಅದೇನು ದಾಖಲೆ ಎಂದು ಇಲ್ಲಿ ತಿಳಿಯಿರಿ.

ಅಲ್ಲು ಅರ್ಜುನ್ ಮತ್ತು ರಶ್ಮಿಕಾ ಮಂದಣ್ಣ ನಟಿಸಿರುವ ಪುಷ್ಪಾ-2 ಸಿನಿಮಾದ ಟ್ರೇಲರ್ ಇಂಟರ್ನೆಟ್ ಅನ್ನು ಬಿರುಗಾಳಿಯನ್ನೇ ಎಬ್ಬಿಸಿದೆ. ಮೈತ್ರಿ ಮೂವಿ ಮೇಕರ್ಸ ಅಧಿಕೃತ ಯೂಟ್ಯೂಬ್ ಚಾನೆಲ್ನಲ್ಲಿ ಈ ಸಿನಿಮಾದ ಟ್ರೇಲರ್ ಬಿಡುಗಡೆ ಮಾಡಲಾಯಿತು. ಮಾತ್ರವಲ್ಲ ಎಲ್ಲಾ ಭಾಷೆಗಳಲ್ಲಿ ಲಕ್ಷಾಂತರ ವೀಕ್ಷಣೆಗಳನ್ನು ಗಳಿಸಿಕೊಂಡಿದೆ. ಈ ಸಿನಿಮಾ ಟ್ರೇಲರ್ ಬಿಡುಗಡೆಯಾದ ಬಳಿಕ ವೇಗವಾಗಿ 40 ಮಿಲಿಯನ್ಗೂ ವೀಕ್ಷಣೆ ಹಾಗೂ 1.4 ಮಿಲಿಯನ್ಗೂ ಅಧಿಕ ಲೈಕ್ಸ್ ಅನ್ನು ಪಡೆದ ಭಾರತದ ಮೊದಲ ಸಿನಿಮಾ ಎಂಬ ಖ್ಯಾತಿಗೆ ಪಾತ್ರವಾಗಿದೆ. ಇದು ಭಾರತೀಯ ಸಿನಿಮಾ ಇತಿಹಾಸದಲ್ಲೇ ಅತ್ಯಂತ ವೇಗದ ಸಾಧನೆ ಎಂದು ಸಿನಿಮಾ ತಂಡ ಎಕ್ಸ್ ಮೂಲಕ ಮಾಹಿತಿ ಹಂಚಿಕೊಂಡಿದೆ.

ಸುಕುಮಾರ್ ನಿರ್ದೇಶನದ ಪುಷ್ಪ ಚಿತ್ರದ ಮುಂದುವರಿದ ಭಾಗವಾಗಿ ಪುಷ್ಪ 2 ಬರುತ್ತಿದೆ. ಪುಷ್ಪ 2 ಚಿತ್ರದಲ್ಲಿ ಅಲ್ಲು ಅರ್ಜುನ್ ಜೊತೆಗೆ ರಶ್ಮಿಕಾ ಮಂದಣ್ಣ, ಫಹದ್ ಫಾಜಿಲ್, ಧನಂಜಯ, ಜಗದೀಶ್ ಪ್ರತಾಪ್ ಭಂಡಾರಿ ಮತ್ತು ಇತರರು ನಟಿಸಿದ್ದಾರೆ. ಪುಷ್ಪ 2 ಚಿತ್ರದ ಚಿತ್ರೀಕರಣ ಭರದಿಂದ ಸಾಗುತ್ತಿದೆ. ಸದ್ಯ ಡಬ್ಬಿಂಗ್ ಕಾರ್ಯಕ್ರಮಗಳು ಅಂತಿಮ ಹಂತದಲ್ಲಿವೆ.

## ಸರಳವಾಗಿ ನಡೆಯಿತು ಡಾಲಿ ಧನಂಜಯ್, ಧನ್ಯತಾ ನಿಶ್ಚಿತಾರ್ಥ - ಫೆ.16ಕ್ಕೆ ಮದುವೆ

**ಬೆಂಗಳೂರು:** ಸ್ಯಾಂಡಲ್‌ವುಡ್ ನಟ ಡಾಲಿ ಧನಂಜಯ್ ಮತ್ತು ವೈದ್ಯೆ ಧನ್ಯತಾ ನಿಶ್ಚಿತಾರ್ಥ ಕಾರ್ಯಕ್ರಮ ಇಂದು(ನ.17) ನಡೆಯಿತು.

ಅರಸಿಕೆರೆ ತಾಲೂಕು ಕಾಳೇನಹಳ್ಳಿಯಲ್ಲಿರುವ ಧನಂಜಯ್ ನಿವಾಸದಲ್ಲಿ ಸರಳವಾಗಿ ನಿಶ್ಚಿತಾರ್ಥ ಕಾರ್ಯಕ್ರಮ ನಡೆಯಿತು. ಮೈಸೂರಿನಲ್ಲಿ ಫೆ.16 ರಂದು ಮದುವೆ ಕಾರ್ಯಕ್ರಮ ನಡೆಯಲಿದೆ.

ದೀಪಾವಳಿ ಹಬ್ಬದ ಸಂಭ್ರಮದಲ್ಲಿ ಡಾಲಿ ತನ್ನ ಬಾಳಸಂಗಾತಿಯನ್ನು ಪರಿಚಯಿಸಿದ್ದರು. ಭಾವಿ ಪತ್ನಿ ಗೈನೋಕಾಲಜಿಸ್ಟ್ ಆಗಿರುವ ಧನ್ಯತಾ ಜೊತೆಗಿನ ಸುಂದರವಾದ ವಿಡಿಯೋ ಹಂಚಿಕೊಳ್ಳುವ ಮೂಲಕ ಮದುವೆ ಸುದ್ದಿಯನ್ನು ಹಂಚಿಕೊಂಡಿದ್ದರು.

ಡಾಲಿ ಮತ್ತು ಧನ್ಯತಾ ಇಬ್ಬರು ಅನೇಕ ವರ್ಷಗಳ ಪರಿಚಯ, ಈ ಪರಿಚಯ ಪ್ರೀತಿಗೆ ತಿರುಗಿ ಇದೀಗ ಹಸೆಮಣೆ ಏರುತ್ತಿದ್ದಾರೆ. ಚಿತ್ರದುರ್ಗ ಮೂಲದ



ಧನ್ಯತಾ ಅಪ್ಪಟ ಕನ್ನಡತಿ, ಓದಿದ್ದು ಮೈಸೂರಿನಲ್ಲಿ. ಅರಸೀಕೆರೆ ಮೂಲದ ನಟ ಧನಂಜಯ ಓದಿದ್ದು ಕೂಡ ಮೈಸೂರಿನಲ್ಲಿಯೇ ಎನ್ನುವುದು ವಿಶೇಷ.

ಧನ್ಯತಾ ಮಿಡಲ್ ಕ್ಲಾಸ್ ಹುಡುಗಿ ಕಷ್ಟ ಪಟ್ಟು ಡಾಕ್ಟರ್ ಆಗಿದ್ದಾರೆ. ಅಲ್ಲದೆ ಅವರ ವರ್ಕ್ ಎಥಿಕ್ಸ್ ಯೋಚನೆಗಳು ನನಗೆ ಇಷ್ಟ ಆಯ್ತು ಎಂದು ಡಾಲಿ ವಾಹಿನಿಯೊಂದರ ಸಂದರ್ಶನದಲ್ಲಿ ಈ ಹಿಂದೆ ಹೇಳಿದ್ದರು.

ಫೆಬ್ರವರಿ 16ರಂದು ಮೈಸೂರಿನ ಎಕ್ಸಿಬಿಷನ್ ಗ್ರೌಂಡ್‌ನಲ್ಲಿ ಡಾಲಿ ಮತ್ತು ಧನ್ಯತಾ ಮದುವೆ ನಡೆಯಲಿದೆ. ಮೈಸೂರು ಧನಂಜಯ ಮತ್ತು ಧನ್ಯತಾ ಇಬ್ಬರಿಗೂ ಭಾವನಾತ್ಮಕವಾಗಿ ಸಂಬಂಧ ಬೆಸೆದ ಸ್ಥಳ ಹಾಗಾಗಿ ಅಲ್ಲಿಯೇ ಹಸೆಮಣೆ ಏರುವ ನಿರ್ಧಾರ ಮಾಡಿದ್ದಾರೆ. ಅದ್ದೂರಿಯಾಗಿ ನಡೆಯುವ ಮದುವೆ ಸಮಾರಂಭದಲ್ಲಿ ಸಿನಿಮಾರಂಗ, ರಾಜಕೀಯ ಸೇರಿದಂತೆ ಬೇರೆ ಬೇರೆ ಕ್ಷೇತ್ರದ ಗಣ್ಯರು ಹಾಜರಾಗಲಿದ್ದಾರೆ. ಬೆಳಗ್ಗೆ ಮಾಂಗಲ್ಯ ಧಾರಣೆ ಅದೇ ದಿನ ಅದೇ ಗ್ರೌಂಡ್ ನಲ್ಲಿ ಆರತಕ್ಷತೆ ಸಮಾರಂಭ ನಡೆಯಲಿದೆ.

## ತೂಕ ಕಡಿಮೆ ಮಾಡುತ್ತೆ ಜೀರಿಗೆ ಪುಡಿ



ಮಸಾಲೆಗಳು ಖಾದ್ಯದ ರುಚಿಯನ್ನು ಹೆಚ್ಚಿಸುತ್ತವೆ. ಭಾರತದಲ್ಲಿ ಬಗೆ ಬಗೆಯ ಮಸಾಲೆಗಳನ್ನು ಬಳಸ್ತಾರೆ. ಈ ಮಸಾಲೆಗಳು ರುಚಿ ನೀಡುವ ಜೊತೆಗೆ ತಮ್ಮದೇ ಆದ ಮಹತ್ವವನ್ನು ಹೊಂದಿವೆ. ಮಸಾಲೆಗಳಲ್ಲಿ ಜೀರಿಗೆ ಕೂಡ ಒಂದು. ದಾಲ್ ಇರಲಿ, ತರಕಾರಿ ಸಾಂಬಾರ್ ಇರಲಿ ಎಲ್ಲದಕ್ಕೂ ಜೀರಿಗೆ ಇರಲೇಬೇಕು. ಜೀರಿಗೆಯನ್ನು ಕೇವಲ ಸುವಾಸನೆಗಾಗಿ ಬಳಸುವುದಿಲ್ಲ. ಜೀರಿಗೆ ಬಹುಪಯೋಗಿ ಮಸಾಲೆ. ಇದರಲ್ಲಿ ಆರೋಗ್ಯ ಅಡಗಿದೆ. ಸ್ವಲ್ಪ ಜೀರಾ ನಿಮ್ಮ ದೇಹದ ತೂಕವನ್ನು ನಿಯಂತ್ರಿಸಬಲ್ಲದು ಅಂದ್ರೆ, ನೀವು ನಂಬಲೇಬೇಕು. ನೀವು ತೂಕ ಇಳಿಸುವ ಪ್ರಯತ್ನದಲ್ಲಿದ್ದರೆ ನಿಮಗೊಂದು ಖುಷಿ ಸುದ್ದಿ. ಜೀರಿಗೆ ಪುಡಿ ನಿಮ್ಮ ತೂಕ ಇಳಿಸುತ್ತೆ ಎಂಬುದನ್ನು ಅಧ್ಯಯನವೊಂದು ಹೇಳಿದೆ. ಇದನ್ನು ಬಳಸುವುದರಿಂದ ಕೊಬ್ಬು ಕರಗುವುದಲ್ಲದೇ, ಕೊಲೆಸ್ಟ್ರಾಲನ್ನು ಸ್ವಾಭಾವಿಕವಾಗಿ ಕಡಿಮೆ ಮಾಡುತ್ತದೆ.

ಆಹಾರ ಜೀರ್ಣವಾಗಲು ಜೀರಿಗೆ ಬಹಳ ಉಪಯುಕ್ತ. ಜೀರ್ಣ ಶಕ್ತಿಯನ್ನು ಹೆಚ್ಚಿಸುವ ಗುಣವನ್ನು ಇದು ಹೊಂದಿದೆ. ಆಹಾರ ಜೀರ್ಣವಾಗುವುದಿಲ್ಲ ಎನ್ನುವವರು ಜೀರಿಗಾ ಟೀ ಸೇವಿಸುವುದು ಒಳ್ಳೆಯದು. ಒಂದು ಲೋಟ ನೀರಿಗೆ ಒಂದು ಚಮಚ ಜೀರಿಗೆಯನ್ನು ಹಾಕಿ. ಅದನ್ನು ಸರಿಯಾಗಿ ಕುದಿಸಿ. ನೀರು ಕಂದು ಬಣ್ಣಕ್ಕೆ ತಿರುಗಿದಾಗ ಗ್ಯಾಸ್ ಆರಿಸಿ. ಜೀರಿಗೆ ನೀರು ತಣ್ಣಗಾದ ನಂತರ ಸೇವಿಸಿ. ದಿನಕ್ಕೆ ಮೂರು ಬಾರಿ ಈ ಟೀ ಸೇವನೆ ಮಾಡುವುದರಿಂದ ಜೀರ್ಣಕ್ರಿಯೆ ಸುಲಭವಾಗಿ ಆಗುವುದಲ್ಲದೇ ಹೊಟ್ಟೆ ನೋವು ಗುಣವಾಗುತ್ತದೆ.

### ಹೆಲ್ತ್ ಟಿಪ್ಸ್

ಎರಡು ಚಮಚ ಜೀರಿಗೆಗೆ ನೀರು ಬೆರೆಸಿ ರಾತ್ರಿ ಪೂರ್ತಿ ನೆನೆಸಿಡಿ. ಬೆಳಿಗ್ಗೆ ಎದ್ದ ತಕ್ಷಣ ಖಾಲಿ ಹೊಟ್ಟೆಯಲ್ಲಿ ನೀರನ್ನು ಕುದಿಸಿ ಕುಡಿಯಿರಿ. ಜೊತೆಯಲ್ಲಿ ಜೀರಿಗೆಯನ್ನು ಅಗೆದು ನುಂಗಿ. ಹೀಗೆ ಮಾಡಿದ್ರೆ ನಿಮ್ಮ ತೂಕ ಕಡಿಮೆಯಾಗುತ್ತದೆ.

ಆಹಾರದಲ್ಲಿ ಸಾಕಷ್ಟು ಜೀರಿಗೆಯನ್ನು ಬಳಸಬೇಕು. 05 ಗ್ರಾಂ ಮೊಸರಿಗೆ ಜೀರಿಗೆ ಪುಡಿ ಹಾಕಿ ಪ್ರತಿದಿನ ತಿನ್ನಿ. ನಿಮ್ಮ ತೂಕ ಕಡಿಮೆಯಾಗುತ್ತದೆ. ಮೂರು ಗ್ರಾಂ ಜೀರಿಗೆ ಪುಡಿಯನ್ನು ಜೇನು ತುಪ್ಪದೊಂದಿಗೆ ಸೇವಿಸುತ್ತ ಬಂದರೂ ತೂಕವನ್ನು ಇಳಿಸಿಕೊಳ್ಳಬಹುದು. ಒಂದು ಚಮಚ ಜೀರಿಗೆ ಪುಡಿಯನ್ನು ಅಕ್ಕಿ ಅಥವಾ ತರಕಾರಿ ಸೂಪ್ ಜೊತೆ ಬೆರೆಸಿ ಕುಡಿಯಬಹುದು.

## 97 ಸ್ಟಾರ್ಟ್‌ಅಪ್‌ಗಳೊಂದಿಗೆ ಕರ್ನಾಟಕವು ಭಾರತದ Web3 ಕ್ರಾಂತಿಯನ್ನು ಮುನ್ನಡೆಸುತ್ತಿದೆ



ಭಾರತ್ ವೆಬ್3 ಅಸೋಸಿಯೇಷನ್, ಭಾರತದ ಪ್ರಮುಖ Web3 ಅಸೋಸಿಯೇಷನ್, ಇಂದು ಭಾರತದ ವೆಬ್3 ಕ್ರಾಂತಿ: ಭಾರತೀಯ ಇನ್ನೋವೇಟರ್ಗಳ ನೇತೃತ್ವದಲ್ಲಿ ವೆಬ್3 ಸಂಸ್ಥೆಗಳ ಸಂಕಲನ ಎಂಬ ಶೀರ್ಷಿಕೆಯ ವರದಿಯನ್ನು ಬಿಡುಗಡೆ ಮಾಡಿದೆ. ಈ ವರದಿಯು Web3 ಕ್ಷೇತ್ರದ 400 ಕ್ಕೂ ಹೆಚ್ಚು ಮುಂಚೂಣಿ ಕಂಪನಿಗಳನ್ನು ಪ್ರಸ್ತುತ ಪಡಿಸುತ್ತಾ ಪರಿಚಯಿಸುತ್ತಾ , ಭಾರತದ ಡಿಜಿಟಲ್ ಆರ್ಥಿಕತೆಯನ್ನು ಬೆಳೆಸುತ್ತಿರುವ ವೈವಿಧ್ಯ ಮತ್ತು ಸೃಜನಶೀಲತೆಯನ್ನು ತೋರಿಸುತ್ತದೆ

ಸಂಕಲನದಲ್ಲಿ ಒಳಗೊಂಡಿರುವ ಒಟ್ಟು 422 ಕಂಪನಿಗಳಲ್ಲಿ, ಸುಮಾರು 70% ಅಥವಾ 290 ಕಂಪನಿಗಳು ಭಾರತದಲ್ಲಿ ಪ್ರಧಾನ ಕಛೇರಿಯನ್ನು ಹೊಂದಿದೆ. ಅವುಗಳ ಪೈಕಿ 97 ಕಂಪನಿಗಳು ಕರ್ನಾಟಕದಲ್ಲಿ ನೆಲೆಗೊಂಡಿದ್ದು, ಕರ್ನಾಟಕವು ಭಾರತದ ಘಜಞ3 ಕೇಂದ್ರವಾಗಿ ಹೊರಹೊಮ್ಮುತ್ತದೆ. ನಂತರದಲ್ಲಿ ಮಹಾರಾಷ್ಟ್ರವು 47 ಕಂಪನಿಗಳೊಂದಿಗೆ ಘಜಞ3 ಸ್ಟಾರ್ಟ್-ಅಪ್‌ಗಳಿಗೆ ಎರಡನೇ ಅತ್ಯಂತ ಜನಪ್ರಿಯ ತಾಣವಾಗಿದೆ. ತೆಲಂಗಾಣ 20, ಹರಿಯಾಣ 19 ಮತ್ತು ಉತ್ತರ ಪ್ರದೇಶ 16 ಕಂಪನಿಗಳೊಂದಿಗೆ ವೆಬ್3 ಸ್ಟಾರ್ಟಅಪ್ಗಳಿಗಾಗಿ ದೇಶದ ಟಾಪ್ 5 ರಾಜ್ಯಗಳಾಗಿ ಹೊರಹೊಮ್ಮಿದೆ.

ಬ್ಲಾಕ್ಚೇನ್ ಸೇವೆಗಳು ಪರಿಹಾರಗಳು ವೆಬ್3 ಕ್ಷೇತ್ರದಲ್ಲಿ ಅತ್ಯಧಿಕ ಕಂಪನಿಗಳೊಂದಿಗೆ ಹೊರಹೊಮ್ಮಿವೆ, ವಿವಿಧ ಉದ್ಯಮಗಳಿಗೆ ಬ್ಲಾಕ್ಚೇನ್ ಸಂಬಂಧಿತ ಪರಿಹಾರಗಳನ್ನು ಅಭಿವೃದ್ಧಿಪಡಿಸುತ್ತಿರುವ 79 ಕಂಪನಿಗಳು ಇದರಲ್ಲಿ ಕಾರ್ಯನಿರ್ವಹಿಸುತ್ತಿವೆ. ಇದರ ನಂತರ ವಿಡಿಎ ಎಕ್ಸ್ಚೇಂಜ್ಗಳು ಟ್ರೇಡಿಂಗ್ ಪ್ಲಾಟ್ಫಾರ್ಮ್ಗಳು, ಮತ್ತು ಬ್ಲಾಕ್ಚೈನ್ ಮೂಲಸೌಕರ್ಯ ಕಂಪನಿಗಳು ಕ್ರಮವಾಗಿ 42 ಮತ್ತು 36 ರೊಂದಿಗೆ ಎರಡನೇ ಮತ್ತು ಮೂರನೇ ಸ್ಥಾನಗಳನ್ನು ಆಕ್ರಮಿಸಿಕೊಂಡಿವೆ. ವಿಕೇಂದ್ರೀಕೃತ ಹಣಕಾಸು ಮತ್ತು ಗೇಮಿಂಗ್ ಮತ್ತು ಎಂಟರ್ಟೈನ್ಮೆಂಟ್ ವೆಬ್3 ವಲಯದ ಟಾಪ್ 5 ವರ್ಟಿಕಲ್ಗಳನ್ನು ಕ್ರಮವಾಗಿ 28 ಮತ್ತು 25 ಕಂಪನಿಗಳೊಂದಿಗೆ ಪೂರ್ಣಗೊಳಿಸುತ್ತದೆ.

ವರದಿ ಬಿಡುಗಡೆಯ ಕುರಿತು ಮಾತನಾಡಿದ ಭಾರತ್ ವೆಬ್ 3 ಅಸೋಸಿಯೇಶನ್ನ ಅಧ್ಯಕ್ಷರಾದ ದಿಲೀಪ್ ಚೆನೊಯ್, ಘಜಞ3 ಕ್ಷೇತ್ರದಲ್ಲಿನ ವೈವಿಧ್ಯಮಯತೆಯನ್ನು ಮತ್ತು ಇದು ಭಾರತದ ಡಿಜಿಟಲ್ ಭವಿಷ್ಯದ ಮೇಲೆ ಹೊಂದಿರುವ ಪ್ರಭಾವವನ್ನು ಗುರುತಿಸಿ, ನಮ್ಮ ವರದಿ ಈ ಕ್ಷೇತ್ರದಲ್ಲಿನ ನೂರಾರು ಸ್ಟಾರ್ಟಅಪ್ಗಳ ಸಂಪೂರ್ಣ ವಿಮರ್ಶೆಯನ್ನು ನೀಡಲು ಉದ್ದೇಶಿಸಿದೆ. ಇವು ಡಿಫೈ, ಬ್ಲಾಕ್ಚೇನ್ ಪರಿಹಾರಗಳು ಮತ್ತು ಮೂಲಸೌಕರ್ಯ, ಆಸ್ತಿಯ ಟೋಕನೈಸೇಶನ್, ಮೆಟಾವರ್ಸ್, ಗೇಮಿಂಗ್, ಮೀಡಿಯಾ, ಮತ್ತು Web3 ಸಲಹಾ ಸೇವೆಗಳು ಸೇರಿದಂತೆ ಹಲವು ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿವೆ.

''ಈ ವರದಿಯ ಮೂಲಕ, ಭಾರತದಲ್ಲಿ Web3ಕ್ರಾಂತಿಗೆ ಕೊಡುಗೆ ನೀಡಿತ್ತಿರುವ ಸ್ಟಾರ್ಟ್-ಅಪ್ಗಳನ್ನು ಪ್ರಮಾಣೀಕರಿಸಲು ಮತ್ತು ಅವುಗಳೆಡೆಗೆ ಗಮನ ಸೆಳೆಯಲು ನಾವು ಆಶಿಸುತ್ತೇವೆ. ಹಾಗೆಯೇ ಈ ವರದಿಯು ಹೂಡಿಕೆದಾರರು, ಉದ್ಯಮಿಗಳು ಮತ್ತು ನೀತಿ ನಿರೂಪಕರಿಗೆ ವೆಬ್ 3 ಸಾಮರ್ಥ್ಯದ ಬಗ್ಗೆ ಇನ್ನಷ್ಟು ತಿಳಿದುಕೊಳ್ಳಲು ಅಮೂಲ್ಯವಾದ ಸಂಪನ್ಮೂಲವಾಗಿ ಕಾರ್ಯನಿರ್ವಹಿಸುತ್ತದೆ''. ಎಂದು ಹೇಳಿದರು.

ಭಾರತ್ ವೆಬ್3 ಅಸೋಸಿಯೇಷನ್ ಭಾರತದ ವೆಬ್3 ಪರಿಸರ ವ್ಯವಸ್ಥೆಯಿಂದ ಪ್ರಮುಖ ಸದಸ್ಯರನ್ನು ಒಂದುಗೂಡಿಸುವ ಉದ್ಯಮ ಸಂಸ್ಥೆಯಾಗಿದೆ. BWA ಜಾಗೃತಿ ಮೂಡಿಸಲು, ಸಂಶೋಧನೆ ನಡೆಸಲು, ಉದ್ಯಮದ ಮಾನದಂಡಗಳನ್ನು ಸ್ಥಾಪಿಸಲು, ಭಾರತೀಯ ಪ್ರತಿಭೆ ಪೂಲ್ ಅನ್ನು ಪೋಷಿಸಲು, ಗ್ರಾಹಕರ ಹಿತಾಸಕ್ತಿಗಳನ್ನು ರಕ್ಷಿಸಲು ಮತ್ತು ಭಾರತದಲ್ಲಿ ತೇಲುವ Web3 ಪರಿಸರ ವ್ಯವಸ್ಥೆಯನ್ನು ನಿರ್ಮಿಸಲು ಮಧ್ಯಸ್ಥಗಾರರ ಸಂವಾದವನ್ನು ಉತ್ತೇಜಿಸಲು ಬದ್ಧವಾಗಿದೆ. ತನ್ನ ಮಿಷನ್ ಸ್ಟೇಟ್ಮೆಂಟ್ನ ಭಾಗವಾಗಿ, BWA ಚಿಂತನೆಯ ನಾಯಕತ್ವದ ಮೂಲಕ ಶಿಕ್ಷಣ ನೀಡಲು ಶ್ರಮಿಸುತ್ತದೆ, ನಿರ್ಣಾಯಕ ಮಧ್ಯಸ್ಥಗಾರರೊಂದಿಗೆ ಸಹಕರಿಸುತ್ತದೆ ಮತ್ತು ಉದ್ಯಮದ ಮುಖವಾಗಿ ನಮ್ಮ ಉದ್ದೇಶಗಳನ್ನು ಉತ್ತೇಜಿಸುತ್ತದೆ.

## ಬೇಡದ ಕೂದಲು ಸ್ವಚ್ಛಗೊಳಿಸಲು ಸಲಹೆ

### ಬ್ಯೂಟಿ ಟಿಪ್ಸ್



ಶರೀರವನ್ನು ಸ್ವಚ್ಛವಾಗಿಡಲು ಬೇಡದ ಕೂದಲುಗಳನ್ನು ತೆಗೆದು ಹಾಕುವ ಅವಶ್ಯಕತೆ ಇದೆ. ಬೇಡದ ಕೂದಲನ್ನು ತೆಗೆದು ಹಾಕಲು ಶೇಕಡಾ 10 ರಲ್ಲಿ 8 ರಷ್ಟು ಮಹಿಳೆಯರು ರೇಜರ್ ಬಳಸ್ತಾರೆ. ಖಾಸಗಿ ಭಾಗಗಳನ್ನು ಸ್ವಚ್ಛಗೊಳಿಸಿಕೊಳ್ಳುವಾಗ ಮಾಡುವ ಸಣ್ಣ ನಿರ್ಲಕ್ಷ್ಯ ಆರೋಗ್ಯ ಕೆಡಿಸಬಹುದು. ಹಾಗಾಗಿ ಬೇಡದ ಕೂದಲನ್ನು ಸ್ವಚ್ಛಗೊಳಿಸುವಾಗ ಕೆಲವೊಂದು ವಿಷಯಗಳ ಬಗ್ಗೆ ಗಮನ ನೀಡುವುದು ಅವಶ್ಯಕ. ಒಂದೇ ರೇಜರ್ ಬಳಕೆ ಮಾಡಬಾರದು. ಕಾಲುಗಳು ಹಾಗೂ ಖಾಸಗಿ ಭಾಗಗಳಿಗೆ ಒಂದೇ ರೇಜರ್ ಬಳಕೆ ಒಳ್ಳೆಯದಲ್ಲ. ಉತ್ತಮ ಗುಣಮಟ್ಟದ ಹಾಗೂ ವಿಶೇಷವಾಗಿ ಮಹಿಳೆಯರಿಗಾಗಿ ಮಾಡಿರುವ ರೇಜರ್ ಖರೀದಿಸುವುದು ಒಳ್ಳೆಯದು. ಒಂದೇ ರೇಜರನ್ನು ಎಲ್ಲ ಕಡೆ ಬಳಸಿದ್ರೆ ತುರಿಕೆ ಕಾಣಿಸಿಕೊಳ್ಳುವ ಸಾಧ್ಯತೆಗಳಿರುತ್ತವೆ. ರೇಜರ್ ಬಳಸುವ ಮುನ್ನ ಕತ್ತರಿ ಪ್ರಯೋಗ ಮಾಡಿ. ಉದ್ದದ ಕೂದಲುಗಳನ್ನು ತೆಗೆದ ನಂತ್ರ ರೇಜರ್ ಬಳಸಿದ್ರೆ ಕೆಲಸ ಸುಲಭವಾಗುತ್ತದೆ.

ಶೇವ್ ಮಾಡುವುದರಿಂದ ಚರ್ಮ ಒಣಗಿ ಒರಟಾಗುತ್ತದೆ. ಹಾಗಾಗಿ ಆಲಿವ್ ಆಯಿಲ್, ಕೊಬ್ಬರಿ ಎಣ್ಣೆ ಬಳಕೆ ಉತ್ತಮ. ಶೇವಿಂಗ್ ಕ್ರೀಮ್ ಕೂಡ ಬಳಸಬಹುದು. ರೇಜರ್ ಬಳಸಿದ್ರೂ ಕೆಲವೊಮ್ಮೆ ಸಣ್ಣ ಸಣ್ಣ ಕೂದಲುಗಳು ಉಳಿದು ಬಿಡುತ್ತವೆ. ಅವು ನಂತ್ರ ಚರ್ಮದ ಸೌಂದರ್ಯವನ್ನು ಕೆಡಿಸುತ್ತವೆ. ಹಾಗಾಗಿ ಸರಿಯಾಗಿ ನೋಡಿ ರೇಜರ್ ಬಳಸಿ. ನಂತ್ರ ನೀರಿನಿಂದ ಚೆನ್ನಾಗಿ ಕ್ಲೀನ್ ಮಾಡಿಕೊಳ್ಳಿ.

ಶೇವ್ ಮಾಡಿದ ನಂತ್ರ ಚರ್ಮದ ಕಾಂತಿ ಹೆಚ್ಚಿಸಿಕೊಳ್ಳಲು ಕ್ರೀಂ ಬಳಸಿ. ಆಲಿವ್ ಆಯಿಲ್ ಅಥವಾ ಟಿ ಟ್ರೀ ಆಯಿಲ್ ಬಳಕೆ ಉತ್ತಮ. ಒಂದು ಬಾರಿ ಬಳಸಿದ ನಂತ್ರ ರೇಜರನ್ನು ಬಿಸಿ ನೀರಿನಲ್ಲಿ ತೊಳೆದು ಸ್ವಚ್ಛಗೊಳಿಸಿ. ರೇಜರ್ ಹಳೆಯದಾಗಿದ್ದರೆ ಅದನ್ನು ಬಳಸಬೇಡಿ. ರೇಜರನ್ನು ಸ್ವಚ್ಛವಾಗಿಟ್ಟುಕೊಳ್ಳುವುದು ಆರೋಗ್ಯಕ್ಕೆ ಒಳ್ಳೆಯದು.

## ರಾಶಿ ಭವಿಷ್ಯ



ಜಯಶ್ರೀ.ಬಿ.ಆರ್
ಖ್ಯಾತ ಜ್ಯೋತಿಷಿ
ದೂರವಾಣಿ-9964739507
www.jyotishyavaastu.com

**ಮೇಷ:** ತೊಂದರೆಗಳೇನಿದ್ದರೂ ತಾತ್ಕಾಲಿಕ, ಹಣಕಾಸಿನ ಸ್ಥಿತಿ ಉತ್ತಮ, ಹಿರಿಯರ ಸಲಹೆಗಳನ್ನು ಸ್ವೀಕರಿಸಿ.

**ವೃಷಭ:** ಆಸ್ತಿ ವಿಚಾರದಲ್ಲಿ ಕಿರಿಕಿರಿ, ಉದ್ಯೋಗದಲ್ಲಿ ಹೊಸ ಹೊಣೆಗಾರಿಕೆಗಳು, ರಸಗೊಬ್ಬರ ವ್ಯಾಪಾರಿಗಳಿಗೆ ಶುಭ ಸೂಚನೆ.

**ಮಿಥುನ:** ನೆರೆಹೊರೆಯವರೊಂದಿಗೆ ಎಚ್ಚರ, ಜಲಸಂಬಂಧಿ ಕೆಲಸಗಾರರಿಗೆ ಆದಾಯ, ತೀರ್ಥಕ್ಷೇತ್ರ ದರ್ಶನ ಯೋಗ.

**ಕರ್ಕಾಟಕ:** ಯಂತ್ರೋಪಕರಣಗಳಿಂದ ತೊಂದರೆ, ದೃಢವಾದ ನಡೆಯಿಂದ ಗೆಲುವು, ಕ್ರೀಡಾಪಟುಗಳಿಗೆ ಯಶಸ್ಸು.

**ಸಿಂಹ:** ಮಾತಿನಲ್ಲಿ ಜಾಗ್ರತೆ ಇರಲಿ, ಕೈಗೊಂಡ ಕಾರ್ಯಗಳಲ್ಲಿ ಯಶಸ್ಸು, ಕಾರ್ಯರಂಗದ ವಿಸ್ತರಣೆಗೆ ಸಮಯ

**ಕನ್ಯಾ:** ಗುರುಸಮಾನ ವ್ಯಕ್ತಿಯಿಂದ ಮಾರ್ಗದರ್ಶನ, ನೈಸರ್ಗಿಕ ಕೃಷಿಯಲ್ಲಿ ಆಸಕ್ತಿ, ಗೌರವ, ಹೆಸರು, ಕೀರ್ತಿ ಗಳಿಸುವ ಪ್ರಯತ್ನ.

**ತುಲಾ:** ಶತ್ರುಗಳ ಕಾಟದಿಂದ ಮುಕ್ತಿ, ಕುಟುಂಬದ ಆರೋಗ್ಯದಲ್ಲಿ ಸುಧಾರಣೆ, ಮೋಜು ಮಸ್ತಿಯಲ್ಲಿ ಕಾಲಹರಣ.

**ವೃಶ್ಚಿಕ:** ಸಾಹಸ ಕಾರ್ಯಗಳಲ್ಲಿ ಜಯಶೀಲತೆ, ಶೀತ ಮತ್ತು ಕೆಮ್ಮಿನಿಂದ ಅಸ್ವಸ್ಥತೆ, ವ್ಯಾಪಾರದಲ್ಲಿ ಹೆಚ್ಚಿನ ನಿರೀಕ್ಷೆ ಬೇಡ.

**ಧನಸ್ಸು:** ಮಾತಿನಲ್ಲಿ ಮೃದುತ್ವವಿರಲಿ, ಗೊಂದಲದ ವಾತಾವರಣ, ದಾಂಪತ್ಯದಲ್ಲಿ ಕಲಹ ಮತ್ತು ನೋವು.

**ಮಕರ:** ಅಮೂಲ್ಯ ವಸ್ತುಗಳು ಕಳೆದುಹೋಗುವ ಸಾಧ್ಯತೆ, ಮಾತಿನಿಂದ ಕಾರ್ಯ ಸಾಧನೆ, ವೃತ್ತಿಜೀವನದಲ್ಲಿ ಮುನ್ನಡೆ.

**ಕುಂಭ:** ಕಲಾವಿದರಿಗೆ ಉತ್ತಮ ದಿನ, ಬುದ್ಧಿವಂತಿಕೆಯ ನಿರ್ಧಾರಗಳು ಅಗತ್ಯ, ಮಹಿಳೆಯರ ಆರೋಗ್ಯದಲ್ಲಿ ಕ್ಷೀಣತೆ

**ಮೀನ:** ಕಾನೂನು ತೊಂದರೆಗಳಿಂದಾಗಿ ಸಮಸ್ಯೆ, ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಯಶಸ್ಸು, ಕಠಿಣ ಪರಿಶ್ರಮದಿಂದ ಲಾಭ.

## ವಿಶ್ವ ಆಂಟಿಬಯೋಟಿಕ್ಸ್ ಜಾಗೃತಿ ವಾರ

ವಿಶ್ವ ಪ್ರತಿಜೀವಕ ಜಾಗೃತಿ ವಾರವು ಪ್ರತಿ ನವೆಂಬರ್ 18-24 ರಂದು ಪ್ರತಿಜೀವಕ ನಿರೋಧಕತೆಯ ಬಗ್ಗೆ ನಮ್ಮ ಪ್ರಜ್ಞೆಯನ್ನು ಹೆಚ್ಚಿಸುತ್ತದೆ ಮತ್ತು ಈ ರೋಗ-ಹೋರಾಟದ ಔಷಧಿಗಳ ಸರಿಯಾದ ಬಳಕೆಯ ಬಗ್ಗೆ ವೈದ್ಯಕೀಯ ಸಮುದಾಯವು ನಮಗೆ ಹೇಗೆ ಶಿಕ್ಷಣ ನೀಡುತ್ತಿದೆ. ವಿಶ್ವ ಆರೋಗ್ಯ ಸಂಸ್ಥೆ ಇದನ್ನು ಈ ರೀತಿ ವ್ಯಾಖ್ಯಾನಿಸುತ್ತದೆ: ''ಈ ಔಷಧಿಗಳ ಬಳಕೆಗೆ ಪ್ರತಿಕ್ರಿಯೆಯಾಗಿ ಬ್ಯಾಕ್ಟೀರಿಯಾಗಳು ಬದಲಾದಾಗ ಪ್ರತಿಜೀವಕ ನಿರೋಧಕತೆಯು ಸಂಭವಿಸುತ್ತದೆ. ಬ್ಯಾಕ್ಟೀರಿಯಾಗಳು, ಮನುಷ್ಯರು ಅಥವಾ ಪ್ರಾಣಿಗಳಲ್ಲ, ಪ್ರತಿಜೀವಕ-ನಿರೋಧಕವಾಗುತ್ತವೆ.

ವಿಶ್ವ ಆರೋಗ್ಯ ಸಂಸ್ಥೆ ಆಂಟಿಬಯೋಟಿಕ್ ಪ್ರತಿರೋಧದ ಜಾಗತಿಕ ಸಮಸ್ಯೆಯ ಸುತ್ತ ತುರ್ತು ಪ್ರಜ್ಞೆಯನ್ನು ತೋರಿಸುತ್ತದೆ - ಮತ್ತು ಉತ್ತಮ ಕಾರಣದೊಂದಿಗೆ. ಪ್ರತಿಜೀವಕಗಳ ಮೂಲಕ ಸಾಂಪ್ರದಾಯಿಕ ರೀತಿಯಲ್ಲಿ ಚಿಕಿತ್ಸೆ ನೀಡಲಾಗದ ಅನಾರೋಗ್ಯ ಅಥವಾ ಸೋಂಕನ್ನು ನೀವು ಅಭಿವೃದ್ಧಿಪಡಿಸಿದರೆ, ನೀವು ಸಾಯಬಹುದು. ಇದು ಸರಳವಾಗಿದೆ.

ಬಡತನ-ಚಾಲಿತ ಪರಿಸ್ಥಿತಿಗಳು ರೋಗಗಳು ಮತ್ತು ಸೋಂಕುಗಳಿಗೆ ಕಾರಣವಾಗುವುದರಿಂದ ಇದು ಪ್ರಪಂಚದಾದ್ಯಂತ ಹೆಚ್ಚುತ್ತಿರುವ ಸಮಸ್ಯೆಯಾಗಿ ಘಊಔ ಕಂಡಿತು, ಅದು ಪ್ರತಿಜೀವಕಗಳಿಗೆ ಹೆಚ್ಚು ನಿರೋಧಕವಾಗಿದೆ. ಮೇ, 2015 ರಲ್ಲಿ, ವಿಶ್ವ ಆರೋಗ್ಯ ಅಸೆಂಬ್ಲಿ ಈ ಪ್ರತಿಜೀವಕ ಪ್ರತಿರೋಧವನ್ನು ಅಂತರಾಷ್ಟ್ರೀಯ ತುರ್ತುಸ್ಥಿತಿಗೆ ನವೀಕರಿಸಿತು. ಘಊಔ ಈ ಸಮಸ್ಯೆಯನ್ನು ವಿವರಿಸಿದೆ ಹೊಸ ಪ್ರತಿರೋಧ ಕಾರ್ಯವಿಧಾನಗಳು ಹೊರಹೊಮ್ಮುತ್ತಿವೆ ಮತ್ತು ಜಾಗತಿಕವಾಗಿ ಹರಡುತ್ತಿವೆ, ಸಾಮಾನ್ಯ ಸಾಂಕ್ರಾಮಿಕ ರೋಗಗಳಿಗೆ ಚಿಕಿತ್ಸೆ ನೀಡುವ ನಮ್ಮ ಸಾಮರ್ಥ್ಯವನ್ನು ಬೆದರಿಸುತ್ತದೆ. ನ್ಯುಮೋನಿಯಾ, ಕ್ಷಯ, ರಕ್ತ ವಿಷ, ಗೊನೊರಿಯಾ ಮತ್ತು ಆಹಾರದಿಂದ ಹರಡುವ ರೋಗಗಳಂತಹ ಸೋಂಕುಗಳ ಬೆಳೆಯುತ್ತಿರುವ ಪಟ್ಟಿಯು ಪ್ರತಿಜೀವಕಗಳು ಕಡಿಮೆ ಪರಿಣಾಮಕಾರಿಯಾಗುವುದರಿಂದ ಚಿಕಿತ್ಸೆ ನೀಡಲು ಕಷ್ಟವಾಗುತ್ತಿದೆ ಮತ್ತು ಕೆಲವೊಮ್ಮೆ ಅಸಾಧ್ಯವಾಗುತ್ತಿದೆ. ಜಾಗತಿಕ ಪ್ರತಿಜೀವಕ ನಿರೋಧಕತೆಯ ಬಗ್ಗೆ ಘಊಔ ಐದು ಗುರಿಗಳನ್ನು ವಿವರಿಸಿದೆ: ಜಾಗೃತಿ ಮೂಡಿಸುವುದು, ಮೇಲ್ವಿಚಾರಣೆ ಮತ್ತು ಸಂಶೋಧನೆಯನ್ನು ಹೆಚ್ಚಿಸುವುದು, ಸೋಂಕುಗಳನ್ನು ಕಡಿಮೆ ಮಾಡುವುದು, ಆಂಟಿಮೈಕ್ರೊಬಿಯಲ್ ಔಷಧಿಗಳ ಅತ್ಯುತ್ತಮ ಬಳಕೆಯನ್ನು ಮಾಡುವುದು ಮತ್ತು ಸುಸ್ಥಿರ ಹೂಡಿಕೆಯನ್ನು ಬದ್ಧಗೊಳಿಸುವುದು. ಬಹು ಮುಖ್ಯವಾಗಿ, ಈ ಗುರಿಗಳು ತಮ್ಮ ದೇಶಗಳಲ್ಲಿ ವೈದ್ಯಕೀಯ ತಜ್ಞರು ಮತ್ತು ಸಂಶೋಧಕರಿಗೆ ಆದ್ಯತೆ ನೀಡಲು ಮತ್ತು ಸಂಪನ್ಮೂಲಗಳನ್ನು ನಿಯೋಜಿಸಲು ರಾಷ್ಟ್ರಗಳು ಬಳಸಬಹುದಾದ ಪ್ರತಿಜೀವಕಗಳ ಪ್ರತಿರೋಧದ ಚೌಕಟ್ಟನ್ನು ರೂಪಿಸಿದವು. ಮಾನವರಲ್ಲಿ ಪ್ರತಿಜೀವಕ ನಿರೋಧಕತೆಯನ್ನು ತಡೆಗಟ್ಟುವುದರ ಜೊತೆಗೆ, ರಾಷ್ಟ್ರೀಯ ಕ್ರಿಯಾ ಯೋಜನೆಗಳು ಉತ್ತಮ ಪ್ರಾಣಿಗಳ ಆರೋಗ್ಯ ಮತ್ತು ಕೃಷಿಯಲ್ಲಿ ಬಳಕೆಗಾಗಿ ಆಂಟಿಮೈಕ್ರೊಬಿಯಲ್ ಔಷಧಿಗಳನ್ನು ರಚಿಸುವಲ್ಲಿ ಜಾಗತಿಕ ಪ್ರಯತ್ನಗಳೊಂದಿಗೆ ಹೊಂದಿಕೆಯಾಗುತ್ತವೆ. ದೇಶಗಳು 2017 ರ ವೇಳೆಗೆ ಘಊಔ ಆರೋಗ್ಯ ಸಭೆಗಳಿಗೆ ವರದಿ ಮಾಡಬೇಕಾಗಿತ್ತು. ಅಂದಿನಿಂದ, ಆಂಟಿಬಯೋಟಿಕ್ ಪ್ರತಿರೋಧದ ವ್ಯಾಪಕ ಸಮಸ್ಯೆಯ ಕುರಿತು ಸ್ಥಳೀಯವಾಗಿ ಮತ್ತು ಅಂತರಾಷ್ಟ್ರೀಯವಾಗಿ ಸುದ್ದಿ ಪ್ರಸಾರವು ಹೆಚ್ಚುತ್ತಿದೆ.

# ಉಕ್ರೇನ್ ವಿದ್ಯುತ್ ಸ್ಥಾವರ ಗುರಿಯಾಗಿಸಿ ರಶ್ಯದ ಕ್ಷಿಪಣಿ ದಾಳಿ

**ಕೀವ್:** ಉಕ್ರೇನ್ ನ ವಿದ್ಯುತ್ ಸ್ಥಾವರವನ್ನು ಗುರಿಯಾಗಿಸಿ ರವಿವಾರ ರಶ್ಯ ಬೃಹತ್ ಕ್ಷಿಪಣಿ ದಾಳಿ ನಡೆಸಿದ್ದು ರಾಜಧಾನಿ ಕೀವ್ ಹಾಗೂ ಇತರ ನಗರಗಳಲ್ಲಿ ಸ್ಫೋಟ ಸಂಭವಿಸಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ವಿದ್ಯುತ್ ಮತ್ತು ಇಂಧನ ವ್ಯವಸ್ಥೆಗಳನ್ನು ಗುರಿಯಾಗಿಸಿದ ಮತ್ತೊಂದು ಸುತ್ತಿನ ದಾಳಿ ಮುಂದುವರಿದಿದೆ.

ಶತ್ರುಗಳು ಉಕ್ರೇನ್ ನಾದ್ಯಂತ ವಿದ್ಯುತ್ ಉತ್ಪಾದನೆ ಮತ್ತು ಪ್ರಸರಣ ಸೌಲಭ್ಯಗಳ ಮೇಲೆ ದಾಳಿ ನಡೆಸುತ್ತಿದ್ದಾರೆ ಎಂದು ಉಕ್ರೇನ್ ನ ಇಂಧನ ಸಚಿವ ಜರ್ಮಾನ್ ಗಲುಷೆಂಕೊ ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿದ್ದಾರೆ.

ಶನಿವಾರ ತಡರಾತ್ರಿ ವಾಯು ರಕ್ಷಣಾ ವ್ಯವಸ್ಥೆಯು ಡ್ರೋನ್‌ಗಳನ್ನು ಪ್ರತಿಬಂಧಿಸುವ ಕಾರ್ಯ ನಡೆಸುತ್ತಿದ್ದಂತೆಯೇ ಹಲವು ನಗರಗಳಲ್ಲಿ ಸ್ಫೋಟ ಸಂಭವಿಸಿದೆ. ಸ್ಫೋಟದ ಬಳಿಕ ಹೆಚ್ಚಿನ ಅಪಾಯವನ್ನು ತಪ್ಪಿಸಲು ಕೀವ್ ಸೇರಿದಂತೆ ಹಲವು ನಗರಗಳಿಗೆ ವಿದ್ಯುತ್ ಸಂಪರ್ಕ ಕಡಿತಗೊಳಿಸಿರುವುದಾಗಿ ಅಧಿಕಾರಿಗಳು ಹೇಳಿದ್ದಾರೆ.

ವಾಯವ್ಯ ಉಕ್ರೇನ್ ನ ವೊಲಿನ್ ಪ್ರಾಂತದಲ್ಲಿ ಇಂಧನ ಮೂಲಸೌಕರ್ಯಕ್ಕೆ ಹಾನಿಯಾಗಿದೆ. ದಕ್ಷಿಣದ ಮಿಕೊಲಾಯ್ ಪ್ರಾಂತದಲ್ಲಿ ಶನಿವಾರ ತಡರಾತ್ರಿಯ ಡ್ರೋನ್ ದಾಳಿಯಲ್ಲಿ ಇಬ್ಬರು ಸಾವನ್ನಪ್ಪಿದ್ದಾರೆ. ಆಗ್ನೇಯ ನಗರವಾದ ಝುಪೋರಿಝಿಯಾ ಮತ್ತು ಬಂದರು ನಗರ ಒಡೆಸಾದಲ್ಲಿಯೂ ಸ್ಫೋಟ ಸಂಭವಿಸಿದೆ. ದಕ್ಷಿಣದ ಕಿವಿರಿಹ್ ಮತ್ತು ಪಶ್ಚಿಮದ ರಿವ್ನೆ ಪ್ರಾಂತಗಳಲ್ಲೂ ಸರಣಿ ಸ್ಫೋಟ ಸಂಭವಿಸಿರುವುದಾಗಿ ಪ್ರತ್ಯಕ್ಷದರ್ಶಿಗಳನ್ನು ಉಲ್ಲೇಖಿಸಿ ರಾಯ್ಟರ್ಸ್ ವರದಿ ಮಾಡಿದೆ.



# ಶಿವಲಿಂಗಕ್ಕೆ ನೀರೆರೆದು ದೇವರಿಗೆ ಆರತಿ ಬೆಳಗಿದ ಮುಸ್ಲಿಂ ಅಭ್ಯರ್ಥಿ



**ಮುಂಬೈ:** ಮಹಾರಾಷ್ಟ್ರ ವಿಧಾನಸಭೆ ಚುನಾವಣೆಯ ಸಿದ್ಧತೆಗಳ ನಡುವೆ, ಶಿವಸೇನೆಯ ಏಕೈಕ ಮುಸ್ಲಿಂ ಅಭ್ಯರ್ಥಿ ಹರೂನ್ ಖಾನ್ ಇಂದು ದೇಗುಲಕ್ಕೆ ಆಗಮಿಸಿ ಪ್ರಾರ್ಥನೆ ಸಲ್ಲಿಸಿದರು. ಮಹಾರಾಷ್ಟ್ರದಲ್ಲಿ ಚುನಾವಣಾ ವಾತಾವರಣದ ನಡುವೆಯೇ ಹರೂನ್ ಖಾನ್ ದೇವಸ್ಥಾನಕ್ಕೆ ಭೇಟಿ ನೀಡಿರುವುದು ರಾಜ್ಯ ರಾಜಕೀಯದಲ್ಲಿ ತೀವ್ರ ಸಂಚಲನ ಸೃಷ್ಟಿಸಿದೆ. ಶಿವಲಿಂಗದ ಮೇಲೆ ನೀರೆರೆದು ದೇವರಿಗೆ ಆರತಿ ಬೆಳಗಿದರು. ಈ ವೇಳೆ ಅರ್ಚಕರು ಹಣೆಗೆ ತಿಲಕವಿಟ್ಟರು. ದೇವಸ್ಥಾನದಲ್ಲಿ ಪ್ರಾರ್ಥನೆ ಸಲ್ಲಿಸಿದ ಬಳಿಕ ತಮ್ಮ ಬೆಂಬಲಿಗರೊಂದಿಗೆ ಸುತ್ತಮುತ್ತಲಿನ ಪ್ರದೇಶಗಳಿಗೆ ಭೇಟಿ ನೀಡಿ ಜನರೊಂದಿಗೆ ಸಂವಾದ ನಡೆಸಿದರು. ಇದೇ ವೇಳೆ ಜನತೆಗೆ ಶುಭಾಶಯವನ್ನು ಕೋರಿದರು.

ಹರೂನ್ ಖಾನ್ ಅವರನ್ನು ಶಿವಸೇನೆ (ಯುಬಿಟಿ)ಯು ಈ ಬಾರಿ ವರ್ಸೋವಾದಿಂದ ಕಣಕ್ಕಿಳಿಸಿದೆ. ವರ್ಸೋವಾ ರಾಜಕೀಯ ದೃಷ್ಟಿಕೋನದಿಂದ ಉನ್ನತ ಸ್ಥಾನವನ್ನು ಹೊಂದಿದ್ದು, ಕೇವಲ ಮುಸ್ಲಿಮರನ್ನು ಓಲೈಸಿ ಇಲ್ಲಿ ವಿಜಯ ಪತಾಕೆ ಹಾರಿಸುವುದು ಕಷ್ಟ.

ಹರೂನ್ ಅವರು ಉದ್ಧವ್ ಠಾಕ್ರೆಯವರ ನಿಕಟವರ್ತಿಯಾಗಿದ್ದು, ಇದರ ಪರಿಣಾಮವೇ ಉದ್ಧವ್ ಠಾಕ್ರೆ ಈ ಬಾರಿ ಮಹಾರಾಷ್ಟ್ರದ ಚುನಾವಣಾ ಕದನದಲ್ಲಿ ಹರೂನ್ ಖಾನ್‌ಗೆ ತಮ್ಮ ಪ್ರತಿಭೆ ತೋರಿಸಲು ಅವಕಾಶ ನೀಡಿದ್ದಾರೆ. ಜೊತೆಗೆ ಇತ್ತೀಚೆಗೆ ಅಖಿಲ ಭಾರತ ಉಲೇಮಾ ಮಂಡಳಿಯು ಮಹಾರಾಷ್ಟ್ರ ವಿಧಾನಸಭಾ ಚುನಾವಣೆಯಲ್ಲಿ ಮುಸ್ಲಿಂ ಸಮುದಾಯಕ್ಕೆ ಟಿಕೆಟ್ ನೀಡುವಂತೆ ಮಹಾವಿಕಾಸ್ ಅಘಾಡಿ ಅವರನ್ನು ಕೇಳಿತ್ತು.

# ದೆಹಲಿ ಸಚಿವ ರಾಜೀನಾಮೆ: ಆಮ್ ಆದ್ಮಿ ಪಕ್ಷಕ್ಕೆ ಶಾಕ್!

**ನವದೆಹಲಿ :** ದೆಹಲಿ ಮಾಜಿ ಸಿಎಂ ಅರವಿಂದ ಕೇಜ್ರಿವಾಲ್ ಗೆ ಮತ್ತೊಂದು ಶಾಕ್ ಎದುರಾಗಿದೆ. ಆಪ್ ನಾಯಕ ಕೈಲಾಶ್ ಗೆಹಲೋಟ್ ಪಕ್ಷಕ್ಕೆ ಗುಡ್ ಬೈ ಹೇಳಿದ್ದಾರೆ. ರಾಜೀನಾಮೆ ಪತ್ರ ರವಾನೆ ಮಾಡಿದ್ದು , ಆಪ್ ನ ಪ್ರಮುಖ ನಾಯಕನ ರಾಜಿನಾಮೆಯಿಂದ ಪಕ್ಷಕ್ಕೆ ದೊಡ್ಡ ನಷ್ಟವಾಗಿದೆ. ದೆಹಲಿ ರಾಜಕೀಯ ದಿನದಿಂದ ದಿನಕ್ಕೆ ಕಲುಷಿತವಾಗುತ್ತಿದೆ. ಆಮ್ ಆದ್ಮಿ ಪಾರ್ಟಿಯಲ್ಲಿ ಮೊದಲಿನ ಪಾರದರ್ಶಕತೆ ಇಲ್ಲ. ಸಾಲುಸಾಲು ಹಗರಣಗಳಿಂದ ಆಪ್ ಕಂಗೆಟ್ಟಿದೆ. ದೆಹಲಿಯ ಅಭಿವೃದ್ಧಿ ಆಗುತ್ತಿಲ್ಲ. ಶೀಶ್ ಮಹಲ್ ಕಾಂಟ್ರವರ್ಸಿ ಸಾಕಷ್ಟು ಘಾಸಿ ಉಂಟುಮಾಡಿದೆ. ಆಪ್ ನಿಂದ ಹೊರಬರೋಕೆ ಇದೇ ಸೂಕ್ತ ಸಮಯವಾಗಿದೆ. ಹೀಗಾಗಿ ಪಕ್ಷದಿಂದ ಹೊರಹೋಗಲು ಇಚ್ಛಿಸಿದ್ದೇನೆ ಎಂದು ತಮ್ಮ ರಾಜಿನಾಮೆ ಪತ್ರದಲ್ಲಿ ಕೈಲಾಶ್ ಉಲ್ಲೇಖಿಸಿದ್ದಾರೆ.



# ಗೋಧ್ರಾ ರೈಲು ದುರಂತ ಕುರಿತ ಸಿನಿಮಾಕ್ಕೆ ಮೋದಿ ಮೆಚ್ಚುಗೆ



**ನವದೆಹಲಿ:** 2002ರಲ್ಲಿ ನಡೆದ ಗೋಧ್ರಾ ರೈಲು ದುರಂತಕ್ಕೆ ಕಾರಣವಾದ ಘಟನೆಗಳನ್ನು ಕೇಂದ್ರೀಕರಿಸಿರುವ 'ದಿ ಸಾಬರಮತಿ ರಿಪೋರ್ಟ್' ಚಿತ್ರವನ್ನು ಪ್ರಧಾನಿ ನರೇಂದ್ರ ಮೋದಿ ಭಾನುವಾರ ಶ್ಲಾಘಿಸಿದ್ದಾರೆ.

ಹೌದು, ಎಕ್ಸ್ ಬಳಕೆದಾರರೊಬ್ಬರು ದಿ ಸಬರಮತಿ ರಿಪೋರ್ಟ್ ನೋಡಲೇಬೇಕಾದ ಒಂದು ಚಿತ್ರ ಎಂದು ಬರೆದಿದ್ದು, ಅದಕ್ಕೆ ಪ್ರಕತಿಕ್ರಿಯಿಸಿದ ಮೋದಿ, ಸರಿಯಾಗಿ ಹೇಳಿದ್ದೀರಿ.



ಈ ಚಿತ್ರದಿಂದ ಸತ್ಯ ಹೊರಬರುತ್ತಿರುವುದು ಒಳ್ಳೆಯದೇ. ಅದೂ ಕೂಡ ಒಂದು ರೀತಿಯಲ್ಲಿ ಜನಸಾಮಾನ್ಯರು ಕೂಡಾ ನೋಡುವಂತಾಗಿದೆ. ಒಂದು ನಕಲಿ ನಿರೂಪಣೆಯು ಸೀಮಿತ ಅವಧಿಯವರೆಗೆ ಮಾತ್ರ ಇರುತ್ತದೆ. ಕೊನೆಗೆ ಸತ್ಯವೇ ಯಾವಾಗಲೂ ಹೊರಬರುತ್ತದೆ ಎಂದು ಅವರು ಹೇಳಿದ್ದಾರೆ.

ಧೀರಜ್ ಸರ್ನಾ ನಿರ್ದೇಶನದ ಈ ಚಿತ್ರವು 2002ರ ಗೋಧ್ರಾ ರೈಲು ದುರಂತದ ಘಟನೆಯನ್ನು ವಿವರಿಸುತ್ತಿದೆ. ದುರ್ಘಟನೆಯ ಸಂದರ್ಭ ಮಹಿಳೆಯರು ಮತ್ತು ಮಕ್ಕಳು ಸೇರಿದಂತೆ 59 ಜನರು ಪ್ರಾಣ ಕಳೆದುಕೊಂಡಿದ್ದರು. ಈ ಘಟನೆ ಗುಜರಾತಿನ ಹಲವಾರು ಭಾಗಗಳಲ್ಲಿ ಗಲಭೆಗೆ ಕಾರಣವಾಗಿತ್ತು. ವಿಕ್ರಾಂತ್ ಮಾಸ್ಸೆ ನಟಿಸಿರುವ ಈ ಚಿತ್ರವು ನವೆಂಬರ್ 15 ರಂದು ಬಿಡುಗಡೆಯಾಯಿತು.

ಸಿನಿಮಾದ ಬಗ್ಗೆ ಎಕ್ಸ್ ಬಳಕೆದಾರರಾದ ಅಲೋಕ್ ಭಟ್ ಅವರು ಕಿರು ವಿಮರ್ಶೆಯನ್ನು ಹಂಚಿಕೊಂಡಿದ್ದಾರೆ. ತಯಾರಕರು ಈ ಸಮಸ್ಯೆಯನ್ನು ಸಾಕಷ್ಟು ಸೂಕ್ಷ್ಮತೆ ಮತ್ತು ಘನತೆಯಿಂದ ನಿಭಾಯಿಸಿದ್ದಾರೆ ಎಂದು ಹೇಳಿದ್ದಾರೆ. ಇದಕ್ಕೆ ಪ್ರಧಾನಿ ಮೋದಿ ಅವರು ಪ್ರತಿಕ್ರಿಯಿಸಿ ಸಿನಿಮಾದ ಬಗ್ಗೆ ಶ್ಲಾಘನೆ ವ್ಯಕ್ತಪಡಿಸಿದ್ದಾರೆ.

# ಜಗತ್ತಿನಲ್ಲಿ ಎಲ್ಲೇ ಸಮಸ್ಯೆಯಾದರೂ ಭಾರತದಿಂದ ಸ್ಪಂದನೆ : ಮೋದಿ

**ಅಬುಜಾ:** ''ವಿಶ್ವದಲ್ಲಿ ಎಲ್ಲೇ ಸಮಸ್ಯೆ ಕಾಣಿಸಿಕೊಂಡರೂ ಅವರು ಮೊದಲು ಭಾರತದತ್ತ ನೋಡುತ್ತಾರೆ. ಏಕೆಂದರೆ ಎಲ್ಲ ಸಮಸ್ಯೆಗಳಿಗೂ ಭಾರತವೇ ಮೊದಲು ಸ್ಪಂದಿಸುವ ರಾಷ್ಟ್ರವಾಗಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ರವಿವಾರ ಹೇಳಿದ್ದಾರೆ.

ನೈಜೀರಿಯಾ ಪ್ರವಾಸದಲ್ಲಿರುವ ಮೋದಿ, ಅಲ್ಲಿನ ಭಾರತೀಯ ಸಮುದಾಯದವರನ್ನುದ್ದೇಶಿಸಿ ರವಿವಾರ ಭಾಷಣ ಮಾಡಿದರು. ''ಸನ್ನು ನೈಜೀರಿಯಾ' (ನಮಸ್ತೆ) ಎಂದು ಭಾಷಣ ಆರಂಭಿಸಿದ ಅವರು, ಇತ್ತೀಚಿನ ವರ್ಷಗಳಲ್ಲಿ ಭಾರತ ಸಾಧಿಸಿರುವ ಅಭಿವೃದ್ಧಿ ಮತ್ತು ಭಾರತ ಹಾಗೂ ಆಫ್ರಿಕಾ ದೇಶಗಳ ನಡುವಿನ ಸಂಬಂಧದ ಬಗ್ಗೆ ಮಾತನಾಡಿದರು.

ಆಫ್ರಿಕಾದ ರಾಷ್ಟ್ರಗಳಿಗೆ ಜಾಗತಿಕ ಮನ್ನಣೆ ದೊರಕಿಸಿಕೊಡುವಲ್ಲಿ ಭಾರತದ ಪಾತ್ರ ದೊಡ್ಡದಿದೆ. ಭಾರತ ಅಭಿವೃದ್ಧಿ, ಶಾಂತಿ, ಸಮೃದ್ಧಿ ಮತ್ತು ಪ್ರಜಾಪ್ರಭುತ್ವದಲ್ಲಿ ಅಭಿವೃದ್ಧಿ ಸಾಧಿಸಿದೆ. ಹೀಗಾಗಿಯೇ ಇಡೀ ವಿಶ್ವ ಈಗ ಭಾರತದತ್ತ ದೃಷ್ಟಿ ನೆಟ್ಟಿದೆ.

ವಿಶ್ವದ ರಾಷ್ಟ್ರಗಳಿಗೆ ಭಾರತ ಈಗ ಹೊಸ ದಾರಿಯನ್ನು ಸೃಷ್ಟಿಸಿಕೊಡುತ್ತಿದೆ ಎಂದು ಅವರು ಹೇಳಿದರು.



# ಮಣಿಪುರದಲ್ಲಿ ನಿಲ್ಲದ ಹಿಂಸಾಚಾರ

**ಇಂಫಾಲ:** ರಾಜ್ಯದಲ್ಲಿ ನಡೆಯುತ್ತಿರುವ ಹಿಂಸಾಚಾರದ ನಡುವೆ ಕಾನ್ರಾಡ್ ಸಂಗ್ಮಾ ನೇತೃತ್ವದ ಎನ್‌ಪಿಪಿ ಭಾನುವಾರ ಬಿಜೆಪಿಯೊಂದಿಗಿನ ಮಣಿಪುರ ಸಮ್ಮಿಶ್ರ ಸರ್ಕಾರಕ್ಕೆ ತನ್ನ ಬೆಂಬಲವನ್ನು ಹಿಂತೆಗೆದುಕೊಂಡಿದೆ.

ಬಿಜೆಪಿ ಮುಖ್ಯಸ್ಥ ಜೆಪಿ ನಡ್ಡಾ ಅವರಿಗೆ ಪತ್ರ ಬರೆದಿರುವ ಎನ್‌ಪಿಪಿ, ಕಳೆದ ಕೆಲವು ದಿನಗಳಿಂದ ಮಣಿಪುರದಲ್ಲಿ ಪರಿಸ್ಥಿತಿ ಮತ್ತಷ್ಟು ಹದಗೆಟ್ಟಿದ್ದು, ಅಮಾಯಕರು ಪ್ರಾಣ ಕಳೆದುಕೊಳ್ಳುತ್ತಿದ್ದಾರೆ.

ಜನರು ಭಯದಿಂದ ಬದುಕುತ್ತಿದ್ದಾರೆ. ಆದರೂ ಬಿಜೆಪಿ ಯಾವುದೇ ಕ್ರಮವನ್ನು ಕೈಗೊಳ್ಳುತ್ತಿಲ್ಲ ಎಂದು ಆರೋಪಿಸಿದ್ದಾರೆ.

ಬಿರೇನ್ ಸಿಂಗ್ ನೇತೃತ್ವದ ಸರ್ಕಾರ ರಾಜ್ಯದಲ್ಲಿನ ಸಮಸ್ಯೆಯನ್ನು ಪರಿಹರಿಸಲು ಸಂಪೂರ್ಣ ವಿಫಲವಾಗಿದೆ. ಈ ಹಿನ್ನೆಲೆ ನಾವು ಬಿಜೆಪಿಗೆ ನೀಡಿದ್ದ ಬೆಂಬಲವನ್ನು ಈ ಕೂಡಲೇ ಹಿಂಪಡೆಯುತ್ತೇವೆ ಎಂದು ಎನ್‌ಪಿಪಿ ತಿಳಿಸಿದೆ.



ಮಣಿಪುರ ವಿಧಾನಸಭೆಯಲ್ಲಿ 60 ಸದಸ್ಯರಿದ್ದು, ಎನ್‌ಪಿಪಿ 7 ಶಾಸಕರನ್ನು ಹೊಂದಿದೆ. ಬಿಜೆಪಿ 32 ಸ್ಥಾನಗಳನ್ನು ಪಡೆದಿದೆ. ಬಿಜೆಪಿ ಮಿತ್ರ ಪಕ್ಷ ಜೆಡಿಯು ಕೂಡಾ 6 ಸ್ಥಾನಗಳಲ್ಲಿ ಗೆಲುವು ಕಂಡಿದೆ.

ಮೈತೆಯಿ ಮತ್ತು ಕುಕಿ ಸಮುದಾಯಗಳ ನಡುವಿನ ಕೋಮು ಸಂಘರ್ಷದಿಂದಾಗಿ ಇಲ್ಲಿಯವರೆಗೆ ಕನಿಷ್ಠ 250 ಸಾವುಗಳು ಸಂಭವಿಸಿದ್ದು, 2023 ರಿಂದ ಸುಮಾರು 60,000 ಜನರನ್ನು ಸ್ಥಳಾಂತರಿಸಲಾಗಿದೆ.

# ರುಂಡವಿಲ್ಲದ ಮಹಿಳೆಯ ಮೃತದೇಹ ಬೆತ್ತಲೆಯಾಗಿ ಪತ್ತೆ

**ಇಂಫಾಲ್:** ಇತ್ತೀಚೆಗೆ ಮಣಿಪುರದ ಜಿರಿಬಾಮ್‌ನಿಂದ ನಾಪತ್ತೆಯಾಗಿದ್ದ 6 ಮಂದಿ ನಾಪತ್ತೆಯಾಗಿದ್ದರು. ಈ ಪೈಕಿ ಓರ್ವ ಮಹಿಳೆ ಮತ್ತು ಇಬ್ಬರು ಮಕ್ಕಳ ಮೃತದೇಹ ಜಿರಿಬಾಮ್ ಜಿಲ್ಲೆಯ ಬೊರೊಬೆಕ್ರಾದಿಂದ 16 ಕಿಮೀ ದೂರದ ನದಿಯಲ್ಲಿ ಪತ್ತೆಯಾಗಿತ್ತು. ಈ ಬೆನ್ನಲ್ಲೇ ಭಾನುವಾರ ಬೆಳಗ್ಗೆ ರುಂಡವಿಲ್ಲದ ಮತ್ತೊಂದು ಮಹಿಳೆಯ ಮೃತದೇಹ ಅರೆಬೆತ್ತಲೆ ಸ್ಥಿತಿಯಲ್ಲಿ ಪತ್ತೆಯಾಗಿದೆ, ಜೊತೆಗೆ ಉಗ್ರರು ಒತ್ತೆಯಾಳಾಗಿ ಇರಿಸಿದ್ದರು ಎನ್ನಲಾದ 2 ವರ್ಷದ ಮಗುವಿನ ದೇಹವು ಪತ್ತೆಯಾಗಿದೆ ಎಂದು ವರದಿಯಾಗಿದೆ. ಜಿರಿಬಾಮ್ ಜಿಲ್ಲೆಯ ಗಡಿಯಲ್ಲಿರುವ ಬರಾಕ್ ನದಿಯಲ್ಲಿ ತೇಲಿಬರುತ್ತಿದ್ದ ಮೃತದೇಹವನ್ನು ಅಸ್ಸಾಂನ ಕ್ಯಾಚರ್ ಜಿಲ್ಲೆಯ ಪೊಲೀಸರು ಪತ್ತೆಹಚ್ಚಿದ್ದಾರೆ. ಆದ್ರೆ ಮೃತದೇಹದ ಗುರುತು ಇನ್ನೂ ಪತ್ತೆಯಾಗಿಲ್ಲ. ಒಟ್ಟಿನಲ್ಲಿ ನಾಪತ್ತೆಯಾದ 6 ಮಂದಿಯಲ್ಲಿ ಇವರೂ ಒಬ್ಬರೆಂದು ಶಂಕಿಸಲಾಗಿದೆ. 4ನೇ ಮೃತದೇಹ ಪತ್ತೆಯಾದ ಬೆನ್ನಲ್ಲೇ ಮಣಿಪುರದಲ್ಲಿ ಉದ್ವಿಗ್ನತೆ ಮತ್ತೆ ಹೆಚ್ಚಾಗಿದೆ.

# ಗುಲ್ಮಾರ್ಗ್‌ನಲ್ಲಿ ಈ ಸೀಸನ್ನಿನ ಮೊದಲ ಹಿಮಪಾತ, ಶ್ರೀನಗರದಲ್ಲಿ ಮಳೆ

**ಶ್ರೀನಗರ:** ಕಾಶ್ಮೀರದ ಪ್ರವಾಸಿ ತಾಣವಾದ ಗುಲ್ಮಾರ್ಗ್‌ನಲ್ಲಿ ಶನಿವಾರದಂದು ಮೊದಲ ಹಿಮಪಾತವಾಗಿದೆ. ಬಯಲು ಪ್ರದೇಶಗಳಲ್ಲಿ ಮಳೆ ಸುರಿದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಕಣಿವೆಯ ಬಹುತೇಕ ಬಯಲು ಪ್ರದೇಶಗಳಲ್ಲಿ ಮಳೆ ಆರಂಭವಾಗಿದ್ದು, ಇನ್ನು ಕೆಲವೆಡೆ ಹಗುರದಿಂದ ಸಾಧಾರಣ ಹಿಮಪಾತವಾಗುತ್ತಿದೆ. ಕಾಶ್ಮೀರದ ಪ್ರಸಿದ್ಧ ಪ್ರವಾಸಿ ತಾಣ ಮತ್ತು ಗುಲ್ಮಾರ್ಗ್ ಮತ್ತು ಗುರೇಜ್ ಕಣಿವೆಯಲ್ಲಿ ಮುಂಜಾನೆ ಹಿಮಪಾತವಾಗಿದೆ. ಗುಲ್ಮಾರ್ಗ್‌ನಲ್ಲಿ ಲಘು ಹಿಮಪಾತ ದಾಖಲಾಗಿದ್ದರೆ, ಗುರೇಜ್ ಕಣಿವೆಯಲ್ಲಿ ಭಾರೀ ಪ್ರಮಾಣದಲ್ಲಿ ಹಿಮಪಾತವಾಗಿದೆ. ಮಧ್ಯಾಹ್ನದ ನಂತರ ಹವಾಮಾನದಲ್ಲಿ ಸುಧಾರಣೆಯಾಗಿದೆ ಎಂದು ಹವಾಮಾನ ಇಲಾಖೆ ಮಾಹಿತಿ ನೀಡಿದೆ. ಗುಲ್ಮಾರ್ಗ್‌ನಲ್ಲಿ ಶನಿವಾರ ಬೆಳಗ್ಗೆ ಒಂದು ಇಂಚು ಹಿಮಪಾತವಾಗಿದ್ದು, ಬಂಡಿಪೋರಾ ಗುರೇಜ್ ರಸ್ತೆ ಸಂಚಾರವನ್ನು ಸದ್ಯಕ್ಕೆ ಮುಚ್ಚಲಾಗಿದೆ. ನ.17ರಿಂದ 23ರವರೆಗೆ ಸಾಮಾನ್ಯವಾಗಿ ಶುಷ್ಕ ವಾತಾವರಣದಿಂದ ಕೂಡಿರುವ ಸಾಧ್ಯತೆ ಇರುತ್ತದೆ. ನ.24 ರಂದು ಕೆಲವು ಸ್ಥಳಗಳಲ್ಲಿ ಸ್ವಲ್ಪ ಮಳೆ ಮತ್ತು ಹಿಮಪಾತ ಆಗುವ ಸಾಧ್ಯತೆಯಿದೆ. ಪ್ರವಾಸಿಗರು ಮತ್ತು ಪ್ರಯಾಣಿಕರು ಹವಾಮಾನ ಪರಿಸ್ಥಿತಿಗಳಿಗೆ ಅನುಗುಣವಾಗಿ ತಮ್ಮ ಪ್ರಯಾಣ ಮಾಡುವಂತೆ ಹವಾಮಾನ ಇಲಾಖೆಯ ಉಪನಿರ್ದೇಶಕ ಡಾ. ಮುಖ್ತಾರ್ ಅಹ್ಮದ್ ಸೂಚಿಸಿದ್ದಾರೆ. ಶ್ರೀನಗರ ಮತ್ತು ಕಾಶ್ಮೀರ ಕಣಿವೆಯ ಕೆಲವು ಭಾಗಗಳಲ್ಲಿ ಕಳೆದ ಎರಡು ಮೂರು ದಿನಗಳಿಂದ ಹಿಮಪಾತವಾಗುತ್ತಿದೆ. ಹಿಮದ ತೆಳುವಾದ ಪದರವು ಮನೆಗಳ ಮೇಲ್ಛಾವಣಿ, ಕಾರು, ಮೈದಾನ, ಹುಲ್ಲು ಪ್ರದೇಶ, ಮರ-ಗಿಡ, ಹೂವು-ಬಳ್ಳಿಗಳ ಮೇಲೆ ಆವರಿಸಿದೆ. ಕಣಿವೆ ರಾಜ್ಯದ ಕೆಲವು ಭಾಗಗಳಲ್ಲಿ ಎಡಬಿಡದೇ ಮಂಜು ಸುರಿತುತ್ತಿರುವ ಕಾರಣ ನಗರದ ಬೀದಿಗಳು ಕೂಡ ಹಿಮದಿಂದ ಆವೃತವಾಗಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.



# ಇರಾಕ್‌ನಲ್ಲಿ 9 ವರ್ಷದ ಬಾಲಕಿ ಪ್ರೆಗ್ನೆಂಟ್!

**ಬಗ್ದಾದ್:** ಇರಾಕ್‌ನಲ್ಲಿ 9 ವರ್ಷದ ಬಾಲಕಿಯೊಬ್ಬಳು ಗರ್ಭಿಣಿಯಾಗಿದ್ದು, ಆಕೆ ಸೆಲೆಬ್ರೇಷನ್ ಮಾಡುತ್ತಿರುವ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ. ಏನೂ ಅರಿಯದ ಪುಟ್ಟ ಬಾಲಕಿ ಗರ್ಭಿಣಿಯಾಗಿರುವ ವಿಡಿಯೋ ಕಂಡು ನೆಟ್ಟಿಗರು ಬೆಚ್ಚಿ ಬಿದ್ದಿದ್ದಾರೆ. ಇರಾಕ್‌ನಲ್ಲಿ ಬಾಲ್ಯವಿವಾಹ ಸಾಮಾನ್ಯವೆನಿಸಿದರೂ ಈ ಘಟನೆ ಮಾತ್ರ ಅಂತಾರಾಷ್ಟ್ರೀಯ ಗಮನ ಸೆಳೆದಿದೆ. ಈ ಪ್ರಕರಣವು ಸಾಮಾಜಿಕ ಮಾಧ್ಯಮ ಪ್ಲಾಟ್‌ಫಾರ್ಮ್‌ಗಳಲ್ಲಿ ಮತ್ತು ಅಂತರರಾಷ್ಟ್ರೀಯ ಮಾನವ ಹಕ್ಕುಗಳ ಸಂಸ್ಥೆಗಳಲ್ಲಿ ಆಕ್ರೋಶವನ್ನು ಹುಟ್ಟುಹಾಕಿದೆ. ಈ ಪ್ರದೇಶದಲ್ಲಿ ಮಕ್ಕಳ ಹಕ್ಕುಗಳ ಉಲ್ಲಂಘನೆಯ ಬಗ್ಗೆ ಪ್ರಶ್ನೆಗಳು ಎದ್ದಿದೆ. ವರದಿಗಳ ಪ್ರಕಾರ ವೈರಲ್ ವಿಡಿಯೋದಲ್ಲಿ ಕಾಣಿಸಿಕೊಂಡಿರುವ ಬಾಲಕಿಯ ಗುರುತನ್ನು ಆಕೆಯ ಸುರಕ್ಷತೆಗಾಗಿ ನಿರ್ಬಂಧಿಸಲಾಗಿದೆ. ಆದರೆ ಇರಾಕ್ನಲ್ಲಿ ಹೆಚ್ಚಿನ ಮಕ್ಕಳು ಇನ್ನೂ ಪ್ರಾಥಮಿಕ ಶಾಲೆಯಲ್ಲಿ ಓದುತ್ತಿರುವ ವಯಸ್ಸಿನಲ್ಲಿಯೇ ಮದುವೆ ಮಾಡಿಸುತ್ತಿರುವುದು ಆಘಾತಕಾರಿ ಎನಿಸಿಕೊಂಡಿದೆ. ಈ ಘಟನೆಯು ಯುನಿಸೆಫ್ ಮತ್ತು ಅಮ್ನೆಸ್ಟಿ ಇಂಟರ್ನ್ಯಾಶನಲ್ ಸೇರಿದಂತೆ ಮಾನವ ಹಕ್ಕುಗಳ ಸಂಘಟನೆಗಳನ್ನು ತ್ವರಿತ ಕ್ರಮಕ್ಕೆ ಕರೆ ನೀಡುವಂತೆ ಪ್ರೇರೇಪಿಸಿದೆ.



# 20 ಸಾವಿರ ಮಂದಿಗೆ ಔತಣ ನೀಡಿದ ಪಾಕಿಸ್ತಾನಿ ಭಿಕ್ಷುಕ..!

**ಇಸ್ಲಾಮಾಬಾದ್:** ಪಾಕಿಸ್ತಾನದಲ್ಲಿ ತೀವ್ರ ಬಡತನ ತಾಂಡವವಾಡುತ್ತಿರುವ ನಡುವೆಯೇ ಎಲ್ಲೆಡೆ ಚರ್ಚೆಯಾಗುತ್ತಿರುವ ಪ್ರಕರಣವೊಂದು ಬೆಳಕಿಗೆ ಬಂದಿದೆ. ಪಾಕಿಸ್ತಾನದ ಭಿಕ್ಷುಕ ಕುಟುಂಬವೊಂದು ತಮ್ಮ ಅಜ್ಜಿ ಮರಣ ಹೊಂದಿ 40 ನೇ ದಿನದ ಕಾರ್ಯಕ್ಕೆ ಬರೋಬ್ಬರಿ 1.25 ಕೋಟಿ ರೂ. ಖರ್ಚು ಮಾಡಿ 20 ಸಾವಿರ ಭಿಕ್ಷುಕರಿಗೆ ಔತಣಕೂಟ ಏರ್ಪಡಿಸಿದೆ. ಈ ಘಟನೆಯ ವೀಡಿಯೋ ಇದೀಗ ಸಾಮಾಜಿಕ ಜಾಲತಾಣಗಲ್ಲಿ ಸಿಕ್ಕಾಪಟ್ಟೆ ವೈರಲ್ ಆಗುತ್ತಿದೆ. ಪಾಕಿಸ್ತಾನದ ಗುಂಜಾರವಾಲಾದಲ್ಲಿ ಭಿಕ್ಷುಕ ಕುಟುಂಬವೊಂದು ಅಜ್ಜಿ ಮರಣ ಹೊಂದಿದ 40 ನೇ ದಿನದಂದು ಆಚರಣೆಯೊಂದನ್ನು ಹಮ್ಮಿಕೊಳ್ಳಲಾಗಿತ್ತು. ಈ ಆಚರಣೆಯಲ್ಲಿ ಸಾವಿರಾರು ಮಂದಿ ಭಾಗವಹಿಸಿದ್ದು, ಹಬ್ಬದ ರೀತಿಯ ಆಡಂಭರ ಕಂಡು ಜನ ಅಚ್ಚರಿಗೊಂಡಿದ್ದಾರೆ.



**ಮೆನುವಿನಲ್ಲಿ ಏನಿತ್ತು..?:** ಸಮಾರಂಭವು ಸಾಂಪ್ರದಾಯಿಕ ಉಪಹಾರ ಮೆನುವಿನೊಂದಿಗೆ ಪ್ರಾರಂಭವಾಯಿತು. ಸಂಜೆ ವಿಶೇಷ ಖಾದ್ಯವನ್ನು ಬಡಿಸಲಾಯಿತು. ಇದಕ್ಕಾಗಿ 250 ಮೇಕೆಗಳನ್ನು ವಧೆ ಮಾಡಲಾಯಿತು. ಅದರಲ್ಲಿ ಕುರಿಮರಿ, ಸಿಹಿ ಅನ್ನ ಎಂದೂ ಕರೆಯಲ್ಪಡುವ ನಾನ್ ಮಟರ್ಗಂಜ್, ಅನೇಕ ಪಾನೀಯಗಳ ಜೊತೆಗೆ ಕ್ಯಾರೆಟ್ ಮತ್ತು ಸೇಬಿನ ಅನೇಕ ವಿಶೇಷ ಭಕ್ಷ್ಯಗಳನ್ನು ಒಳಗೊಂಡಿತ್ತು. ಗುಜ್ರಾನ್ವಾಲಾದ ಕ್ಯಾಂಟ್ ಪ್ರದೇಶದ ರಾಹ್ವಾಲಿ ರೈಲ್ವೆ ನಿಲ್ದಾಣದ ಬಳಿ ಈ ಅದ್ದೂರಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಇದರಲ್ಲಿ ವಿಶೇಷ ಟೆಂಟ್ನಲ್ಲಿ ಕುಳಿತು ಸಾವಿರಾರು ಅತಿಥಿಗಳಿಗೆ ಆಹಾರವನ್ನು ನೀಡಲಾಯಿತು. ಬಡತನದಲ್ಲಿರುವ ಕುಟುಂಬಕ್ಕೆ ಖರ್ಚು ಮಾಡಲು ಇಷ್ಟೊಂದು ಹಣ ಎಲ್ಲಿಂದ ಬಂತು ಎಂಬಂತೆ ಹಲವು ಪ್ರಶ್ನೆಗಳು ಎದ್ದಿವೆ.

# ಪಾಕಿಸ್ತಾನದಲ್ಲಿ ಮತ್ತೆ ಉಗ್ರರ ಅಟ್ಟಹಾಸ: ಏಳು ಭದ್ರತಾ ಸಿಬ್ಬಂದಿಗಳು ಸಾವು

**ಪಾಕಿಸ್ತಾನ:** ಪಾಕಿಸ್ತಾನದ ಕ್ವೆಟ್ಟಾದ ಕಲಾತ್ನ ಜೋಹಾನ್ ಪ್ರದೇಶದ ಪರ್ವತದ ಮೇಲಿರುವ ಚೆಕ್ ಪೋಸ್ಟ್ ಮೇಲೆ ಭಯೋತ್ಪಾದಕರ ದಾಳಿಯಲ್ಲಿ ಏಳು ಭದ್ರತಾ ಸಿಬ್ಬಂದಿ ಸಾವನ್ನಪ್ಪಿದ್ದರೆ, 18 ಮಂದಿ ಗಾಯಗೊಂಡಿದ್ದಾರೆ. ಅಧಿಕಾರಿಗಳು ಈ ಮಾಹಿತಿ ನೀಡಿದ್ದಾರೆ.

ಡಾನ್ ವರದಿಯ ಪ್ರಕಾರ, ಕಲಾತ್ ವಿಭಾಗದ ಕಮಿಷನರ್ ನಯೀಮ್ ಬಜಾಯ್ ಅವರು ದಾಳಿಯ ಬಗ್ಗೆ ಮಾಹಿತಿ ನೀಡುತ್ತಾ, ಈ ದಾಳಿಯಲ್ಲಿ ಚೆಕ್ ಪೋಸ್ಟ್ನಲ್ಲಿ ನಿಯೋಜಿಸಲಾಗಿದ್ದ ಏಳು ಯೋಧರು ಹುತಾತ್ಮರಾಗಿದ್ದರೆ, 18 ಮಂದಿ ಗಾಯಗೊಂಡಿದ್ದಾರೆ ಎಂದು ಹೇಳಿದರು.



ಗಾಯಾಳುಗಳು ಮತ್ತು ಮೃತ ದೇಹಗಳನ್ನು ಕ್ವೆಟ್ಟಾದ ಸಿಎಂಎಚ್‌ಗೆ ಕಳುಹಿಸಲಾಗಿದೆ ಎಂದು ಅವರು ಹೇಳಿದರು.

ಇಂಟರ್-ಸರ್ವಿಸಸ್ ಪಬ್ಲಿಕ್ ರಿಲೇಶನ್ಸ್ ಪ್ರಕಾರ, ಶುಕ್ರವಾರ ರಾತ್ರಿ ಶಾ ಮರ್ದಾನ್ ಬಳಿ ಭದ್ರತಾ ಪೋಸ್ಟ್ ಮೇಲೆ ದಾಳಿ ಮಾಡಲು ಪ್ರಯತ್ನಿಸುತ್ತಿದ್ದ ಭಯೋತ್ಪಾದಕರು ಮತ್ತು ಭದ್ರತಾ ಪಡೆಗಳ ನಡುವೆ ಎನ್ಕೌಂಟರ್ ನಡೆದಿದೆ. ಭದ್ರತಾ ಪಡೆಗಳೊಂದಿಗಿನ ಈ ಎನ್ಕೌಂಟರ್‌ನಲ್ಲಿ ಆರು ಭಯೋತ್ಪಾದಕರು ಹತರಾಗಿದ್ದಾರೆ, ನಾಲ್ವರು ಭದ್ರತಾ ಸಿಬ್ಬಂದಿಗಳು ಸಾವನ್ನಪ್ಪಿದ್ದಾರೆ ಮತ್ತು 18 ಮಂದಿ ಗಾಯಗೊಂಡಿದ್ದಾರೆ.

ದಾಳಿಯಲ್ಲಿ ಭಾಗಿಯಾಗಿರುವ ಭಯೋತ್ಪಾದಕರನ್ನು ಪತ್ತೆಹಚ್ಚಲು ಭದ್ರತಾ ಪಡೆಗಳು ಜೋಹಾನನ್ ಮತ್ತು ಅದರ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಶೋಧ ಕಾರ್ಯಾಚರಣೆಯನ್ನು ಪ್ರಾರಂಭಿಸಿವೆ ಎಂದು ಕಲಾತ್ ಉಪ ಆಯುಕ್ತ ಬಿಲಾಲ್ ಶಬ್ಬೀರ್ ಹೇಳಿದ್ದಾರೆ. ಮೃತ ದೇಹಗಳು ಮತ್ತು ಗಾಯಾಳುಗಳನ್ನು ಕ್ವೆಟ್ಟಾದಲ್ಲಿರುವ ಸಿಎಂಎಚ್‌ಗೆ ವಿಮಾನದಲ್ಲಿ ರವಾನಿಸಲಾಗಿದೆ ಎಂದು ಅವರು ಹೇಳಿದರು. ಘಟನೆ ಕುರಿತು ಸಂಬಂಧಪಟ್ಟ ಅಧಿಕಾರಿಗಳು ತನಿಖೆ ನಡೆಸುತ್ತಿದ್ದಾರೆ.

ಸ್ಥಳೀಯ ಅಧಿಕಾರಿಗಳು ಹುತಾತ್ಮರಾದವರನ್ನು ನಾಯಕ್ ಬಖತ್ ಜಮಾನ್, ಲ್ಯಾನ್ಸ್ ನಾಯ್ಕ್ ಗುಲಾಮ್ ಇಶಾಕ್, ಲ್ಯಾನ್ಸ್ ನಾಯಕ್ ಅಬ್ದುಲ್ ಖಾದಿರ್, ಸೆಪ್ ರಿಜ್ವಾನ್, ಸೆಪ್ ವಕಾಸ್, ಸೆಪ್ ಅಲಿ ಅಬ್ಬಾಸ್ ಮತ್ತು ಸೆಪ್ ಸಕಿಬುರ್ ರೆಹಮಾನ್ ಎಂದು ಗುರುತಿಸಿದ್ದಾರೆ.



# ಡೆನ್ಮಾರ್ಕ್‌ನ ವಿಕ್ಟೋರಿಯಾ ಜೆರ್ ಥೈಲ್ವಿಗ್ ಗೆ ಮಿಸ್ ಯುನಿವರ್ಸ್ ಕಿರೀಟ

**ನವದೆಹಲಿ:** ಪ್ರಸಕ್ತ ಸಾಲಿನ ಮಿಸ್ ಯುನಿವರ್ಸ್ ಕಿರೀಟ ಡೆನ್ಮಾರ್ಕ್ ಪಾಲಾಗಿದೆ. ಮೆಕ್ಸಿಕೊ ನಗರದಲ್ಲಿ ನಡೆದ 73 ನೇ ವಾರ್ಷಿಕ ಮಿಸ್ ಯೂನಿವರ್ಸ್ ಸ್ಪರ್ಧೆಯ ಅಂತಿಮ ಸುತ್ತಿನಲ್ಲಿ ಡೆನ್ಮಾರ್ಕ್ ನ ವಿಕ್ಟೋರಿಯಾ ಕ್ವೆರ್ ಥೈಲ್ವಿಗ್ ಮಿಸ್ ಯೂನಿವರ್ಸ್ 2024 ಕಿರೀಟವನ್ನು ಮುಡಿಗೇರಿಸಿಕೊಂಡಿದ್ದಾರೆ. ನವೆಂಬರ್ 16 ರ ಶನಿವಾರ, ಮೆಕ್ಸಿಕೊ ನಗರದ ಅರೆನಾ ಸಿಡಿಎಂಎಕ್ಸ್‌ನಿಂದ ನೇರ ಪ್ರಸಾರದಲ್ಲಿ, ಶೆಡ್ನಿಸ್ ಅಲೋಂಡ್ರಾ, ಪಲಾಸಿಯೋಸ್ ಕಾರ್ನೆಜೊ ಮಿಸ್ ಡೆನ್ಮಾರ್ಕ್ ವಿಕ್ಟೋರಿಯಾ ಜೆರ್ ಥೈಲ್ವಿಗ್ ಅವರನ್ನು ಮಿಸ್ ಯೂನಿವರ್ಸ್ ಕುಟುಂಬಕ್ಕೆ ಸ್ವಾಗತಿಸಿದ್ದಾರೆ. ಯುರೋಪಿಯನ್ ಮತ್ತು ವಿಶ್ವ ಚಾಂಪಿಯನ್ ಶಿಪ್ ನ ನೃತ್ಯಗಾರ್ತಿಯಾದ ಡ್ಯಾನಿಶ್ ಸೌಂದರ್ಯ ರಾಣಿ ತನ್ನ ವಾಕ್ಚಾತುರ್ಯದಿಂದ ತೀರ್ಪುಗಾರರು ಮತ್ತು ಪ್ರೇಕ್ಷಕರನ್ನು ಆಕರ್ಷಿಸಿದರು. ಸೌಂದರ್ಯ ಉದ್ಯಮಿ, ಮಾನಸಿಕ ಆರೋಗ್ಯ , ಪ್ರಾಣಿಗಳ ರಕ್ಷಕ ಮತ್ತು ಮಹತ್ವಾಕಾಂಕ್ಷೆಯ ವಕೀಲರಾದ ವಿಕ್ಟೋರಿಯಾ ಮಿಸ್ ಯೂನಿವರ್ಸ್ ಕಿರೀಟವು ದೈಹಿಕ ಸೌಂದರ್ಯವನ್ನು ಮೀರಿದೆ ಎಂದು ಸಾಬೀತುಪಡಿಸಿದರು. ಪ್ರಶೋತ್ತರ ವಿಭಾಗದಲ್ಲಿ ಅವರ ಜಾಣ್ಮೆಯ ಉತ್ತರ ಎಲ್ಲರನ್ನ ಆಕರ್ಷಿಸಿದವು. ಈ ಮೂಲಕ ಅವರು ಮಿಸ್ ಯುನಿವರ್ಸ್ ಕಿರೀಟ ಮುಡಿಗೇರಿಸಿಕೊಂಡು ಗಮನ ಸೆಳೆದರು.

Postal Registration No.KA/BGW-1823/2019-2021, Posted at Patrika Channel, RMS Bhavan, Bengaluru PSO, Mysore Road, Bengaluru- 560020, RNI No.KARKAN/2002/08054

## ‘ಬಿಗ್ ಬಾಸ್’ ಮನೆಯಿಂದ

# ಅನುಷಾ ರೈ ಔಟ್





ನಟಿ ಅನುಷಾ ರೈ ಅವರು ‘ಬಿಗ್ ಬಾಸ್ ಕನ್ನಡ ಸೀಸನ್ 11’ ಕಾರ್ಯಕ್ರಮದಿಂದ ಎಲಿಮಿನೇಟ್ ಆಗಿದ್ದಾರೆ. ಅವರು ಔಟ್ ಆಗಿದ್ದಕ್ಕೆ ಬಿಗ್ ಬಾಸ್ ಮನೆಯ ಇತರ ಸದಸ್ಯರಿಗೆ ಬೇಸರ ಆಗಿದೆ. ಚೈತ್ರಾ ಕುಂದಾಪುರ, ಧರ್ಮ ಕೀರ್ತಿರಾಜ್, ಶಿಶಿರ್ ಮುಂತಾದವರು ಕಣ್ಣೀರು ಹಾಕಿದ್ದಾರೆ. ಚೈತ್ರಾ ಕುಂದಾಪುರ ಅವರಂತೂ ಬಿಕ್ಕಿ ಬಿಕ್ಕಿ ಅತ್ತಿದ್ದಾರೆ. ಎಲಿಮಿನೇಟ್ ಆದ ಬಳಿಕ ಯಾರಿಗೂ ಗುಡ್‌ಬೈ ಹೇಳಲು ಅನುಷಾ ರೈ ಅವರಿಗೆ ಅವಕಾಶ ಸಿಗಲಿಲ್ಲ. ಹಾಗಾಗಿ ಎಲ್ಲರಿಗೂ ತುಂಬ ಬೇಸರ ಆಯಿತು. ಅನುಷಾ ಜೊತೆ ಜಾಸ್ತಿ ನಂಟು ಹೊಂದಿದ್ದ ಭವ್ಯಾ ಅವರು ಕಣ್ಣೀರು ಹಾಕಿದ್ದಾರೆ.

ಬಿಗ್ ಬಾಸ್ ಶೋಗೆ ಬರುವುದಕ್ಕೂ ಮುನ್ನ ಧರ್ಮ ಕೀರ್ತಿರಾಜ್ ಮತ್ತು ಅನುಷಾ ರೈ ಅವರು ಪರಿಚಿತರಾಗಿದ್ದರು. ಒಟ್ಟಿಗೆ ಸಿನಿಮಾಗಳಲ್ಲಿ ಕೆಲಸ ಮಾಡಿದ್ದರು. ಬಿಗ್ ಬಾಸ್ ಶೋಗೆ ಬರುವಾಗ ಅವರು ಜೋಡಿಯಾಗಿ ಬಂದಿದ್ದರು. ಮನೆಯ ಒಳಗೆ ಕೂಡ ಒಟ್ಟಿಗೆ ಇರುತ್ತಿದ್ದರು. ಕಾಕತಾಳೀಯ ಎಂದರೆ ಎಲಿಮಿನೇಷನ್ ಪ್ರಕ್ರಿಯೆಯಲ್ಲೂ ಅವರು ಜೊತೆಯಲ್ಲಿ ಕೊನೇ ಹಂತ ತಲುಪಿದ್ದರು.

ಧರ್ಮ ಮತ್ತು ಅನುಷಾ ಇಬ್ಬರೂ ಎಲಿಮಿನೇಟ್ ಆಗಬಹುದು ಅಥವಾ ಒಬ್ಬರೇ ಎಲಿಮಿನೇಟ್ ಆಗಬಹುದು ಎಂದು ಸುದೀಪ್ ಹೇಳಿದಾಗ ಅವರಿಬ್ಬರನ್ನು ಇಷ್ಟಪಡುವ ಪ್ರೇಕ್ಷಕರ ಎದೆಯಲ್ಲಿ ಢವ ಢವ ಶುರುವಾಗಿತ್ತು. ಅಂತಿಮವಾಗಿ ಅನುಷಾ ರೈ ಅವರು ಔಟ್ ಆಗಬೇಕಾಯಿತು. ಧರ್ಮ ಕೀರ್ತಿರಾಜ್ ಅವರು ಅಳುತ್ತಾ ವಾಪಸ್ ಬಿಗ್ ಬಾಸ್ ಮನೆಯೊಳಗೆ ಹೋಗಿದ್ದಾರೆ.

ಎಲಿಮಿನೇಟ್ ಆದ ಬಳಿಕ ವೇದಿಕೆಗೆ ಬಂದ ಅನುಷಾ ರೈ ಅವರಿಗೆ ಸುದೀಪ್ ಕೆಲವು ಪ್ರಶ್ನೆಗಳನ್ನು ಕೇಳಿದ್ದಾರೆ. ನಿಮ್ಮ ಪ್ರಕಾರ ಟಾಪ್ 5 ಯಾರು ಆಗಿರುತ್ತಾರೆ ಎಂದು ಕೇಳಿದ್ದಕ್ಕೆ ತ್ರಿವಿಕ್ರಮ್, ಧರ್ಮ ಕೀರ್ತಿರಾಜ್, ಭವ್ಯಾ ಗೌಡ, ಚೈತ್ರಾ ಕುಂದಾಪುರ ಹಾಗೂ ಉಗ್ರಂ ಮಂಜು ಅವರ ಹೆಸರುಗಳನ್ನು ಅನುಷಾ ಹೇಳಿದ್ದಾರೆ. ‘ಇಷ್ಟು ಬೇಗ ನಾನು ಹೊರಗೆ ಬಂದಿದ್ದಕ್ಕೆ ಬೇಜಾರು ಆಗಿದೆ. ನಾನು ಎಮೋಷನಲ್. ಅದರಿಂದ ನಾನು ಆಟದಲ್ಲಿ ಹಿಂದೇಟು ಹಾಕಿದೆ. ಬೇರೆಯವರ ಮನಸ್ಸಿಗೆ ನೋವಾಯಿತು ಅಂತ ನಾನು ಸುಮ್ಮನಾಗಿದ್ದು ನನಗೆ ಹಿನ್ನಡೆ ಆಯಿತು’ ಎಂದು ಅನುಷಾ ರೈ ಹೇಳಿದ್ದಾರೆ.



# ‘ಕಾಂತಾರ ಚಾಪ್ಟರ್-1’

## ಸಿನಿಮಾ ಬಿಡುಗಡೆಗೆ ಡೇಟ್ ಫಿಕ್ಸ್

ರಾಷ್ಟ್ರ ಪ್ರಶಸ್ತಿ ವಿಜೇತ ರಿಷಬ್ ಶೆಟ್ಟಿ ನಟಿಸಿ, ನಿರ್ದೇಶನ ಮಾಡುತ್ತಿರುವ ‘ಕಾಂತಾರ ಚಾಪ್ಟರ್-1’ ಸಿನಿಮಾ ಬಿಡುಗಡೆಗೆ ಕೊನೆಗೂ ದಿನಾಂಕ ಫಿಕ್ಸ್ ಆಗಿದೆ.

2025ರ ಅಕ್ಟೋಬರ್ 2ರಂದು ಸಿನಿಮಾ ಬಿಡುಗಡೆ ಮಾಡುವುದಾಗಿ ಹೊಂಬಾಳೆ ಫಿಲ್ಮ್ಸ್ ಘೋಷಣೆ ಮಾಡಿದೆ. ಏಕಕಾಲಕ್ಕೆ ಕನ್ನಡ, ಹಿಂದಿ, ಇಂಗ್ಲಿಷ್ ಹಾಗೂ ತೆಲುಗು ಭಾಷೆಗಳಲ್ಲಿ ಸಿನಿಮಾ ತೆರೆಯ ಮೇಲೆ ಬರಲಿದೆ ಎಂದು ಹೊಂಬಾಳೆ ಸಂಸ್ಥೆ ತನ್ನ ಎಕ್ಸ್ ಖಾತೆಯಲ್ಲಿ ಮಾಹಿತಿ ಹಂಚಿಕೊಂಡಿದೆ.

ಈಗಾಗಲೇ ಕೇವಲ ಕಾಂತಾರ ಚಾಪ್ಟರ್ 1 ಸಿನಿಮಾದ ಪೋಸ್ಟರ್ ನೋಡಿದ ಅಭಿಮಾನಿಗಳು ಚಿತ್ರದ ಮೇಲೆ ಭಾರೀ ನಿರೀಕ್ಷೆ ಇಟ್ಟುಕೊಂಡಿದ್ದಾರೆ. ಈ ಕಾಂತಾರ ಚಾಪ್ಟರ್ 1 ಸಿನಿಮಾ ಏಳು ಭಾಷೆಯಲ್ಲಿ ಬಿಡುಗಡೆಯಾಗಲಿದೆ. ಕನ್ನಡ ಸೇರಿ, ತಮಿಳು, ತೆಲುಗು, ಹಿಂದಿ, ಮಲಯಾಳಂ, ಬೆಂಗಾಳಿ ಹಾಗೂ ಇಂಗ್ಲೀಷ್ ನಲ್ಲೂ ರಿಲೀಸ್ ಮಾಡುವ ನಿರ್ಧಾರವಾಗಿದೆ.

‘ಕಾಂತಾರ’ ಸಿನಿಮಾ ಸಕ್ಸಸ್ ನಂತರ ‘ಕಾಂತಾರ ಚಾಪ್ಟರ್ 1’ ಕೂಡ ಉತ್ತಮ ಕಥೆಯೊಂದಿಗೆ ಅದ್ದೂರಿಯಾಗಿ ತರಲು ಈಗಾಗಲೇ ಚಿತ್ರತಂಡ ಚಿತ್ರೀಕರಣದಲ್ಲಿ ತೊಡಗಿದೆ. ಇತ್ತೀಚೆಗೆ ಮಳೆಯ ಅವಾಂತರದಿಂದ ‘ಕಾಂತಾರ 1’ ಸಿನಿಮಾದ ಚಿತ್ರೀಕರಣಕ್ಕೆ ಬ್ರೇಕ್ ಸಹ ಕೊಟ್ಟಿದ್ದರು. ಮಳೆ ಕಮ್ಮಿಯಾದ ಹಿನ್ನೆಲೆ ಮತ್ತೆ ಶೂಟಿಂಗ್ ಭರದಿಂದ ನಡೆಯುತ್ತಿದೆ.

ಅಂದಹಾಗೆ, ‘ಕಾಂತಾರ ಚಾಪ್ಟರ್ 1’ ಸಿನಿಮಾದ ರಿಷಬ್ ಫಸ್ಟ್ ಲುಕ್‌ಗೆ ಅಭಿಮಾನಿಗಳಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿತ್ತು. ರಕ್ತಸಿಕ್ತ ಅವತಾರದಲ್ಲಿ ರಿಷಬ್ ಮಿಂಚಿದ್ದರು. ಹಾಗಾಗಿ ಈ ಸಿನಿಮಾದ ಮೇಲೆ ಅಭಿಮಾನಿಗಳು ಭಾರಿ ನಿರೀಕ್ಷೆ ಇಟ್ಟುಕೊಂಡಿದ್ದಾರೆ.




## ಮಿತಿಮೀರಿ ನಡೆದುಕೊಂಡ ಶೋಭಾ ಶೆಟ್ಟಿಗೆ ವೇದಿಕೆ ಮೇಲೆ ಸುದೀಪ್ ಕ್ಲಾಸ್

# ತೆಲುಗು ಬಿಗ್ ಬಾಸ್ ಕಾದು



‘ಬಿಗ್ ಬಾಸ್ ಕನ್ನಡ ಸೀಸನ್ 11’ 50ನೇ ದಿನಕ್ಕೆ ಕಾಲಿಟ್ಟಿದೆ. ಹೀಗಿರುವಾಗಲೇ ಎರಡು ವೈಲ್ಡ್ ಕಾರ್ಡ್ ಎಂಟ್ರಿಗಳನ್ನು ಕರೆಸಲಾಗಿದೆ. ರಿಯಾಲಿಟಿ ಶೋಗಳ ಮೂಲಕ ಫೇಮಸ್ ಆದ ರಜತ್ ಹಾಗೂ ತೆಲುಗು ಬಿಗ್ ಬಾಸ್ ನಲ್ಲಿ ಸ್ಪರ್ಧಿಸಿದ ಅನುಭವ ಇರುವ ಶೋಭಾ ಶೆಟ್ಟಿ ದೊಡ್ಮನೆಗೆ ಎಂಟ್ರಿ ಪಡೆದಿದ್ದಾರೆ. ವೇದಿಕೆ ಏರಿದಾಗ ಸುದೀಪ್ ಅವರ ಬಗ್ಗೆ ಶೋಭಾ ಮೆಚ್ಚುಗೆ ವ್ಯಕ್ತಪಡಿಸಿದರು. ಸಲಿಗೆ ಪಡೆಯಲು ಪ್ರಯತ್ನಿಸಿದ ಅವರಿಗೆ ಸುದೀಪ್ ಕ್ಲಾಸ್ ತೆಗೆದುಕೊಂಡಿದ್ದಾರೆ.

ಶೋಭಾ ಶೆಟ್ಟಿ ತೆಲುಗು ಬಿಗ್ ಬಾಸ್‌ನಲ್ಲಿ ಈ ಮೊದಲು ಸ್ಪರ್ಧಿಸಿದ್ದರು. ಅಲ್ಲಿ ಆ?ಯಂಕರ್ ಅಕ್ಕಿನೇನಿ ನಾಗಾರ್ಜುನ. ಅವರು ನಿರೂಪಣೆಯನ್ನು ಚೆನ್ನಾಗಿಯೇ ಮಾಡುತ್ತಾರೆ. ಆದರೆ, ಸುದೀಪ್ ರೀತಿ ಖಡಕ್ ಆಗಿ ಅವರು ನಿರೂಪಣೆ ಮಾಡಿದ್ದು ಕಡಿಮೆ. ಹೀಗಾಗಿ, ಏನೇ ಮಾತನಾಡಿದರೂ ನಡೆಯುತ್ತದೆ ಎನ್ನುವ ಭಾವನೆ ಅಲ್ಲಿನ ಸ್ಪರ್ಧಿಗಳಿಗೆ ಮೂಡಿರುತ್ತದೆ. ಈಗ ಶೋಭಾ ಶೆಟ್ಟಿ ಅವರು ಸುದೀಪ್ ಎದುರು ಚಿಲ್ ಆಗಿ ಮಾತನಾಡಿಕೊಂಡಿದ್ದರು. ಆದರೆ, ಅವರು ಯಾವಾಗ ಲಯ ತಪ್ಪಿದರು ಎಂಬುದು ಗೊತ್ತಾಯಿತೋ ಆಗ ಸುದೀಪ್ ಕ್ಲಾಸ್ ತೆಗೆದುಕೊಂಡರು. ಇದರ ಬಿಸಿ ಶೋಭಾಗೆ ತಟ್ಟಿದೆ. ‘ನಿಮ್ಮ ಫೇವರಿಟ್ ಸ್ಪರ್ಧಿ ಯಾರು’ ಎಂದು ಸುದೀಪ್ ಕೇಳಿದರು. ‘ನಾನು ಫೇವರಿಟ್ ಸ್ಪರ್ಧಿ ಅಂತ ಹೇಳೋಕೆ ಆಗಲ್ಲ. ನಾವು ಹೊರಗೆ ನೋಡೋದೇ ಬೇರೆ ಇರುತ್ತದೆ..’ ಎಂದು ಏನನ್ನೋ ಹೇಳಲು ಹೊರಟರು ಶೋಭಾ. ಆಗ ಸುದೀಪ್ ನಗುತ್ತಲೇ ಶೋಭಾಗೆ ಕ್ಲಾಸ್ ತೆಗೆದುಕೊಂಡರು. ‘ನಿಮ್ಮ ಪ್ರಶ್ನೆಯನ್ನು ನೀವೆ ಆಯ್ಕೆ ಮಾಡಿಕೊಳ್ಳಬೇಡಿ. ಇದು ತೆಲುಗು ಬಿಗ್ ಬಾಸ್ ಕಾದು. ಪಕ್ಕಾ ಕನ್ನಡ. ಪ್ರಶ್ನೆ ನಮ್ಮದು, ಉತ್ತರ ಮಾತ್ರ ನಿಮ್ಮದು’ ಎಂದರು ಸುದೀಪ್. ‘10 ವರ್ಷ ಬಿಗ್ ಬಾಸ್ ನಡೆಸಿಕೊಟ್ಟಿದ್ದೀನಿ. ಇದು 11ನೇ ವರ್ಷ. ಹಲವರು ರೀತಿಯ ಜನರನ್ನು ನೋಡಿದ್ದೇನೆ’ ಎಂದರು ಸುದೀಪ್. ‘ಹೋಗಲಿ ಬಿಡಿ ನಿಮಗೆ ಟಫ್ ಸ್ಪರ್ಧಿ ಯಾರು’ ಎಂದು ಕೇಳಿದರು. ಇದಕ್ಕೆ ‘ಯಾರೂ ಇಲ್ಲ’ ಎಂಬ ಉತ್ತರ ಶೋಭಾ ಕಡೆಯಿಂದ ಬಂತು. ‘ಹಾಗಿದ್ರೆ ಇಲ್ಲೇ ಕಪ್ ಹಿಡ್ಕೊಂಡು ಹೋಗಿ ಬಿಡಿ’ ಎಂದು ಸುದೀಪ್ ಅವರು ಕಾಲೆಳೆದರು.

## ಮೊದಲ ಟೆಸ್ಟ್‌ಗೆ ಇಬ್ಬರು ಅಲಭ್ಯ

# ಜಸ್‌ಪ್ರೀತ್ ಬುಮ್ರಾ ಕ್ಯಾಪ್ಟನ್

ಭಾರತ ಮತ್ತು ಆಸ್ಟ್ರೇಲಿಯಾ ನಡುವಣ ಬಾರ್ಡರ್ -ಗವಾಸ್ಕರ್ ಟೆಸ್ಟ್ ಸರಣಿಗೆ ದಿನಗಣನೆ ಶುರುವಾಗಿದೆ. ಶುಕ್ರವಾರದಿಂದ (ನ.22) ಆರಂಭವಾಗಲಿರುವ ಈ ಸರಣಿಯ ಮೊದಲ ಪಂದ್ಯಕ್ಕೆ ಟೀಮ್ ಇಂಡಿಯಾ ನಾಯಕ ರೋಹಿತ್ ಶರ್ಮಾ ಅಲಭ್ಯರಾಗಿದ್ದಾರೆ. 2ನೇ ಮಗುವಿನ ತಂದೆಯಾದ ಖುಷಿಯಲ್ಲಿರುವ ಹಿಟ್‌ಮ್ಯಾನ್ ದ್ವಿತೀಯ ಪಂದ್ಯದ ವೇಳೆ ಟೀಮ್ ಇಂಡಿಯಾವನ್ನು ಕೂಡಿಕೊಳ್ಳಲಿದ್ದಾರೆ.

ಇನ್ನು ಪರ್ತ್ ಟೆಸ್ಟ್‌ಗೆ ಟೀಮ್ ಇಂಡಿಯಾದ ಯುವ ದಾಂಡಿಗ ಶುಭ್‌ಮನ್ ಗಿಲ್ ಕೂಡ ಅಲಭ್ಯರಾಗಿದ್ದಾರೆ. ಫೀಲ್ಡಿಂಗ್ ಅಭ್ಯಾಸದ ವೇಳೆ ಗಿಲ್ ಅವರ ಎಡಗೈ ಹೆಬ್ಬೆರಳು ಮುರಿತಕ್ಕೊಳಗಾಗಿದ್ದು, ವೈದ್ಯಕೀಯ ಪರಿಶೀಲನೆ ಬಳಿಕ ಅವರಿಗೆ ವಿಶ್ರಾಂತಿ ಸೂಚಿಸಲಾಗಿದೆ. ಹೀಗಾಗಿ ಮೊದಲ ಟೆಸ್ಟ್ ಪಂದ್ಯದಿಂದ ಗಿಲ್ ಕೂಡ ಹೊರಗುಳಿಯಲಿದ್ದಾರೆ.

ಅತ್ತ ನಾಯಕ ರೋಹಿತ್ ಶರ್ಮಾ ಅವರ ಅನುಪಸ್ಥಿತಿಯಲ್ಲಿ ಟೀಮ್ ಇಂಡಿಯಾವನ್ನು ಉಪನಾಯಕ ಜಸ್‌ಪ್ರೀತ್ ಬುಮ್ರಾ ಮುನ್ನಡೆಸಲಿದ್ದಾರೆ. ಈ ಹಿಂದೆ ಇಂಗ್ಲೆಂಡ್ ವಿರುದ್ಧದ ಏಕೈಕ ಟೆಸ್ಟ್ ಪಂದ್ಯದಲ್ಲಿ ಬುಮ್ರಾ ನಾಯಕರಾಗಿ ಕಾಣಿಸಿಕೊಂಡಿದ್ದರು. ಇದೀಗ ಆಸ್ಟ್ರೇಲಿಯಾ ವಿರುದ್ಧದ



ಮೊದಲ ಟೆಸ್ಟ್‌ನಲ್ಲಿ ಭಾರತ ತಂಡವನ್ನು ಮುನ್ನಡೆಸಲು ಟೀಮ್ ಇಂಡಿಯಾ ವೇಗಿ ಸಜ್ಜಾಗಿದ್ದಾರೆ.

ಇನ್ನು ಭಾರತ ಮತ್ತು ಆಸ್ಟ್ರೇಲಿಯಾ ನಡುವಣ ಈ ಸರಣಿಯಲ್ಲಿ ಒಟ್ಟು 5 ಪಂದ್ಯಗಳನ್ನಾಡುತ್ತಿದೆ. ಅಡಿಲೇಡ್‌ನಲ್ಲಿ ನಡೆಯಲಿರುವ 2ನೇ ಟೆಸ್ಟ್ ಪಂದ್ಯಕ್ಕೂ ಮುನ್ನ ರೋಹಿತ್ ಶರ್ಮಾ ಭಾರತ ತಂಡವನ್ನು ಕೂಡಿಕೊಳ್ಳಲಿದ್ದಾರೆ. ಹೀಗಾಗಿ ಉಳಿದ 4 ಪಂದ್ಯಗಳಲ್ಲಿ ಟೀಮ್ ಇಂಡಿಯಾವನ್ನು ಹಿಟ್‌ಮ್ಯಾನ್ ಮುನ್ನಡೆಸುವುದು ಖಚಿತ. ಇನ್ನು ಈ ಸರಣಿಗಾಗಿ ಆಯ್ಕೆಯಾದ ಭಾರತ ತಂಡ ಈ ಕೆಳಗಿನಂತಿದೆ...

ಭಾರತ ಟೆಸ್ಟ್ ತಂಡ: ರೋಹಿತ್ ಶರ್ಮಾ (ನಾಯಕ), ಜಸ್‌ಪ್ರೀತ್ ಬುಮ್ರಾ (ಉಪನಾಯಕ), ಯಶಸ್ವಿ ಜೈಸ್ವಾಲ್, ಅಭಿಮನ್ಯು ಈಶ್ವರನ್, ಶುಭ್ ಮನ್ ಗಿಲ್ , ವಿರಾಟ್ ಕೊಹ್ಲಿ , ಕೆಎಲ್ ರಾಹುಲ್, ರಿಷಭ್ ಪಂತ್ (ವಿಕೆಟ್ ಕೀಪರ್), ಸರ್ಫರಾಝ್ ಖಾನ್, ಧ್ರುವ್ ಜುರೆಲ್ (ವಿಕೆಟ್ ಕೀಪರ್), ರವಿಚಂದ್ರನ್ ಅಶ್ವಿನ್, ರವೀಂದ್ರ ಜಡೇಜಾ , ಮೊಹಮ್ಮದ್ ಸಿರಾಜ್ , ಆಕಾಶ್ ದೀಪ್, ಪ್ರಸಿದ್ಧ್ ಕೃಷ್ಣ, ಹರ್ಷಿತ್ ರಾಣ, ನಿತೀಶ್ ಕುಮಾರ್ ರೆಡ್ಡಿ, ವಾಷಿಂಗ್ಟನ್ ಸುಂದರ್.

ನವೆಂಬರ್ 22 ರಿಂದ ಮೊದಲ ಟೆಸ್ಟ್ ಪಂದ್ಯ. ಡಿಸೆಂಬರ್ 6 ರಿಂದ ಎರಡನೇ ಟೆಸ್ಟ್ ಪಂದ್ಯ. ಡಿಸೆಂಬರ್ 14 ರಿಂದ ಮೂರನೇ ಟೆಸ್ಟ್ ಪಂದ್ಯ. ಡಿಸೆಂಬರ್ 26 ರಿಂದ ನಾಲ್ಕನೇ ಟೆಸ್ಟ್ ಪಂದ್ಯ. ಜನವರಿ 3 ರಿಂದ ಐದನೇ ಟೆಸ್ಟ್ ಪಂದ್ಯ.

# ಐಪಿಎಲ್ ಹರಾಜಲ್ಲಿ 13ರ ಬಾಲಕ!

ಕೇವಲ 13ನೇ ವಯಸ್ಸಿನ ವೈಭವ್ ಸೂರ್ಯವಂಶಿ ಐಪಿಎಲ್ ಹರಾಜು ಪಟ್ಟಿಯಲ್ಲಿ ಸ್ಥಾನ ಪಡೆದಿದ್ದಾರೆ. ಯಾವುದಾದರೂ ಫ್ರಾಂಚೈಸಿ ಸೂರ್ಯವಂಶಿಯನ್ನು ಖರೀದಿಸಿದರೆ ಅತ್ಯಂತ ಕಿರಿಯ ಆಟಗಾರ ಎಂಬ ಇತಿಹಾಸ ಸೃಷ್ಟಿಯಾಗಲಿದೆ.

ಐಪಿಎಲ್ ಮೆಗಾ ಹರಾಜಿಗಾಗಿ 574 ಆಟಗಾರರ ಪಟ್ಟಿ ಅಂತಿಮಗೊಂಡಿದೆ. ಇದರಲ್ಲಿ 366 ಭಾರತೀಯ ಆಟಗಾರರಿದ್ದಾರೆ. ಇವರಲ್ಲಿ ವೈಭವ್ ಸೂರ್ಯವಂಶಿ ಕೂಡ ಒಬ್ಬರು. ಬಿಹಾರ ಮೂಲದ ಸೂರ್ಯವಂಶಿ ಕ್ರಿಕೆಟ್‌ನಲ್ಲಿ ಉತ್ತಮ ಸಾಧನೆ ಮಾಡಿದ್ದಾರೆ. ಅದರ ಫಲವಾಗಿಯೇ ಐಪಿಎಲ್ ಹರಾಜು ಪಟ್ಟಿಯಲ್ಲಿ ಸ್ಥಾನ ಗಿಟ್ಟಿಸಿಕೊಂಡಿದ್ದಾರೆ.

5ನೇ ವಯಸ್ಸಿನಲ್ಲೇ ಕ್ರಿಕೆಟ್ ಅಭ್ಯಾಸ ಶುರು ಮಾಡಿದ್ದ ವೈಭವ್, 12ನೇ ವಯಸ್ಸಿಗೆ ಪ್ರಥಮ ದರ್ಜೆ ಪಂದ್ಯವಾಡಿದ್ದರು. ಈಗಾಗಲೇ ರಣಜಿ ಟ್ರೋಫಿ, ಹೇಮಂತ್ ಟ್ರೋಫಿ, ಕೂಚ್ ಬೇಹಾರ್ ಟ್ರೋಫಿ ಮತ್ತು ವಿನೂ ಮಂಕಡ್ ಟೂರ್ನಿಗಳಲ್ಲಿ ಆಡಿದ್ದಾರೆ. 13ನೇ ವಯಸ್ಸಿನೊಳಗೆ ಭಾರತ ಅಂಡರ್-19 ತಂಡದಲ್ಲೂ ಕಾಣಿಸಿಕೊಂಡಿದ್ದಾರೆ.

2023 ರಲ್ಲಿ ರಣಜಿ ಟೂರ್ನಿಗೆ ಪಾದಾರ್ಪಣೆ ಮಾಡಿದ್ದ ಸೂರ್ಯವಂಶಿ, ಆ ಬಳಿಕ ಬಿಹಾರ ಕ್ರಿಕೆಟ್ ಸಂಸ್ಥೆ ಆಯೋಜಿಸಿದ್ದ ರಣಧೀರ್ ವರ್ಮಾ ಅಂಡರ್



19 ಏಕದಿನ ಟೂರ್ನಿಯಲ್ಲಿ ಕಣಕ್ಕಿಳಿದಿದ್ದರು. ಈ ಪಂದ್ಯದಲ್ಲಿ ತ್ರಿಶತಕ ಸಿಡಿಸುವ ಮೂಲಕ ಈ ಸಾಧನೆ ಮಾಡಿದ ಮೊದಲ ಭಾರತೀಯ ಎಂಬ ಖ್ಯಾತಿಗೆ ಪಾತ್ರರಾಗಿದ್ದರು. ಕಳೆದ ತಿಂಗಳು ಆಸ್ಟ್ರೇಲಿಯಾದ ಅಂಡರ್-19 ತಂಡದ ವಿರುದ್ಧ 64 ಎಸೆತಗಳಲ್ಲಿ 104 ರನ್ ಸಿಡಿಸಿ ಮಿಂಚಿದ್ದರು. ಈ ವೇಳೆ ಅವರು ಕೇವಲ 58 ಎಸೆತಗಳಲ್ಲಿ ಶತಕ ಪೂರೈಸಿ, ಅಂಡರ್-19 ಟೆಸ್ಟ್‌ನಲ್ಲಿ ಅತಿ ವೇಗದ ಶತಕ ಸಿಡಿಸಿದ ಭಾರತೀಯ ಬ್ಯಾಟ್ಸ್‌ಮನ್ ಆಗಿ ಹೊರಹೊಮ್ಮಿದ್ದರು.

ಸೂರ್ಯವಂಶಿ ಈವರೆಗೆ ಒಟ್ಟು 49 ಶತಕಗಳನ್ನು ಸಿಡಿಸಿದ್ದಾರೆ. ಇದರಿಂದಲೇ ವೈಭವ್ ಹೆಸರು ಹರಾಜು ಪಟ್ಟಿಯಲ್ಲಿ ಕಾಣಿಸಿಕೊಂಡಿದೆ. ವೈಭವ್ ಹೆಸರು ಯಾವುದಾದರೂ ತಂಡದಲ್ಲಿ ಕಾಣಲಿದೆಯೇ ಎಂಬುದು ನ.24 ಅಥವಾ 25 ರಂದು ತಿಳಿಯಲಿದೆ.

## ಅರ್ಹರಿಗೆ ಮಾತ್ರ ಸಿಗತ್ತೆ ಅಂತ ಸಿಎಂ ಸ್ಪಷ್ಟನೆ

# ರಾತ್ರೋ ರಾತ್ರಿ ಬದಲಾಗ್ತಿದ್ಯಾ ಎಪಿಎಲ್, ಬಿಪಿಎಲ್ ಕಾರ್ಡ್?

**ಬೆಂಗಳೂರು:** ರಾಜ್ಯದಲ್ಲಿ ಎಪಿಎಲ್-ಬಿಪಿಎಲ್ ಪಡಿತರ ಕಾರ್ಡ್ ವಿವಾದ ಜೋರಾಗ್ತಿದೆ. ರಾತ್ರೋ ರಾತ್ರಿ ಸಾವಿರಾರು ರೇಷನ್ ಕಾರ್ಡ್‌ಗಳನ್ನ ಬಿಪಿಎಲ್ ನಿಂದ ಎಪಿಎಲ್‌ಗೆ ಬದಲಾವಣೆ ಮಾಡಲಾಗ್ತಿದೆ ಎಂಬ ಆರೋಪ ಕೇಳಿಬಂದಿದೆ.

ಕೆಲವರಂತೂ ರೇಷನ್ ತೆಗೆದುಕೊಳ್ಳಲು ನ್ಯಾಯ ಬೆಲೆ ಅಂಗಡಿಗೆ ಹೋದಾಗ ತಮ್ಮ ಕಾರ್ಡ್‌ಗಳು ಬದಲಾಗಿರೋದು ಬೆಳಕಿಗೆ ಬಂದಿದೆ. ಇದರಿಂದಾಗಿ, ರಾಜ್ಯದ ರೇಷನ್ ಕಾರ್ಡ್‌ದಾರರಲ್ಲಿ ಆತಂಕ ಹೆಚ್ಚಾಗಿದೆ. ಇದರ ನಡುವೆ ಕಾರ್ಡ್‌ಗಳನ್ನು ರದ್ದು ಮಾಡಲಾಗ್ತಿದೆ ಅಂತ ಸರ್ಕಾರದ ವಿರುದ್ಧ ವಿಪಕ್ಷ ನಾಯಕರು ಮುಗಿಬಿದ್ದಿದ್ದಾರೆ.

ಕೇಂದ್ರ ಸರ್ಕಾರ 5 ಕೆಜಿ ಧಾನ್ಯ ಕೊಡ್ತಿದ್ದರೂ ರಾಜ್ಯ ಸರ್ಕಾರ ಕಾರ್ಡ್ ಕಡಿತ ಮಾಡ್ತಿದೆ. ರಾಜ್ಯ ಸರ್ಕಾರ ದಿವಾಳಿ ಆಗ್ತಿದೆ ಅಂತ ಕೇಂದ್ರ ಸಚಿವ ಜೋಶಿ ಟೀಕಿಸಿದ್ದಾರೆ. ಕುಮಾರಸ್ವಾಮಿ ಮಾತಾಡಿ, ಗ್ಯಾರಂಟಿ ಸ್ಕೀಮ್‌ನಿಂದ ಸರ್ಕಾರಕ್ಕೆ ಏನೂ ಹೊರೆ ಇಲ್ಲ. ತೆರಿಗೆ ಹೆಚ್ಚಿಗೆ ಮಾಡಿ ಸಂಗ್ರಹ ಮಾಡಿರುವ ಹಣ ಏನಾಯ್ತು..? ಅಂತ ಪ್ರಶ್ನಿಸಿದ್ದಾರೆ.



ವಿಪಕ್ಷ ನಾಯಕ ಅಶೋಕ್ ಕೂಡ, ಕಾರ್ಡ್ ರದ್ದು ಮಾಡ್ತಿರೋ ಕಾಂಗ್ರೆಸ್ ಸರ್ಕಾರದ 6ನೇ ಗ್ಯಾರಂಟಿ ಅಂತ ವ್ಯಂಗ್ಯವಾಡಿದ್ದಾರೆ. ಬಿಜೆಪಿಗರ ಈ ಟೀಕೆ-ಟಿಪ್ಪಣಿ, ವಾಗ್ದಾಳಿಗೆ ಸಿಎಂ ಸಿದ್ದರಾಮಯ್ಯ ತಿರುಗೇಟು ಕೊಟ್ಟಿದ್ದಾರೆ. ಎಪಿಎಲ್ ರದ್ದು ಮಾಡಿಲ್ಲ. ಅನರ್ಹರನ್ನು ತೆಗೆದು ಹಾಕ್ತೇವೆ. ಟ್ಯಾಕ್ಸ್ ಕಟ್ಟೋವ್ರು, ಸರ್ಕಾರಿ ನೌಕರರಿಗೆ ಬಿಪಿಎಲ್ ಇದ್ದರೆ ಎಪಿಎಲ್ ಮಾಡ್ತೇವೆ. ಗೃಹಲಕ್ಷ್ಮಿ ಯೋಜನೆಗೆ ಬೇರೆಯದ್ದೇ ಮಾನದಂಡಗಳಿವೆ ಅಂತ ಸಿಎಂ ಸಿದ್ದರಾಮಯ್ಯ ಸ್ಪಷ್ಟಪಡಿಸಿದ್ದಾರೆ.

### ಅಧಿಕಾರಿಗಳ ಯಡವಟ್ಟು

**ಎಪಿಎಲ್-ಬಿಪಿಎಲ್ ಕಾರ್ಡ್ ಪರಿಷ್ಕರಣೆಯಲ್ಲಿ ಆಹಾರ ಇಲಾಖೆ ಅಧಿಕಾರಿಗಳ ಎಡವಟ್ಟು ಮಾಡಿದ್ದಾರೆ. ಬೆಂಗಳೂರಿನ ಮಹಾಲಕ್ಷ್ಮಿ ಲೇಔಟ್‌ನ ಜೈಮಾರುತಿ ನಗರದ ಬಡ ಕುಟುಂಬದ ಬಿಪಿಎಲ್ ಕಾರ್ಡನ್ನು ಎಪಿಎಲ್‌ಗೆ ಬದಲಾಯಿಸಿದ್ದಾರೆ. ಇವರು ಐಟಿ ಪಾವತಿದಾರರು ಅಂತ ಆಹಾರ ನಿರೀಕ್ಷಕರು ನಮೂದಿಸಿದ್ದಾರೆ. ಆದರೆ, ರೇಷನ್ ತೆಗೆದುಕೊಳ್ಳಲು ಹೋದಾಗ ತಮ್ಮ ಬಿಪಿಎಲ್ ಕಾರ್ಡ್ ಎಪಿಎಲ್ ಆಗಿರೋದು ಬೆಳಕಿಗೆ ಬಂದಿದೆ. 2 ತಿಂಗಳಿಂದ ಅಕ್ಕಿಯಿಲ್ಲದೆ ಈ ಬಡಕುಟುಂಬ ಪರದಾಡ್ತಿದೆ.**

**ಜೊತೆಗೆ, ಆರೋಗ್ಯ ಸೇವೆ, ಭಾಗ್ಯಲಕ್ಷ್ಮಿ ಬಾಂಡ್ ಸೇವೆ ಕೂಡ ಸಿಗ್ತಿಲ್ಲ. ಈ ಮಧ್ಯೆ, ಹಾಸನ ಜಿಲ್ಲೆಯಲ್ಲಿ ವಿವಿಧ ಕಾರಣಗಳಿಂದ 2,925 ಬಿಪಿಎಲ್ ರೇಷನ್ ಕಾರ್ಡ್‌ಗಳನ್ನ ಎಪಿಎಲ್ ಕಾರ್ಡ್‌ಗಳಾಗಿ ಬದಲಾವಣೆ ಮಾಡಲಾಗಿದೆ ಎಂದು ಸಂಬಂಧಪಟ್ಟ ಅಧಿಕಾರಿಗಳಿಂದ ತಿಳಿದುಬಂದಿದೆ.**

## 70ಕ್ಕೂ ಹೆಚ್ಚು ಮನೆಗಳ ನೆಲಸಮ

**ಬಳ್ಳಾರಿ:** ಬಾಪೂಜಿ ನಗರದ ಬಡಾವಣೆಯಲ್ಲಿ ಸುಮಾರು 70ಕ್ಕೂ ಹೆಚ್ಚು ಮನೆಗಳನ್ನು ರಸ್ತೆ ಅಗಲೀಕರಣದ ನೆಪ ಹೇಳಿ ಯಾವುದೇ ನೋಟಿಸ್ ಕೊಡದೆ ಮಹಾನಗರ ಪಾಲಿಕೆ ತೆರವುಗೊಳಿಸಿದೆ ಎನ್ನುವ ಆರೋಪ ಕೇಳಿ ಬಂದಿದೆ.

ಮನೆ ಕಳೆದುಕೊಂಡವರು ಬಹುತೇಕ ಕೂಲಿ ಕೆಲಸ ಮಾಡಿಕೊಂಡು ಜೀವನ ನಡೆಸುವಂತವರು. ರಸ್ತೆ ಪಕ್ಕದಲ್ಲಿ ಸಣ್ಣಪುಟ್ಟ ಮನೆ ಕಟ್ಟಿಕೊಂಡು ಜೀವನ ಮಾಡುತ್ತಿದ್ದರು. ಈ ಹಿಂದೆ ಇದ್ದ ಬಿಜೆಪಿ ಸರ್ಕಾರ ಇವರಿಗೆ ಮನೆ ಪತ್ರಗಳನ್ನು ಸಹ ನೀಡಿದೆ. ಹೀಗಿದ್ದಾಗ ಏಕಾಏಕಿ ಯಾವುದೇ ನೋಟಿಸ್ ಕೊಡದೆ ಮನೆಗಳನ್ನು ತೆರವು ಮಾಡಲಾಗಿದೆ ಎಂದು ಜನ ಆರೋಪಿಸಿದ್ದಾರೆ.

ಮನೆ ಕಳೆದುಕೊಂಡವರಲ್ಲಿ ಬಹಳಷ್ಟು ಜನ ಅಂಗವಿಕಲರು, ವಯೋ ವೃದ್ಧರು ಇದ್ದಾರೆ. ಈ ಬಗ್ಗೆ ಜಿಲ್ಲಾಧಿಕಾರಿಗಳಿಗೆ, ಪಾಲಿಕೆ ಆಯುಕ್ತರಿಗೆ ಜನ ಮನವಿ ಕೂಡ ಸಲ್ಲಿಕೆ ಮಾಡಿದ್ದಾರೆ. ಈ ವರೆಗೂ ಯಾವೊಬ್ಬ ಅಧಿಕಾರಿಗಳು, ಜನಪ್ರತಿನಿಧಿಗಳು ಸ್ಥಳಕ್ಕೆ ಬೇಟಿ ನೀಡಿಲ್ಲ,



ಜನರ ಸಮಸ್ಯೆಯನ್ನು ಆಲಿಸಿಲ್ಲ. ಇದು ಜನರ ಆಕ್ರೋಶಕ್ಕೆ ಕಾರಣವಾಗಿದೆ. ತಮ್ಮ ಸಮಸ್ಯೆಗೆ ಪರಿಹಾರ ಸಿಗುವವರೆಗೂ ಪ್ರತಿಭಟನೆ ನಿಲ್ಲಿಸುವುದಿಲ್ಲ ಎಂದು ಎಚ್ಚರಿಸಿದ್ದಾರೆ.

ಪಾಲಿಕೆ ಆಯುಕ್ತರನ್ನ ಜನ ಕೇಳಿದಾಗ ನೋಟಿಸ್ ಕೊಟ್ಟಿದ್ದೇವೆ. ಇದು ಸರ್ಕಾರಿ ಜಾಗ, ನೀವು ಅಕ್ರಮವಾಗಿ ವಾಸ ಮಾಡುತ್ತಿದ್ದೀರಿ. ಹೀಗಾಗಿ ತೆರವು ಮಾಡಲಾಗಿದೆ, ನಿಮಗೆ ಬೇರೆ ಕಡೆ ಜಾಗ ಕೊಡುವ ವ್ಯವಸ್ಥೆ ಮಾಡುತ್ತೇವೆ ಎಂದು ಹೇಳಿದ್ದಾರೆ ಎನ್ನಲಾಗಿದೆ.

## ಬೆಂಬಲ ವ್ಯಕ್ತಿಗಳಿಗಾಗಿ ಅರ್ಜಿ

**ಮೈಸೂರು:** 2012 ರ ಪೋಕ್ಸೋ ಕಾಯಿದೆಯ ಅನ್ವಯ ಸಂತ್ರಸ್ತ ಮಕ್ಕಳಿಗೆ ಬೆಂಬಲ ವ್ಯಕ್ತಿಗಳಾಗಿ ಸೇವೆ ಸಲ್ಲಿಸಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅಭ್ಯರ್ಥಿಗಳು ಕನಿಷ್ಠ 03 ವರ್ಷಗಳ ಅನುಭವದೊಂದಿಗೆ ಸಮಾಜ ಕಾರ್ಯ ವಿಷಯದಲ್ಲಿ ಪದವಿಯನ್ನು ಹೊಂದಿರಬೇಕು. ಪ್ರತಿ ಪ್ರಕರಣಕ್ಕೆ ರೂ.3000 ಗಳ ಸಂಭಾವನೆ ನಿಗದಿಗೊಳಿಸಲಾಗಿದ್ದು, ಆಯ್ಕೆಯಾದ ಅಭ್ಯರ್ಥಿಗಳಿಗೆ ಕ್ಷೇತ್ರ ಕಾರ್ಯವನ್ನು ಮಾಡಲು ಮತ್ತು ಅಪರಾಧ ನ್ಯಾಯ ವ್ಯವಸ್ಥೆಯ ಮೂಲಕ ಮಕ್ಕಳು ಮತ್ತು ಅವರ ಕುಟುಂಬಗಳಿಗೆ ಸಹಾಯ ಮಾಡಲು ತರಬೇತಿಯನ್ನು ನೀಡಲಾಗುತ್ತದೆ. ಮಕ್ಕಳ ಆರೈಕೆ ಕೇಂದ್ರದಲ್ಲಿ ಮಕ್ಕಳೊಂದಿಗೆ ಕೆಲಸ ಮಾಡುವ ಅಧಿಕಾರಿಗಳು ಮತ್ತು ಮಕ್ಕಳ ಹಕ್ಕುಗಳ ಕ್ಷೇತ್ರದಲ್ಲಿ ಕೆಲಸ ಮಾಡುವ ಯಾವುದೇ ಸಂಸ್ಥೆ ಕೂಡ ಅರ್ಜಿ ಸಲ್ಲಿಸಬಹುದು.

ಆಸಕ್ತ ಅರ್ಹ ಅಭ್ಯರ್ಥಿಗಳು ಅರ್ಜಿ ನಮೂನೆಯನ್ನು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಯವರ ಕಚೇರಿಯಿಂದ ಪಡೆದು, ಭರ್ತಿ ಮಾಡಿದ ಅರ್ಜಿಗಳನ್ನು ಪ್ರಮಾಣ ಪತ್ರಗಳೊಂದಿಗೆ ವಿಜಯನಗರ 4ನೇ ಹಂತದ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳ ಕಛೇರಿಗೆ ನವೆಂಬರ್ 28 ರ ಸಂಜೆ 5.30 ಗಂಟೆಯೊಳಗೆ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಕಚೇರಿಯ ದೂ.ಸಂ:0821-2543003 ಮತ್ತು ಇ-ಮೇಲ್ dcpumysore@gmail.com ನ್ನು ಸಂಪರ್ಕಿಸಬಹುದು ಎಂದು ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಅವರು ಪ್ರಕಟನೆಯಲ್ಲಿ ತಿಳಿಸಿದ್ದಾರೆ.

Printed, Published & Owned by N.Venugopal Krishna, Printed at DASHAPRAMATHI MUDRANALAYA, No.433/1, Chikkavitalenahalli Village, Thagachagere Post, Kasaba Hobli, Channapatna Taluk, Ramanagar District, Pin-562160. Published at No.15, Ground Floor, 12th Block, 5th Main, Kumara Park (West), Behind BDA Head Office, Bengaluru-560020. Editor: N.Venugopal Krishna, Mobile No.+91 94835 89085, email: sanjemugilu@gmail.com